ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

Monday, the 9th February, 1981/Magha 20, 1902. S.E.

The House met in the Assembly Chamber, Vidhana Soudha, at One of the Clock.

[MR. SPEAKER (SRI. K. H. RANGANATH) in the Chair.]

Obituary Reference

ಅಧ್ಯಕ್ಷರು.—ಸನ್ಮಾನ್ಯ ಸದಸ್ಯರೆ, ಈ ಸದನದ ಸದಸ್ಯರಾದ ತಮಗೆಲ್ಲರಿಗೂ ತಿಳಿದಿರುವ ಪ್ರಕಾರ ಮೊನ್ನೆ ದಿವಸ ಈ ನಮ್ಮ ಬೆಂಗಳೂರು ನಗರದಲ್ಲಿ ಒಂದು ದುರ್ಘಟನೆ ನಡೆದಿದೆ. ಇದರಿಂದ ನಮ್ಮ ಬೆಂಗಳೂರು ನಗರದ ಜನರಷ್ಟೇ ಅಲ್ಲ, ಇಡೀ ಕರ್ನಾಟಕ ರಾಜ್ಯದ ಜನತೆಯೇ ಶೋಕತಪ್ತರಾಗಿದ್ದಾರೆ. ಈ ಸಂದರ್ಭದಲ್ಲಿ ನಾನು ಸಂತಾಪ ಸೂಚನೆಯನ್ನು ಸಭೆಯ ಮುಂದೆ ಮಂಡಿಸಲಿಚ್ಛಿಸುತ್ತೇನೆ. ಅದೇನೆಂದರೆ.—

"ತಾ॥ ೭-೨-೧೯೮೧ನೇ ಶನಿವಾರ ಸಂಜೆ ನಗರದಲ್ಲಿ ನಡೆದ ಬೆಂಕಿ ಅನಾಹುತದಲ್ಲಿ ಅನೇಕ ಸಾವು ನೋವುಗಳುಂಟಾಗಿರುವ ಭೀಕರ ದುರಂತ ನಡೆದಿರುವ ವಿಷಯವನ್ನು ತೀವ್ರ ವಿಷಾದ ವ್ಯಕ್ತಪಡಿಸುವ ಮೂಲಕ ಈ ಸಭೆಗೆ ನಾನು ತಿಳಿಸಲಿಚ್ಛಿಸುತ್ತೇನೆ. ಅನೇಕ ಮಕ್ಕಳ, ಹೆಂಗಸರ ಹಾಗೂ ಇತರರ ಸಾವುನೋವಿನ ಬಗ್ಗೆ ಇಡೀ ನಗರದ ಅಷ್ಟೇಕೆ ರಾಜ್ಯದ ನಾಗರೀಕ ವೃಂದ ದುಃಖತಪ್ತರಾಗಿದ್ದಾರೆ. ಈ ಸಂದರ್ಭದಲ್ಲಿ ಗಾಯಾಳುಗಳಿಗೆ ನಿಷ್ಠೆಯಿಂದ ಸೇವೆ ಸಲ್ಲಿಸಲು ಸ್ವಪ್ರೇರಣೆಯಿಂದ ಮುಂದೆ ಬಂದ ಅನೇಕ ಸ್ವಯಂ ಸೇವಾ ಸಂಸ್ಥೆಗಳ ಹಾಗೂ ನಾಗರೀಕರಿಗೆ ನನ್ನ ಮತ್ತು ಸಭೆಯ ಅಭಿನಂದನೆಗಳನ್ನು ಸೂಚಿಸಲಿಚ್ಛಿಸುತ್ತೇನೆ. ಗಾಯಾಳುಗಳನ್ನು ಪಾರು ಮಾಡುವಲ್ಲಿ ತಮ್ಮ ಪ್ರಾಣವನ್ನೂ ಲೆಕ್ಕಿಸದೆ ಸಹಾಯ ಮಾಡಿದವರಿಗೂ ನನ್ನ ಮತ್ತು ಸದನದ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಸಾವಿಗೆ ತುತ್ತಾದ ಎಲ್ಲರಿಗೂ ಅದರಲ್ಲೂ ಹೆಚ್ಚಿನ ಸಂಖ್ಯೆಯಲ್ಲಿರುವ ಹೆಂಗಸರು ಮಕ್ಕಳಿಗೆ ಸಂತಾಪ ಸೂಚಿಸುತ್ತಾ, ಮೃತರ ಬಂಧುಗಳಿಗೆ ನಮ್ಮ ಅತೀವ ದುಃಖವನ್ನು ವ್ಯಕ್ತಪಡಿಸಿ ಪರಮಾತ್ಮನು ಅವರಿಗೆ ಈ ದುಃಖವನ್ನು ಭರಿಸುವ ಶಕ್ತಿಯನ್ನು ನೀಡಲೆಂದೂ, ಗಾಯಾಳುಗಳು ಬೇಗನೆ ಗುಣಮುಖರಾಗಲೆಂದೂ ಪ್ರಾರ್ಥಿಸುವಲ್ಲಿ ನೀವೆಲ್ಲರೂ ನನ್ನೊಡನೆ ಸಹಭಾಗಿಯಾಗಿರುವಿರೆಂದು ನಂಬಿದ್ದೇನೆ."

ಮಾನ್ಯ ಸಭೆಯು ಎರಡು ನಿಮಿಷಗಳ ಕಾಲ ಎದ್ದು ನಿಂತು ಮೌನವನ್ನಾಚರಿಸುವುದರ ಮೂಲಕ ಗೌರವ ಸೂಚಿಸಬೇಕೆಂದು ಕೋರುತ್ತೇನೆ.

(ಸಭೆಯು ಎರಡು ನಿಮಿಷಗಳಕಾಲ ಎದ್ದು ನಿಂತು ಮೌನವನ್ನಾಚರಿಸಿತು.)

Statement by Chief Minister

re : Fire accident in Venus Circus, Bangalore City.

ಅಧ್ಯಕ್ಷರು.—ಸನ್ಮಾನ್ಯ ಮುಖ್ಯಮಂತ್ರಿಯವರು ಒಂದು ಹೇಳಿಕೆಯನ್ನು ಮಾಡುತ್ತೇನೆಂದು ಹೇಳಿದ್ದಾರೆ. ಅವರು ಹೇಳಿಕೆಯನ್ನು ಕೊಡಲಿ ಎಂದು ಹೇಳುತ್ತೇನೆ.

SRI R. GUNDU RAO (Chief Minister).—A company known as "Venus Circus" was permitted by the Commissioner of Police to conduct circus shows for a period of 60 days from 18-12-1980 to 15-2-1981 at Jakkarayanakere, Bangalore. On 7th February 1981, a call was received by the Fire Force Control Room at 18-55 hours that this circus was on fire. Two fire engines from the High Grounds Fire Station were rushed within three minutes to the spot. They were put into operation with great difficulty because of the panicking crowd which was rushing out from the burning tent. Fire tenders from other fire stations in the City also arrived. The seven water tenders brought the fire under control in about an hour. The fire was completely extinguished by 22.00 hours.

2. Arrangements were made by the police to control the traffic and crowds in the vicinity of the fire to prevent any obstruction to the movement of fire engines or rescue teams. All the hospitals in Bangalore were alerted. Intimation was also sent to the Army Rescue Team. Lost children were collected and announcements were made through the public address systems.

3. The number of spectators in the circus tent was about 3000. The injured persons were admitted for treatment in Victoria, Bowring, KC General Hospital and private hospitals. The doctors from the combined Government hospitals were mobilised and the para medical staff were pressed into service. Private doctors also freely extended their service. All necessary drugs and intravenous fluids were made available. Voluntary organisations also supplied fluids, bandages and ointments. The dead bodies were shifted from the accident site to the Victoria Hospital mortuary. The death toll was 67 persons and the number of injured persons was 86 (as at 12-00 noon today).

4. Effective police arrangements were made to prevent any looting and armed guards were posted near the wild animal cages.

5. Immediately on receiving information, I visited the spot of the fire accident and saw that commendable work had been turned out by the Fire Forces Department and the Police Department. I also saw the considerable co-operation extended by the public in both fire fighting as well as relief operations. I visited the Victoria Hospital both on 7-2-81 and 8-2-81 and would like to specifically mention the excellent work turned out by the Government as well as private doctors and voluntary organisations. The all India Radio authorities were of immense assistance in our relief efforts.

6. The police have taken up investigation of the incident.

7. My heartfelt sympathy goes out to all those who are bereaved and to all those who have been injured in this ghastly accident. As a measure of assistance to those who are bereaved and those who are injured I would like to announce financial relief of Rs. 5,000 in each case of death and Rs. 1,000 in each case of injury,

8. In order to set at rest all speculations and in order to ascertain the cause of the incident as well as related matters, Government have decided to institute an inquiry under the Commission of Inquiry Act with appropriate terms of reference.

ಅಧ್ಯಕ್ಷರು.—ಸನ್ಮಾನ್ಯ ಮುಖ್ಯ ಮಂತ್ರಿಯವರು ಒಂದು ಹೇಳಿಕೆಯನ್ನು ಮಾಡುತ್ತೇನೆಂದು ಹೇಳಿದ್ದಾರೆ. ಅವರ ಹೇಳಿಕೆಯನ್ನು ಕೊಡಲಿ ಎಂದು ಹೇಳುತ್ತೇನೆ.

† ಶ್ರೀ ಜೆ. ಎಚ್. ಪಟೇಲ್ (ಚನ್ನಗಿರಿ).—ಸನ್ಮಾನ್ಯ ಅಧ್ಯಕ್ಷರೇ ಸಂದರ್ಭಕ್ಕೆ ಔಚಿತ್ಯವಾಗಿ ತಾವಾಗಿಯೇ ಪರಿಸ್ಥಿತಿಯ ಗಂಭೀರತೆಯನ್ನು ತಮ್ಮ ಹೇಳಿಕೆಯಲ್ಲಿ ಎತ್ತಿ ಹಿಡಿದಿದ್ದೀರಿ. ತಾವು ಕೊಟ್ಟಿರುವ ಹೇಳಿಕೆಯಲ್ಲಿ ಇರತಕ್ಕಂಥ ಸಂಪೂರ್ಣವಾದ ಭಾವನೆಗೆ ನಾವೆಲ್ಲರೂ ಸಂಪೂರ್ಣವಾಗಿ ಅನುಮೋದಿಸುತ್ತೇವೆ. ನಾನು ವೈಯಕ್ತಿಕವಾಗಿ ನಮ್ಮ ಸದನದ ಈ ಕಡೆ ಕುಳಿತಿರತಕ್ಕಂಥ ಸದಸ್ಯರ ಪರವಾಗಿ ತಮ್ಮ ಹೇಳಿಕೆಗೆ ಹೃತ್ಪೂರ್ವಕವಾದ ಸಮ್ಮತಿಯನ್ನು ಕೊಡುತ್ತೇನೆಂದು ಹೇಳುತ್ತೇನೆ. ಇಲ್ಲಿ ಘಟನೆ ಆದುದು ಹೇಗೆ ಆಯಿತು, ಏನಾಗಿದೆ ಅದನ್ನು ಈ ಸದನದಲ್ಲಿ ಸನ್ಮಾನ್ಯ ನಾಯಕರು ಹೇಳಿದ್ದಾರೆ. ಈ ಘಟನೆಯಾಗುವುದಕ್ಕೆ ಕಾರಣವಾದುದು ಒಂದು ಸರ್ಕಸ್ ಕಂಪೆನಿ. ಇಂಥ ಒಂದು ಸರ್ಕಸ್ ಕಂಪೆನಿಯನ್ನು ನಡೆಸಲು ಕಾನೂನು ಪ್ರಕಾರವಾಗಿ ಕೆಲವೊಂದು ನಿಯಮಗಳು ಇರುತ್ತವೆ. ಅಂಥ ಒಂದು ನಿಯಮಗಳನ್ನು ಅನುಸರಿಸಿದ್ದರೆ ಈ ರೀತಿಯಾದ ಒಂದು ಘಟನೆಯಾಗುವುದಕ್ಕೆ ಕಾರಣವಿರುತ್ತಿರಲಿಲ್ಲ. ಮನುಷ್ಯ ಪ್ರಯತ್ನ ಮೀರಿದ ಇಂಥ ಘಟನೆಯಾಗುವ ನಿರೀಕ್ಷಣೆ ಇದ್ದಾಗ್ಯೂ ಕೂಡ ಅನುಮತಿಯನ್ನು ಕೊಡಲು ಕಾನೂನನ್ನು ಅನುಸರಿಸಿದರೆ ಎನ್ನುವುದು ಮುಖ್ಯ. ಸರ್ಕಸ್ ಡೇರೆ ಹಾಕಿರತಕ್ಕಂಥ ಸ್ಥಳವನ್ನು ಹೋಗಿ ನೋಡಿದರೆ, ಆ ಸ್ಥಳವನ್ನು ನೀವು ಕೂಡ ನೋಡಿರಬಹುದು, ಕಾನೂನಿನ ದೃಷ್ಟಿಯಿಂದ ಯಾವ ಕಾರಣಕ್ಕೂ ಪರವಾನಿಗೆಯನ್ನು ಕೊಡತಕ್ಕಂಥ ಸ್ಥಳವಲ್ಲ. ಪರವಾನಿಗೆಯನ್ನು ಕೊಡಬೇಕಾದರೆ ಒಂದೊಂದು ರಾಜ್ಯದಲ್ಲಿ ಒಂದೊಂದು ವ್ಯವಸ್ಥೆ ಇರುತ್ತದೆ. ಕೆಲವುಕಡೆ ರೆವಿನ್ಯೂ ಅಥಾರಿಟಿಯವರು ಪರವಾನಿಗೆಯನ್ನು ಕೊಡುತ್ತಾರೆ. ಕೆಲವುಕಡೆ ಕಾರ್ಪೊರೇಷನ್‌ನವರು ಪರವಾನಿಗೆಯನ್ನು ಕೊಡತಕ್ಕಂಥ ಅಧಿಕಾರವನ್ನು ಹೊಂದಿರುತ್ತಾರೆ. ಹೀಗೆ ಲೈಸೆನ್ಸನ್ನು ಕೊಡಲು ಯಾರೆ ಅಧಿಕಾರವನ್ನು ಹೊಂದಿರಲಿ ಮುಖ್ಯವಾಗಿ ಅವರು ನಾಲ್ಕು ಅಂಶಗಳನ್ನು ಗಮನಿಸ ಬೇಕಾಗಿರುತ್ತದೆ. ಮೊದಲನೆಯದಾಗಿ ಸ್ಥಳ ಸಾರ್ವಜನಿಕಹಿತದೃಷ್ಟಿಯಿಂದ ಇಂಥ ಒಂದು ಪಬ್ಲಿಕ್ ಅಮ್ಯೂಸ್‌ಮೆಂಟ್‌ಗೆ ಕೊಡಬೇಕಾದ್ದು ಸೂಕ್ತವೋ, ಅಸೂಕ್ತವೋ ಎನ್ನುವುದು, ಎರಡನೆಯದಾಗಿ ಸಾಕಷ್ಟು ಸ್ಥಳ ಇದೆಯೋ, ಇಲ್ಲವೋ, ಲಾ ಅಂಡ್ ಆರ್ಡರ್ ಸಿಚ್ಯುಯೇಷನ್ ಕಂಟ್ರೋಲ್ ಮಾಡುವುದಕ್ಕೆ, ಜನರು ಅಡ್ಡಾಡುವುದಕ್ಕೆ ಸ್ಥಳ ಇದಿಯೋ ಇಲ್ಲವೋ ಎನ್ನುವುದನ್ನು ನೋಡಬೇಕಾದ್ದು, ಮೂರನೆಯದಾಗಿ ಸಾರ್ವಜನಿಕ ಆರೋಗ್ಯ ದೃಷ್ಟಿಯಿಂದ ಜನಸಂದಣಿ ಇರುವ ಕಡೆ ಕೊಡಬೇಕೋ ಬೇಡವೋ ಎನ್ನುವುದು, ನಾಲ್ಕನೆಯದಾಗಿ ಬಹಳ ಮುಖ್ಯವಾಗಿ ಫೈರ್ ಫೈಟಿಂಗ್ ಸರ್ವೀಸ್ ರವರಿಂದ ಅವರು ಅನುಮತಿಯನ್ನು ಪಡೆದಿದ್ದರೋ ? ಕೇಂದ್ರ ಸರ್ಕಾರದಲ್ಲಿರತಕ್ಕಂಥ ಸಮಿತಿಗೆ ಸಲಹೆಗಳನ್ನು ಹೇಳಿ ನಿಯಮಗಳನ್ನು ಮಾಡುವಾಗ ರಾಜ್ಯದ ಪೋಲೀಸ್ ಅಧಿಕಾರಿಗಳು ಅಂದರೆ ಐ.ಜಿ.ಪಿ. ಲೆವೆಲ್‌ನಲ್ಲಿ ಸದಸ್ಯರಾಗಿರುತ್ತಾರೆ. ನಿಯಮಾವಳಿಗಳ ಪ್ರಕಾರ ಇಂಥ ಒಂದು ಸರ್ಕಸ್ ಆಗಲಿ, ಸಿನಿಮಾ ಥಿಯೇಟರ್ ಆಗಲಿ ಕೊಡುವುದಕ್ಕೆ ನಿಯಮಾವಳಿಗಳು ಇರುತ್ತವೆ. ವಿಶೇಷವಾಗಿ ಸರ್ಕಸ್ ಕಂಪೆನಿಗಳಿಗೆ ಲೈಸೆನ್ಸಗಳನ್ನು ಕೊಡುವಾಗ ಫೈರ್ ಸರ್ವೀಸ್ ಏನು ಇರುತ್ತದೆ. ಬೆಂಕಿ ಆರಿಸತಕ್ಕಂಥ ದಳ ಅವರುಗಳು ಬಂದು ಸ್ಥಳವನ್ನು ಪರೀಕ್ಷೆ ಮಾಡಿ ಲೈಸೆನ್ಸನ್ನು

† Indicates that remarks or speeches have not been revised by the member concerned.

ಕೊಟ್ಟಿದ್ದರೆ ? ಅದನ್ನು ನಮಗೆ ತಿಳಿಸಬೇಕು. ಮೇಲಾಗಿ ಅದು ರೈಲ್ವೆಗೆ ಸೇರಿದ ಸ್ಥಳವೆಂದು ಕೇಳಿದ್ದೇನೆ. ಈ ಬಗ್ಗೆ ನನಗೆ ಅಷ್ಟೇನು ಗೊತ್ತಿಲ್ಲ. ರೈಲ್ವೆಯವರಿಗೂ ಕೂಡ ದುಡ್ಡನ್ನು ಕೊಟ್ಟಿರಬಹುದು ಎಂದು ಕಾಣುತ್ತದೆ. ಇಷ್ಟಕೆಲ್ಲ ಯಾರು ಪ್ರಭಾವ ಬೀರಿದವರು. ಸ್ವಚ್ಛತೆ ಇಲ್ಲದ ಸ್ಥಳದಲ್ಲಿ ಸರ್ಕಸ್ ನಡೆಸಲು ಯಾರು ಲೈಸೆನ್ಸ್ ಕೊಟ್ಟವರು ? ನಗರದಲ್ಲಿ ಬೇರೆಕಡೆ ಸ್ಥಳವಿದ್ದರೂ ಈ ಒಂದು ಸ್ಥಳದಲ್ಲಿಯೇ ಏತಕ್ಕೆ ಕೊಟ್ಟರು ಇದು ಒಂದು ಪ್ರಶ್ನೆ. ಮತ್ತೆ ರಸ್ತೆಗೆ ೧೦-೧೫ ಅಡಿ ಗೇಟ್ ಏನು ಇದೆ ಆ ಗೇಟನ್ನು ಬಿಟ್ಟರೆ ಬೈಸಿಕಲ್‌ಗಳನ್ನು ನಿಲ್ಲಿಸುವುದಕ್ಕೂ ಸ್ಥಳವಿಲ್ಲ, ನಿಯಮಾವಳಿಗಳ ಪ್ರಕಾರ ಸರ್ಕಸ್ ಕಂಪನಿಯು ನಡೆಯತಕ್ಕಂಥ ವೇಳೆಯಲ್ಲಿ ಎಷ್ಟು ಫೈರ್ ಫೈಟಿಂಗ್ ಎಂಜಿನ್‌ಗಳು ಇರಬೇಕು ಎನ್ನುವುದಕ್ಕೆ ನಿಯಮಗಳು ಇರುತ್ತವೆ. ನಿಯಮದ ಪ್ರಕಾರವಾಗಿ ಅಲ್ಲಿ ಫೈರ್ ಫೈಟಿಂಗ್ ಎಂಜಿನ್ ನಿಲ್ಲಿಸುವುದಕ್ಕೂ ವಿಸ್ತಾರವಾದ ಸ್ಥಳವಿಲ್ಲ. ಇದು ಕಣ್ಣಿಗೆ ಎದ್ದು ಕಾಣತಕ್ಕಂಥ ದೃಷ್ಯ. ಆದ್ದರಿಂದ ತಾವು ಜ್ಯುಡಿಷಿಯಲ್ ಎನ್‌ಕ್ವಯರಿ ಮಾಡುತ್ತೇವೆಂದು ಹೇಳಿರುತ್ತೀರಿ ಆದರಲ್ಲಿ ಎಲ್ಲವೂಬರುತ್ತದೆ ಯಾರು ತಪ್ಪಿತಸ್ಥರು ಎನ್ನುವುದು ತಿಳಿಯುತ್ತದೆ. ಆದರೆ ಈ ಸಂದರ್ಭದಲ್ಲಿ ಇಡಿ ರಾಜ್ಯದ ಜನತೆ ದುಃಖಿತಪ್ತರಾಗಿರತಕ್ಕಂಥದ್ದು ಇರಲಿ, ಇಲ್ಲಿ ಲೈಸೆನ್ಸ್ ಅಥಾರಿಟಿಯವರು ಮಾಡಿರತಕ್ಕಂಥ ಕಣ್ಣಿಗೆ ಕಾಣಿಸತಕ್ಕಂಥ ತಪ್ಪು ಏನು ಇದೆ ಅದು ಜೊತೆಗೆ ಎಲೆಕ್ಟ್ರಿಸಿಟಿ ಹೈವೆ ಸರ್ಕಸ್ ಟೆಂಟ್ ಮೇಲೆ ಹಾದು ಹೋಗಿರುತ್ತದೆ. ಈ ಹೈ ಪವರ್ ಟೆನ್‌ಷನ್ ಸರ್ಕಸ್ ಗುಡಾರಕ್ಕೆ ಯಾವ ಡಿಸ್ಟೆನ್ಸ್‌ನಲ್ಲಿ ಇರಬೇಕು ಎನ್ನುವ ದೃಷ್ಟಿ ಯಾವುದು ಇಲ್ಲದೆ ಲೈಸೆನ್ಸ್‌ನ್ನು ಕೊಟ್ಟಿರುತ್ತಾರೆ. ನಾನು ಉದ್ದೇಶಪೂರ್ವಕವಾಗಿ ಈ ರೀತಿ ಮಾಡಿರುತ್ತಾರೆಂದು ಹೇಳುತ್ತಿಲ್ಲ. ಇಂಥ ಒಂದು ಘಟನೆ ನಡೆಯುತ್ತದೆಂದು ನಿರೀಕ್ಷಣೆ ಮಾಡಬೇಕಾಗಿತ್ತು. ಏಕೆಂದರೆ ನಾವು ಯಾವಾಗಲೂ ಇದನ್ನು ನಿರೀಕ್ಷೆ ಮಾಡಿ ಅನುಮತಿಯನ್ನು ಕೊಡಬೇಕಾಗುತ್ತದೆ. ಸರ್ಕಸ್ ಡೇರೆ ಸುಟ್ಟಿರುವುದು ಪ್ರಪಂಚದಲ್ಲೇ ಇದು ಮೂರನೆಯ ಬಾರಿ ಎಂದು ತಿಳಿದುಬಂದಿದೆ. ಹಿಂದಿನ ಎರಡು ಪ್ರಕರಣಗಳು ಸರ್ಕಸ್ ಪ್ರದರ್ಶನ ನಡೆಯುತ್ತಿಲ್ಲದಾಗ ಸಂಭವಿಸಿವೆ. ಆದರೆ ಇಲ್ಲಿ ನಡೆದಿರತಕ್ಕುದು ಬಹಳ ದೊಡ್ಡ ದುರಂತ. ಸರ್ಕಸ್ ಪ್ರದರ್ಶನ ನಡೆಯುತ್ತಿದ್ದಾಗ ಡೇರೆಗೆ ಬೆಂಕಿ ಬಿದ್ದಿದೆ ಈ ಬಗ್ಗೆ ಹಿಂದೂ ದಿನಪತ್ರಿಕೆಯಲ್ಲಿ ಒಂದು ವರದಿ ಬಂದಿದೆ. ಆ ವರದಿಯಲ್ಲಿ Worst site for circus. ಎಂದು ಹೇಳಿದ್ದಾರೆ. "Eversince the tent was pitched many citizens were wondering, how the verious authorities had allowed it. In fact many had questioned the senior polic officials about the place" ಇನ್ನೊಂದು ಪದವನ್ನು ಇಲ್ಲಿ ಹೇಳುತ್ತಾರೆ. "They obtained the sanction from the City Corporation and the Commissioner of Police" ಇದು ಹಿಂದೂ ದಿನಪತ್ರಿಕೆ ಪ್ರಕಾರ ಇದೆ. ಇದನ್ನು ಮದ್ರಾಸಿನಲ್ಲಿ ಇರತಕ್ಕ ಸ್ಥಿತಿಗೆ ಹೋಲಿಸಿ ಹೇಳಿದ್ದಾರೆ. "Notwithstanding the Bangalore tragedy, long ques could be seen at booking centres of the Circus going on at the Island grounds at Madras on Sunday. The tent with a sitting capacity of 4,000 was full during the Matinee and Evening shows." ಆಗ ಅವರು ಪ್ರಶ್ನೆಕೇಳುತ್ತಾರೆ. "Has the circus in Madras taken any extra precaution after the Bangalore tragedy ?" ಅದಕ್ಕೆ ಉತ್ತರವನ್ನು ಹೇಳುತ್ತಾರೆ. The Manager said "Besides the usual speculations like locating the number of fire extinguishers water, sand buckets at the different spots inside the tent and quality wiring Licenced Contractors, is an important Licencing condition in Madras is..." ಇನ್ನು ಮುಂದಕ್ಕೆ ಬೇಕಾಗಿಲ್ಲ. ನಮ್ಮ ರಾಜ್ಯದಲ್ಲೂ ಅದು ಇಲ್ಲಾ ಎಂದೇನಲ್ಲ. ನಮ್ಮಲ್ಲೂ ನಿಯಮ ಇದೆ. ಆದರೆ ಇದನ್ನು ಏಕೆ ಪರಿಗಣನೆಗೆ ತೆಗೆದುಕೊಳ್ಳಲಿಲ್ಲ ? ಬರೀ ಟೆಂಟ್ ಸುಟ್ಟುಹೋಗಿದ್ದರೆ ಇನ್ಸೂರೆನ್ಸ್ ಬರುತ್ತಿತ್ತು. ಈಗ ನಮಗೆ ಈ ಬಗ್ಗೆ ಅನುಮಾನ ಏನೆಂದರೆ, ಈ ಒಂದು ದುರಂತದಲ್ಲಿ ಸತ್ತಿರತಕ್ಕಂತಹವರ ಸಂಖ್ಯೆ ಸರ್ಕಾರ ಕೊಟ್ಟಿರತಕ್ಕದ್ದಕಿಂತ ಹೆಚ್ಚು ಜನರು ಸತ್ತಿದ್ದಾರೆಂದು ನಮಗೆ ಅನುಮಾನ ಇದೆ. ಇದು ವಿಚಾರಣೆಯಲ್ಲಿ ಬರುತ್ತದೆ. ಸರ್ಕಾರ ಇದಕ್ಕೆ ಪ್ರತ್ಯಕ್ಷ ಕಾರಣ ಎಂದು ಹೇಳುತ್ತಾ ಇಲ್ಲ. ಬೇಜವಾಬ್ದಾರಿಯಿಂದ ಈ ಒಂದು ದುರ್ಘಟನೆಗೆ ಅವಕಾಶವಾಗಿದೆ. ಈ ಬೇಜವಾಬ್ದಾರಿಗೆ ಯಾರೇ ಕಾರಣರಿರಲಿ, ಅವರು ರಾಜಕೀಯ ವ್ಯಕ್ತಿಗಳೇ ಆಗಿರಲಿ, ಅಥವಾ ಸರ್ಕಾರಿ ವ್ಯಕ್ತಿಗಳ ಅದ್ಯಕ್ಷತೆ

ಅಥವಾ ನಿರ್ಲಕ್ಷ್ಯತೆಯೋ ಇರಲಿ ಅವರನ್ನು ತಕ್ಕ ರೀತಿಯಲ್ಲಿ ಶಿಕ್ಷಿಸಬೇಕು. ಇವರಿಗೆ ಶಿಕ್ಷೆ ಆಗುವುದಕ್ಕಿಂತ ಮುಂಚೆ ಯಾರು ಸತ್ತಿದ್ದಾರೆ ಅವರ ಕುಟುಂಬ ವರ್ಗದವರಿಗೆ ಹಾಗೂ ಯಾರು ಗಾಯಗೊಂಡಿದ್ದಾರೆ ಅವರ ತಂದೆತಾಯಿಗಳ ಕಣ್ಣೀರ ಶಾಪ ಇವರಿಗೆ ತಟ್ಟದೇ ಬಿಡುವುದಿಲ್ಲ. ಅಲ್ಲಿ ಗಾಯಗೊಂಡಿರುವ ಬಾಲಕರನ್ನು ನೋಡುತ್ತಿದ್ದರೆ ಅಲ್ಲಿನ ಧಾರುಣ ಪರಿಸ್ಥಿತಿ ನೋಡಿ ಕರುಳು ಕಿತ್ತುಬರುತ್ತದೆ. ತಾವು ಈ ಸಭೆಯ ಮನಸ್ಸನ್ನು ಸಮಯೋಜಿತವಾಗಿ ಅರಿತು ರಾಜ್ಯದ ಜನತೆಯ ಮನಸ್ಸನ್ನು ಅರಿತು ಈ ಸೂಚನೆಯನ್ನು ಮುಂದಿಟ್ಟಿದ್ದೀರಿ. ಈ ಒಂದು ಸೂಚನೆಗೆ ನಾನು ಸಂಪೂರ್ಣ ಅನುಮೋದನೆಯನ್ನು ನೀಡುತ್ತ ಈ ದಿನ ಬೇರೆ ವಿಷಯಗಳ ಚರ್ಚೆ ಮಾಡದೆ ಈ ವಿಷಯದ ಬಗ್ಗೆ ಚರ್ಚೆ ಮಾಡಿ ಸದನದ ಕಾರ್ಯಕಲಾಪಗಳನ್ನು ಮುಂದೂಡಬೇಕೆಂದು ಕೇಳಿಕೊಳ್ಳುತ್ತೇನೆ. ತಾವು ನ್ಯಾಯಾಂಗ ತನಿಖೆಗೆ ಆಜ್ಞೆ ಮಾಡಿದ್ದೀರಿ. ಈ ಒಂದು ನ್ಯಾಯಾಂಗ ತನಿಖೆ ಯಾವ ಒಂದು ರಾಜಕೀಯಕ್ಕೂ ಸಿಕ್ಕದಂತೆ ನಡೆಯ ಬೇಕು. ಈ ಸ್ಥಳದಲ್ಲಿ ಸರ್ಕಸ್ ನಡೆಸಲು ಯಾರು ಲೈಸೆನ್ಸ್ ಕೊಟ್ಟಿರುತ್ತಾರೆ ಅವರನ್ನು ಕೂಡಲೇ ಸಸ್ಪೆಂಡ್ ಮಾಡಿ ನ್ಯಾಯಾಂಗ ತನಿಖೆ ಸಾಂಗವಾಗಿ ನಡೆಯಲೆಂದು ಈ ಮೂಲಕ ತಿಳಿಸುತ್ತೇನೆ. ಈ ಒಂದು ದುರಂತದಲ್ಲಿ ಮಕ್ಕಳನ್ನು, ಹೆಂಡತಿಯನ್ನು, ಗಂಡನನ್ನು, ಸ್ನೇಹಿತರನ್ನು ಕಳೆದುಕೊಂಡಿರತಕ್ಕ ದೌರ್ಭಾಗ್ಯದ ಜೊತೆ ಹೃತ್ಪೂರ್ವಕವಾದ ಸಂಬನಿಯನ್ನು ನಾನೂ ಕೂಡ ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಸ್. ಆರ್. ಬೊಮ್ಮಾಯಿ (ಹುಬ್ಬಳ್ಳಿ).—ಮಾನ್ಯ ಅಧ್ಯಕ್ಷರೆ, ಇಡೀ ರಾಷ್ಟ್ರವೇ ಭೀತಿ ಗೊಳ್ಳುವ ಈ ದುರ್ಘಟನೆ ಬಗ್ಗೆ ತಾವು ಈ ಸಭೆಯ ಮುಂದೆ ವ್ಯಕ್ತಪಡಿಸಿದ ಅಹವಾಲುಗಳನ್ನು ನಾನು ಬೆಂಬಲಿಸುತ್ತಾ ಈ ಒಂದು ಘಟನೆ ನಡೆದಾಗ ನನಗೆ ಆದಂತಹ ವೇದನೆಯನ್ನು ನೆನೆಸಿಕೊಂಡಾಗ ಉಳಿದ ತಂದೆತಾಯಿಯರಿಗಾದ ವೇದನೆ, ಕಷ್ಟ ನನಗೆ ನೆನಪಾಗುತ್ತದೆ. ಅದೇ ದಿನ ನನ್ನ ಎರಡು ಹೆಣ್ಣು ಮಕ್ಕಳನ್ನು ಊಟಕ್ಕೆ ಕರೆದಿದ್ದು ನಾನು ನನ್ನ ಹೆಂಡತಿ ಮಕ್ಕಳು ಮೊಮ್ಮಕ್ಕಳ ಜೊತೆ ಊಟ ಮಾಡಿ ಮಧ್ಯಾಹ್ನ ಅವರುಗಳು ಸರ್ಕಸ್ ನೋಡಬೇಕೆಂದುದರಿಂದ ಮೂರೂವರೆ ಸಮಯದಲ್ಲಿ ಅವರನ್ನು ಮನೆಗೆ ಬಿಟ್ಟು ಬಂದೆ. ಅದೇ ದಿವಸ ಅದೇ ಶೋಗೆ ಅವರು ಹೋಗುವವರಿದ್ದರು. ಸರ್ಕಸ್ ನೋಡಲು ಫ್ರೀ ಪಾಸ್ ಬಂದಿದ್ದು ಅವರನ್ನು ಅಲ್ಲಿಗೆ ಬಿಟ್ಟು ನಾಲ್ಕು ಗಂಟೆಗೆ ನಾನು ಸದನಕ್ಕೆ ಬಂದೆ. ಆ ನಂತರ ರಾತ್ರಿ ೮ ಗಂಟೆಗೆ ಒಂದು ವಿಷಯವನ್ನು ಚರ್ಚೆ ಮಾಡುವುದಕ್ಕೆ ಮಾನ್ಯ ಮುಖ್ಯ ಮಂತ್ರಿಯವರ ಸೆಕ್ರೆಟರಿಯವರನ್ನು ಸಂಪರ್ಕಿಸಿದಾಗ ಅವರು ಸರ್ಕಸ್‌ಗೆ ಬೆಂಕಿ ಬಿದ್ದಿರುವ ವಿಷಯವನ್ನು ತಿಳಿಸಿ ಮಾನ್ಯ ಮುಖ್ಯ ಮಂತ್ರಿಯವರು ಅಲ್ಲಿಗೆ ಹೋಗಿದ್ದಾರೆಂದು ತಿಳಿಸಿದರು. ಆ ವಿಷಯವನ್ನು ಕೇಳಿ ನನಗೂ ದಿಗ್ಭ್ರಮೆ ಆಯಿತು. ಈ ವಿಷಯವನ್ನು ತಿಳಿದ ನನ್ನ ಹೆಂಡತಿಗೂ ದಿಗ್ಭ್ರಮೆಯಾಯಿತು. ನಾವು ತಕ್ಷಣ ಕಾರು ತೆಗೆದುಕೊಂಡು ಆ ಬೆಂಕಿ ಬಿದ್ದ ಸ್ಥಳಕ್ಕೆ ಹೋದೆವು. ಅಲ್ಲಿ ಪೋಲೀಸ್ ಬಂದೋಬಸ್ತು ಜೋರಾಗಿತ್ತು. ಒಳಕ್ಕೆ ಯಾರನ್ನೂ ಬಿಡುತ್ತಿರಲಿಲ್ಲ. ಅಲ್ಲಿ ತಮ್ಮ ಮಕ್ಕಳನ್ನು ನೋಡಲು ಬಂದಿದ್ದಂತಹ ತಂದೆತಾಯಿಗಳ ಗೋಳನ್ನು ನೋಡಿದಾಗ ನನಗಂತೂ ಕಣ್ಣು ಮುಂದೆ ಕತ್ತಲು ಕವಿದಂತಾಯಿತು. ಅಲ್ಲಿನ ಪೋಲೀಸ್ ಅಧಿಕಾರಿಗಳನ್ನು ಒಳಕ್ಕೆ ಬಿಡಲು ಕೇಳಿಕೊಂಡೆ. ಅವರು ತಮ್ಮ ಕರ್ತವ್ಯ ಪಾಲನೆ ಮಾಡಿದರು. ಅವರು ನಮ್ಮನ್ನು ಒಳಕ್ಕೆ ಬಿಡುವುದಕ್ಕಾಗುವುದಿಲ್ಲವೆಂದು ಹೇಳಿಬಿಟ್ಟರು. ಉಳಿದ ಸಾರ್ವಜನಿಕರಿಗೆ ಅವರು ಏನು ಹೇಳುತ್ತಿದ್ದರು ಅದನ್ನೇ ನನಗೂ ಅವರು ಹೇಳಿದರು. ಆ ನಂತರ ನಾನು ನನ್ನ ಮಗಳ ಮನೆಗೆ ಜಯನಗರಕ್ಕೆ ಹೋಗಿ ನೋಡಿದಾಗ ಅಲ್ಲಿ ಅವರ ಸಂಬಂಧಿಕರೊಬ್ಬರು ಕೃಷ್ಣಗಿರಿಯಿಂದ ಬಂದಿದ್ದರಿಂದ ಅವರು ಸರ್ಕಸ್ ನೋಡಲು ಹೋಗುವ ಪ್ರೋಗ್ರಾಮನ್ನು ಕ್ಯಾನ್ಸಲ್ ಮಾಡಿದ್ದು ತಿಳಿಯಿತು. ಆಗ ನನ್ನ ಮನಸ್ಸಿಗೆ ಸಮಾಧಾನವಾಯಿತು. ಆ ನಂತರವೂ ನಾನು ಘಟನೆ ನಡೆದ ಸ್ಥಳಕ್ಕೆ ಹಿಂತಿರುಗಿ ಮತ್ತೆ ಬಂದು ನೋಡಿದಾಗ ಅಲ್ಲಿ ನೆರೆದಿದ್ದ ಜನರ ಗೋಳನ್ನು ನೋಡಿದಾಗ ಇಂತಹ ಒಂದು ದುರ್ಘಟನೆ ಎಲ್ಲೂ ಯಾವ ಕಾಲಕ್ಕೂ ಆಗಬಾರದು ಎನ್ನುವ ಒಂದು ಭಾವನೆ ಬಂದರೂ ಇದು ಹೇಗೆ ನಡೆಯಿತು ಏಕೆ ನಡೆಯಿತು ಎನ್ನುವುದನ್ನು ವಿಚಾರ ಮಾಡುವುದಕ್ಕೆ ಸರ್ಕಾರ ಇದೆ ಎನಿಸಿತು. ನಾನು ಹುಬ್ಬಳ್ಳಿಗೆ ರೈಲಿನಲ್ಲಿ ಹೋಗುವಾಗ ಮತ್ತು ಅಲ್ಲಿಂದ ಬರುವಾಗ ನಾನು ಈ ಸರ್ಕಸ್ ಟೆಂಟನ್ನು ನೋಡುತ್ತಾ ಇದ್ದೆ. ಅಲ್ಲಿ ಲೈಟನ್ನು ಹಾಕಿರುತ್ತಿದ್ದರು. ನನ್ನ ಅಭಿಪ್ರಾಯದಲ್ಲಿ ಹೇಳುವುದಾದರೆ, ಈ ಒಂದು ಸ್ಥಳ ಸರ್ಕಸ್ ನಡೆಸಲು ಯೋಗ್ಯವಾಗಿರಲಿಲ್ಲ. ಯಾವುದೇ ಒಬ್ಬ ಅಧಿಕಾರಿಗೆ ಕಿಂಚಿತ್ತಾದರೂ ಸಾರ್ವಜನಿಕರ ಹಿತದ ಚಿಂತನೆ ಇದ್ದಿದ್ದರೆ ಆತ ಅಲ್ಲಿ ಸರ್ಕಸ್ ನಡೆಸುವುದಕ್ಕೆ ಅವಕಾಶವನ್ನು ಕೊಡುತ್ತಿರಲಿಲ್ಲವೆಂದು ನನಗನ್ನಿಸುತ್ತದೆ. ಈ ಸರ್ಕಸ್ ನಡೆಯುತ್ತಿದ್ದಂತಹ

ಸ್ಥಳದ ಒಂದು ಕಡೆ ದಿಣ್ಣೆ ಇನ್ನೊಂದು ಕಡೆ ಒಂದು ದೊಡ್ಡ ಕೊಳ್ಳ, ಎದುರುಗಡೆಯೇ ಜನ ಸಂದಣಿಯಿಂದ ಕೂಡಿದ ರಸ್ತೆ, ಮೇಲುಗಡೆ ಹೈಟೆನ್‌ಷನ್ ವಿದ್ಯುತ್ ಲೈನುಗಳು, ಅಕ್ಕಪಕ್ಕದಲ್ಲಿ ರೈಲು ಹಳಿಗಳು ಇಂತಹ ಒಂದು ಸ್ಥಳದಲ್ಲಿ ಯಾವುದೇ ಒಬ್ಬ ಸಾಮಾನ್ಯವಾಗಿ ವಿಚಾರ ಮಾಡತಕ್ಕ ಅಧಿಕಾರಿ ಈ ಸ್ಥಳವನ್ನು ಸರ್ಕಸ್ ನಡೆಸಲು ಕೊಡತಕ್ಕ ಸ್ಥಳ ಎಂದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಅಲ್ಲಿಗೆ ಹೋಗಿ ನೋಡಿದೆ.

ಸರ್ಕಾರದವರು ಇದರ ಬಗ್ಗೆ ಕಮೀಷನ್ ಆಫ್ ಎನ್‌ಕ್ವೈರಿ ಮಾಡಿಸುತ್ತೇನೆಂದು ಈಗಾಗಲೇ ಒಪ್ಪಿಕೊಂಡಿದ್ದಾರೆ. ಈವೊತ್ತು ಅವರು ನ್ಯಾಯಾಂಗ ತನಿಖೆ ಮಾಡಿಸುತ್ತೇನೆಂದು ಏನು ಹೇಳಿದ್ದಾರೆ ಅದನ್ನು ನಾನೂ ಸಹ ಅರ್ಥ ಮಾಡಿಕೊಂಡಿದ್ದೇನೆ. ಮುಖ್ಯ ಮಂತ್ರಿಗಳು ಇದರ ಬಗ್ಗೆ ಸ್ವಲ್ಪ ವಿವರಣೆ ಕೊಡಬೇಕು ಎಂದು ಕೇಳುತ್ತೇನೆ. ಈ ಬಗ್ಗೆ ತಾವು ಜುಡಿಷಿಯಲ್ ಎನ್‌ಕ್ವೈರಿ ಮಾಡಬೇಕು ಎಂದು ನಾನು ತಮಗೆ ಸಲಹೆ ಮಾಡುತ್ತೇನೆ. Judicial enquiry should be by an High Court Judge ಅವರಿಂದ ಆಗಬೇಕು. ಈ ಸಲಹೆಯನ್ನು ಕೊಡುತ್ತಾ ಇದರ ಜೊತೆಗೆ ಈಗ ಬೆಂಗಳೂರು ನಗರದಲ್ಲಿ ಎಲ್ಲಿ ಉತ್ತಮವಾದ ಬಯಲು ಪ್ರದೇಶಗಳು ಇವೆ ಅದೆಲ್ಲಾ ಈವೊತ್ತು ಕಣ್ಮರೆಯಾಗುತ್ತಾ ಇವೆ. ಇಂಥಾ ಮಹಾನಗರಕ್ಕೆ ಸರ್ಕಸ್‌ಗೇ ಆಗಲಿ, ನಾಟಕಗಳಿಗಾಗಲಿ ಸ್ಥಳಗಳನ್ನು ಗೊತ್ತು ಇರಿಸತಕ್ಕಂಥಾದ್ದು ನಮ್ಮ ಕರ್ತವ್ಯ. ಬೆಳೆದಂಥಾ ಈ ಮಹಾನಗರದಲ್ಲಿ ಮತ್ತು ಇನ್ನೂ ಕೆಲವು ಕಡೆಗಳಲ್ಲಿ ನಾನು ನೋಡಿದ್ದೇನೆ. ಟೆಂಟ್‌ಗಳಲ್ಲಿ ಸಿನಿಮಾ ನಡೆಸುತ್ತಿರುವುದನ್ನು ಯಾವ ರೀತಿಯಾಗಿ ಅವರು ನಡೆಸುತ್ತಾ ಇದ್ದಾರೆ ಅನ್ನುವುದನ್ನು ನೋಡಿದ್ದೇನೆ. ಈವೊತ್ತು ಇಂಥಾ ಒಂದು ಘಟನೆ ಸಂಭವಿಸಿದ್ದರೂ ಕೂಡ ಪುನಃ ಪುನಃ ಇಂಥಾವುಗಳಿಗೆ ಲೈಸನ್ಸ್ ಅನ್ನು ಮುಂದುವರಿಸುವಂಥಾ ಪರಿಪಾಠವನ್ನು ಅಧಿಕಾರಿಗಳು ಇಟ್ಟುಕೊಂಡಿದ್ದಾರೆ. ಕಾರಣ ನಾನು ಈವೊತ್ತು ಇಲ್ಲಿ ಹೇಳುವುದಿಲ್ಲ. ಒಟ್ಟಿನಲ್ಲಿ ಹೇಳಬೇಕಾದರೆ ಸರಿಯಾದ ರೀತಿಯಲ್ಲಿ ಲೈಸನ್ಸ್‌ಗಳನ್ನು ಕೊಡದೇ ಹೋದರೆ ಇದಕ್ಕೆ ಏನು ಕಟ್ಟಡಬೇಕೋ ಆ ಕಟ್ಟಡಗಳು ಇಲ್ಲದೇ ಇದ್ದರೂ ಲೈಸನ್ಸ್‌ಗಳನ್ನು ಕೊಡುತ್ತಾ ಹೋದರೆ ಬಹಳ ಕಷ್ಟವಾಗುತ್ತದೆ. ಟೂರಿಂಗ್ ಟ್ಯಾಕೀಸ್ ಅನೇಕ ನಗರಗಳಲ್ಲಿ ಈ ರೀತಿ ಇರುವುದನ್ನು ನಾವು ನೋಡುತ್ತಾ ಇದ್ದೇವೆ. ಟೆಂಪರರಿಯಾಗಿ ಅವರು ಒಂದು ಕಡೆ ೩ ತಿಂಗಳು, ೬ ತಿಂಗಳವರೆಗೆ ಇರಬೇಕೇ ವಿನಾ ೧೦–೧೫ ವರ್ಷವಾದರೂ ಕೂಡ ಅಲ್ಲೇ ನಡೆಯುತ್ತಾ ಇರುತ್ತದೆ. ಸಾರ್ವಜನಿಕರಿಗೆ ಯಾವ ರೀತಿ ರಕ್ಷಣೆ ಇರಬೇಕೋ ಆ ರೀತಿಯಲ್ಲಿಲ್ಲ. ಅಂಥಾದ್ದನ್ನು ಕೂಡಲೇ ಲೈಸನ್ಸ್ ಕೊಡದೇ ನಿಲ್ಲಿಸಬೇಕು ಎಂದು ಸಲಹೆ ಕೊಡುತ್ತೇನೆ. ಅಲ್ಲದೇ ನಾನು ನೋಡಿದ್ದೇನೆ ಅನೇಕ ಸಿನಿಮಾ ಮಂದಿರಗಳೂ ಕೂಡ ಈ ರೀತಿ ಇವೆ. ಕೆಲವು ಸಿನಿಮಾ ಮಂದಿರಗಳನ್ನು ನೋಡಿದರೆ ಅಲ್ಲಿ ಇಳಿಯುವುದಕ್ಕೂ ಭಯವಾಗುತ್ತದೆ, ಹತ್ತುವುದಕ್ಕೂ ಭಯವಾಗುತ್ತದೆ. ಇಂಥಾದ್ದಕ್ಕೆಲ್ಲಾ ಏತಕ್ಕೆ ಲೈಸನ್ಸ್ ಕೊಡುತ್ತಾರೋ ಗೊತ್ತಿಲ್ಲ. ಆ ಕಟ್ಟಡ ಹೇಗೆ ಇರಲಿ ಲೈಸನ್ಸ್ ಕೊಟ್ಟು ಬಿಡುತ್ತಾರೆ, ಒಂದು ವೇಳೆ ಅವಕ್ಕೆ ಏನಾದರೂ ಬೆಂಕಿ ಬಿದ್ದರೆ ಜನರು ಹೇಗೆ ಪಾರಾಗಬೇಕು ? ಕೆಲವು ಕಡೆ ಒಂದೇ ಒಂದು ಲಿಫ್ಟ್ ಇದೆ. ಅಲ್ಲಿ ಉಸಿರಾಡುವುದಕ್ಕೂ ಕೂಡ ಜಾಗ ಇಲ್ಲ. ಅಂಥಾ ಸಿನಿಮಾ ಮಂದಿರಗಳು ಇವೆ. ಆದುದರಿಂದ ಇನ್ನು ಮುಂದಾದರೂ ಕೂಡ ಈ ಮನರಂಜನೆಗೆ ಲೈಸನ್ಸ್ ಕೊಡುವಾಗ ಅಲ್ಲಿ ಸಾರ್ವಜನಿಕರಿಗೆ ರಕ್ಷಣೆ ಇಲ್ಲದೇ ಹೋದರೆ ಬಹಳ ಕಷ್ಟವಾಗುತ್ತದೆ. ಇನ್ನು ಮುಂದಾದರೂ ಇದರ ಬಗ್ಗೆ ಮುಂಜಾಗರೂಕತೆಯನ್ನು ಸರ್ಕಾರದವರು ವಹಿಸಿ ಇಂಥಾ ದುರ್ಘಟನೆ ಪುನಃ ಆಗದಂತೆ ನೋಡಿಕೊಳ್ಳತಕ್ಕಂಥಾದ್ದು ಅವಶ್ಯ ಇದೆ ಹಾಗೂ ಇದರ ಬಗ್ಗೆ ಏನಾದರೂ ಮಾರ್ಪಾಡು ಮಾಡಬೇಕಾದರೆ ಮಾರ್ಪಾಡು ಮಾಡಿ. ಈ ಬಗ್ಗೆ ಅಧಿಕಾರಿಗಳು ಕಟ್ಟುನಿಟ್ಟಾಗಿ ಆಜ್ಞೆಯನ್ನು ಜಾರಿಗೆ ತರಬೇಕು ಎಂದು ಹೇಳುತ್ತೇನೆ, ಏನು ಒಂದು ಒತ್ತಡದಿಂದಾಗಲಿ ಅಥವಾ ಯಾವುದೇ ಒಂದು ಆಸೆಯಿಂದ ಆಗಲಿ ಮಣಿಯದೇ ಕಟ್ಟುನಿಟ್ಟಾಗಿ ತಮ್ಮ ಕರ್ತವ್ಯವನ್ನು ಪಾಲಿಸಬೇಕು ಎಂದು ಹೇಳುತ್ತೇನೆ. ಈ ಮನರಂಜನಾ ಕಾರ್ಯಕ್ರಮಗಳನ್ನು ಈ ರೀತಿಯಾದ ನಡೆಸಿದರೆ ಯಾವ ರೀತಿಯಾಗಿ ದುರ್ಘಟನೆ ಆಗುತ್ತದೆ ಎನ್ನುವ ಮನವರಿಕೆ ನಮಗೆ ಈವೊತ್ತು ಬಂದಿದೆ. ಮಾನ್ಯ ಮುಖ್ಯ ಮಂತ್ರಿಗಳು ಈ ಸಂದರ್ಭದಲ್ಲಿ ಪೋಲೀಸ್ ಅಧಿಕಾರಿಗಳು, ನಮ್ಮ ಎಲ್ಲಾ ಆಸ್ಪತ್ರೆಯ ವೈದ್ಯರುಗಳು ಅಲ್ಲದೆ ಸಾರ್ವಜನಿಕರು, ಅನೇಕ ಯುವಕರು, ಅನೇಕ ಸಂಘ ಸಂಸ್ಥೆಗಳು ಮುಂದೆ ಬಂದು ಸಮಯಕ್ಕೆ ಸರಿಯಾಗಿ ತಮ್ಮ ಎಲ್ಲಾ ರೀತಿಯ ಸಹಾಯ, ಸಹಕಾರ ಮತ್ತು ಸೇವೆಗಳನ್ನು ಒದಗಿಸಿದ್ದಕ್ಕಾಗಿ ಅವರಿಗೆ ತಮ್ಮ ಅಭಿನಂದನೆಗಳನ್ನು ಸಲ್ಲಿಸಿದ್ದಾರೆ ಅದೇ ರೀತಿ ನಾವೂ ಕೂಡ ಅಭಿನಂದನೆಗಳನ್ನು ಸಲ್ಲಿಸುವುದಲ್ಲದೆ ಮಾನ್ಯ ಮುಖ್ಯ ಮಂತ್ರಿಗಳೊಂದಿಗೆ ಧ್ವನಿಗೂಡಿಸುತ್ತೇವೆ. ಇದರ ಜೊತೆಗೆ ಮಾನ್ಯ

ಮುಖ್ಯ ಮಂತ್ರಿಗಳು ಸತ್ತವರಿಗೆ ಅವರ ಕುಟುಂಬಕ್ಕೆ ೫೦೦೦ ರೂಪಾಯಿ ಪರಿಹಾರವನ್ನೂ ಮತ್ತು ಗಾಯಗೊಂಡವರಿಗೆ ೧೦೦೦೦ ರೂಪಾಯಿ ಪರಿಹಾರವನ್ನು ಕೊಡುತ್ತೇವೆಂದು ಹೇಳಿದ್ದಾರೆ. ಆದರೆ ಅವರು ೫ ಸಾವಿರ ರೂಪಾಯಿ ಕೊಡಬಹುದು, ಅದಕ್ಕೇನು ಬೆಲೆ ಇಲ್ಲ, ಅವರು ಪುನಃ ವಾಪಸ್ಸು ಬರುವುದಕ್ಕಾಗುತ್ತದೆಯೇ ? ಈಗ ಸತ್ತಿರುವಂಥಾ ಮಕ್ಕಳಲ್ಲಿ ಯಾವ ಮಕ್ಕಳು ಪ್ರತಿಭಾವಂತರಾಗಿದ್ದರು, ಅವರಿಂದ ರಾಷ್ಟ್ರಕ್ಕೆ ಎಂತಂತಹ ಕಾಣಿಕೆಯನ್ನು ಅವರು ಕೊಡುತ್ತಿದ್ದರೋ ಗೊತ್ತಿಲ್ಲ. ಅಂಥಾ ಮಕ್ಕಳೆಲ್ಲಾ ಈವೊತ್ತು ನಮ್ಮನ್ನು ಅಗಲಿ ಹೋಗಿದ್ದಾರೆ. ಅವರೆಲ್ಲರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಕೋರುತ್ತಾ ಅವರ ತಂದೆತಾಯಿಗಳಿಗೆ, ಅವರ ಬಂಧುಬಳಗದವರಿಗೆ ಎಲ್ಲರಿಗೂ ಆದಂಥಾ ದುಃಖವನ್ನು ತಾಳ್ಮೆಯಿಂದ ಸಹಿಸಲಿ, ಶಕ್ತಿ ದೊರೆಯಲಿ ಎಂದು ಹೇಳಿ ಅವರೊಂದಿಗೆ ನನ್ನ ಧ್ವನಿಯನ್ನೂ ಕೂಡ ಕೂಡಿಸುತ್ತೇನೆ. ಇನ್ನೂ ಹೆಚ್ಚು ವಿಚಾರ ಈ ಸಂಬಂಧದಲ್ಲಿ ಹೇಳುವುದಕ್ಕೆ ನನ್ನ ಮನಸ್ಸು ಒಪ್ಪುತ್ತಿಲ್ಲ. ಈ ದುರ್ಘಟನೆ ಆಗಬಾರದಾಗಿತ್ತು. ಇನ್ನು ಮುಂದಾದರೂ ಕೂಡ ಈ ರೀತಿ ಆಗದಂತೆ ನೋಡಿ ಕೊಳ್ಳತಕ್ಕಂಥಾ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕು ಎಂದು ಹೇಳುತ್ತೇನೆ. ಇದರ ಬಗ್ಗೆ ಸರಿಯಾದ ರೀತಿಯಲ್ಲಿ ವಿಚಾರಣೆ ಆಗಬೇಕು. ಶ್ರೀಮಾನ್ ಜೆ. ಹೆಚ್. ಪಟೇಲರು ಈಗಾಗಲೇ ತಮ್ಮ ಅಭಿಪ್ರಾಯ ವನ್ನು ವ್ಯಕ್ತ ಮಾಡಿದ್ದಾರೆ. ತಪ್ಪಿತಸ್ಥ ಅಧಿಕಾರಿಗಳನ್ನು ವಿಚಾರಣೆ ಮಾಡಿ ಕೂಡಲೇ ಅವರನ್ನು ಸಸ್ಪೆಂಡ್ ಮಾಡಬೇಕು, ಜೊತೆಗೆ ಸರಿಯಾದ ವಿಚಾರಣೆಯಾಗಬೇಕು. ಇದರ ಜೊತೆಗೆ ಈ ಘಟನೆಗೆ ಪರಿಹಾರ ಏನು ಇದೆ ಅದು ಇಂಥಾ ಪ್ರಸಂಗದಲ್ಲಿ ಸಾಲದು. ಅಂಥಾ ಕುಟುಂಬಗಳನ್ನು ಸರಿಯಾಗಿ ಗುರುತಿಸಿ ಅವರಿಗೆ ಸರಿಯಾದ ರೀತಿಯಲ್ಲಿ ಉಪಚಾರ ಮಾಡಬೇಕು, ಅಲ್ಲದೆ ಈ ಪರಿಹಾರ ಅವರಿಗೆ ಸಾಲದು ಇನ್ನೂ ಸ್ವಲ್ಪ ಹೆಚ್ಚು ಮಾಡಬೇಕು ಎಂದು ಹೇಳುತ್ತೇನೆ ಮತ್ತು ಇದರ ಬಗ್ಗೆ ಒಂದು ಯೋಗ್ಯ ವ್ಯವಸ್ಥೆ ಮಾಡಬೇಕು ಎಂದು ಹೇಳುತ್ತೇನೆ. ಕೊನೆಯದಾಗಿ ಹೇಳುವುದೇನೆಂದರೆ ಈಗ ಅವರುಗಳು ಗಾಯಾಳುಗಳಾಗಿ ಏನು ಇದ್ದಾರೆ ಅವರು ಬದುಕಲಿ, ಅವರು ಬಹುಬೇಗ ಗುಣಮುಖ ರಾಗಲಿ, ಅವರಿಗೆ ಏನೇನು ಸಹಾಯ ಬೇಕೋ ಅದನ್ನು ನಾವೂ ನೀವೂ ಎಲ್ಲರೂ ಕೂತುಕೊಂಡು ವಿಚಾರ ಮಾಡೋಣ , ಎಂದು ಹೇಳುತ್ತೇನೆ. ಮತ್ತೆ ತಾವು ವ್ಯಕ್ತ ಮಾಡಿರುವಂಥ ಭಾವನೆಗಳಿಗೆ ನನ್ನ ಬೆಂಬಲ ವನ್ನು ಸೂಚಿಸುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ರಮೇಶ್‌ಕುಮಾರ್ (ಶ್ರೀನಿವಾಸಪುರ).—ಸನ್ಮಾನ್ಯ ಅಧ್ಯಕ್ಷರೇ. ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಸರ್ಕಾರದ ನಿಲುವನ್ನು ತಿಳಿಸಿದ್ದಾರೆ. ಹಾಗೂ ಮಾನ್ಯ ಸದಸ್ಯರುಗಳಾದ ಶ್ರೀ ಜೆ. ಹೆಚ್. ಪಟೇಲರವರು ಮತ್ತು ಶ್ರೀ ಎಸ್. ಆರ್. ಬೊಮ್ಮಾಯಿರವರು ಈ ಬಗ್ಗೆ ಹಲವಾರು ವಿಷಯ ಗಳನ್ನು ಹೊರಗೆಡವಿದ್ದಾರೆ. ಇದರಲ್ಲಿ ಶ್ರೀ ಜೆ. ಎಚ್. ಪಟೇಲರವರು ಹೇಳಿದಂಥಾ ವಿಚಾರ ಬಹಳ ಪ್ರಾಮುಖ್ಯವಾದುದಾಗಿರುತ್ತದೆ. ಅದನ್ನು ಸರ್ಕಾರದವರು ಗಮನದಲ್ಲಿಟ್ಟು ಕೊಳ್ಳುತ್ತಾರೆಂದು ನನ್ನ ಆಸೆ. ಲೈಸನ್ಸಿಂಗ್ ಅಥಾರಿಟಿ ಯಾರೇ ಇರಲಿ the licensing authority, whether it was the Commissioner of Police or somebody else, in the normal situation, we do not wish an accident, but it was their responsibility to anticipate such a situation.

ಸನ್ಮಾನ್ಯ ಅಧ್ಯಕ್ಷರೇ, ಈ ಒಂದು ಮಾತನ್ನು ಹಿಂದೂ ಪತ್ರಿಕೆಯಲ್ಲಿ ಹೇಳಿದ್ದಾರೆ. ಅದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಅದು ಈರೀತಿ ಇದೆ,—

> "The audience tried to rush through the main gate, the only entrance meant for the public. It was stated that there was some hope of their survival if they had rushed out through the exit meant for the circus artists.
>
> By doing so they could have escaped the fire but would have lost their limbs as just a foot away behind the place where the circus tent was pitched is a huge ditch filled with sewage water."

I am only trying to substantiate that this place where the Circus was located was most unsuitable for this exhibition of the show. ಮಾನ್ಯ ಅಧ್ಯಕ್ಷರಿಗೆ ಸಾಮಾನ್ಯವಾಗಿ ಗೊತ್ತಿದೆ ; ತಮ್ಮ ಮನೆಗೆ ಹೋಗತಕ್ಕಂಥಾ ದಾರಿಯಲ್ಲಿ ಈ ಸರ್ಕಸ್ ಪೋ ಇದ್ದದ್ದು. ತಾವೂ ಕೂಡ ಇದನ್ನು ನೋಡಿ ಕೊಂಡು ಈ ಘಟನೆ ನಡೆಯುವುದಕ್ಕೆ ಮೊದಲೇ ಏತಕ್ಕಪ್ಪ ಇಂಥಾ ಜಾಗದಲ್ಲಿ ಇದಕ್ಕೆ ಲೈಸನ್ಸ್ ಅನ್ನು ಕೊಟ್ಟಿದ್ದರಲ್ಲಾ ಅನ್ನುವ ಅಭಿಪ್ರಾಯವನ್ನು ವ್ಯಕ್ತ ಮಾಡಿದ್ದೀರಿ ಅಂತ ನನಗೆ ತಿಳಿದು ಬಂದಿದೆ. ತಮ್ಮ ಗಮನಕ್ಕೆ ತರುವುದಾದರೆ ಕಾರ್ಪೋರೇಷನ್ ಆಕ್ಟ್ ೩೨೫ ರಲ್ಲಿ ಇದರ ಬಗ್ಗೆ ಸ್ಪಷ್ಟವಾಗಿ ಹೇಳಿದೆ. ಅದನ್ನು ತಮ್ಮ ಮುಂದೆ ಓದುತ್ತೇನೆ. ಅದು ಈರೀತಿ ಇದೆ.

> "Where the Commissioner is of opinion that the means of egress from any structure are insufficient to allow of safe exit in the event of fire, he may with the sanction of the standing committee by notice require the owner or the occupier of the structure to alter or re-construct any stair-cases in such a manner or to provide such additional or emergency stair-cases as he may direct ; and when any structure booth or tent is used for purposes of public entertainment, he may require subject to such sanction as aforesaid, that it shall be provided with adequate number of clearly indicated exits so placed and maintained as readily to afford the audience ample means of save egress, that the setting be so arranged as not to interfere with free access to the exits and that the gang Ways, passage and staircases leading to the exits shall, during the presence of the public, be kept clear of all obstructions."

"The Hindu" says, there was only one entrance and this is what the Act says which has come into force to protect the lives of our people. It is a guidence for us. We live in the society and certain rules and regulations and all these things have come into force only in our interest. Furthermore, I must tell regarding High Tension wire. In the Indian Electricty Rules it is clearly mentioned that "where a high or extra-high voltage overhead line passes above or adjacent to any building or part of a building, it shall have on the basis of maximum sag verticle clearance above the highest part of the building immediately under such line of not less than-(a) for high voltage lines up to and including 33,000 volts." Here, it is 66,000 volts. ನಾನು ಸ್ಥಳಕ್ಕೆ ಹೋಗಿ ನೋಡಿಬಂದಿದ್ದೇನೆ. ಯಾವ ಕಾರಣಕ್ಕೂ ಕೂಡ ಆರು ಅಡಿಗಿಂತ ಅಂತರ ಇರಲಿಲ್ಲ. ಹೈಟೆನ್ಷನ್ ಲೈನಿಗೂ ಟೆಂಟಿನ ಮೇಲ್ಭಾಗಕ್ಕೂ ಅತರ ಬಹಳ ಕಡಿಮೆ. ಕರ್ನಾಟಕ ಎಲೆಕ್ಟ್ರಿಸಿಟಿಯವರು ಅವರಾದರೂ ಗಮನಿಸಬೇಕಾಗಿತ್ತು. ಕಂಪ್ಲಿಷನ್ ರಿಪೋರ್ಟನ್ನು ಯಾರು ಕೊಟ್ಟರು ?. ಕಂಟ್ರಾಕ್ಟರ್ ಯಾರು ? Is he a Licenced Contractor ? All these facts will have to be taken into consideration. ಮಕ್ಕಳು ಸತ್ತಿದ್ದು ಆಯಿತು. ಸರ್ಕಾರ ಪರಿಹಾರ ಕೊಡುತ್ತದೆಂದು ಹೇಳಿದ್ದಾರೆ. ನಾವು ಅವರಿಗೆ ತೋರಿಸತಕ್ಕಂತಹದ್ದು ಅನುಕಂಪ. ಸರ್ಕಾರ ಕೊಡತಕ್ಕಂತಹ ಪರಿಹಾರ ಹಣ. ಆದರೆ, ಯಾವ ಯಾವ ಮಕ್ಕಳಲ್ಲಿ ಎಂತಹ ಪ್ರತಿಭೆ ಇತ್ತೋ ಗೊತ್ತಿಲ್ಲ. ಮಕ್ಕಳ ಸಾವಿನಿಂದ ದೇಶಕ್ಕೆ ತುಂಬಲಾರದ ನಷ್ಟ ಉಂಟಾಗಿದೆ. ಅದನ್ನು ನಾವು ಹೇಳುವುದಕ್ಕೆ ವ್ಯಾಖ್ಯಾನ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. I am only trying to explain to

the Chair the magnitude and the seriousness that are involved in this matter and the amount of callousness, irresponsibility and absolute disregard shown to the rules that are governing the State. that have come into force in the interest and the well being of the people of the State. This has been totally neglected. ಯಾಕೆ ಮಾಡಿದರೂ ? ಪರಿಸ್ಥಿತಿ ಏನು ಬಂದಿತ್ತು ? ಕಾರಣವೇನಿತ್ತು ? ಈ ಎಲ್ಲಾ ಅಂಶಗಳನ್ನು ಕೂಡ ಗಮನಕ್ಕೆ ತೆಗೆದುಕೊಂಡು ಹೋದರೆ ಸಹಜವಾಗಿಯೂ ಕೂಡ ಮನಸ್ಸಿಗೆ ನೋವಾಗುವಂತಹ ವಿಚಾರ. ಈಗ ಕಾನೂನುಗಳನ್ನು ಕೆಲವು ನಿಯಮಗಳನ್ನು ನಾವು ಯಾಕೆ ಜಾರಿಗೆ ತರುತ್ತೇವೆ. ಆ ಒಂದು ಹಕ್ಕು ಕೂಡ ಈ ಸದನಕ್ಕೆ ಇದೆ. ಸಮಾಜದಲ್ಲಿ ನಡೆಯತಕ್ಕಂತಹ ನಡೆದಿರತಕ್ಕಂತಹ ಘಟನೆಗಳ ಹಿನ್ನಲೆಯನ್ನು ಮನಸ್ಸಿನಲ್ಲಿಟ್ಟುಕೊಂಡು ನಡೆಯುವಂತಹ ಅನಾಹುತ, ದುರಂತಗಳನ್ನು ತಡೆಗಟ್ಟುವುದರ ಸಲುವಾಗಿ ನಿಯಮ ಮತ್ತು ಕಾನೂನು ಗಳನ್ನು ಜಾರಿಗೆತರುತ್ತೇವೆ. ಇವತ್ತು ಲೆಫ್ಟ್‌ಗೆ ಹೋಗಬೇಕು, ನೋ ಎಂಟರಿ, ಎಂದು ಟ್ರಾಫಿಕ್ ಪೋಲೀಸ್ ಸಿಗ್ನಲ್‌ಗಳು ಇರುತ್ತವೆ. ದ್ವಿಚಕ್ರ ವಾಹನಗಳಲ್ಲಿ ಪ್ರಯಾಣಮಾಡುವಾಗ ಹೆಲ್ಮೆಟ್ ಹಾಕಿ ಕೊಂಡು ಪ್ರಯಾಣ ಮಾಡಬೇಕೆಂದು ನಿಯಮ ಇರುತ್ತದೆ. ಆದರೆ, ನೋ ಎಂಟರಿ ಎಂದು ಇರುವಕಡೆ ಹೋಗಬಹುದು, ಎಡಕ್ಕೆ ಹೋಗಿ ಎನ್ನುವ ಕಡೆ ಕೂಡ ಹೋಗಬಹುದು, ಹೆಲ್ಮೆಟ್ ಹಾಕದಲೇ ಪ್ರಯಾಣ ಮಾಡಬಹುದು, ಈರೀತಿ ಇರುವುದರ ಅರ್ಥವೇನು ? ಕಾನೂನುಗಳನ್ನು ಅನುಷ್ಠಾನಕೆ ತಂದು, ಕರೆಕ್ಟಾಗಿ ಸಮಯೋಚಿತವಾಗಿ, ವಿವೇಚನೆಯಿಂದ ಕೆಲಸಮಾಡುವುದಕ್ಕೆ ನಿಮ್ಮ ಅಧಿಕಾರಿಗಳಿಗೆ ಕಷ್ಟವೇನು ?. ಇವತ್ತು ಗಾಯಾಳುಗಳಿಗೆ ಒಂದು ಸಾವಿರ ರೂಪಾಯಿಗಳು, ಮೃತಪಟ್ಟವರಿಗೆ ಕೊಡ ತಕ್ಕಂತಹ ಐದು ಸಾವಿರರೂಪಾಯಿಗಳು ಅಥವಾ ಈ ಸಭೆಯ ಮೂಲಕ ಕಳುಹಿಸತಕ್ಕಂತಹ ಸಂತಾಪ ವಾಗಲೀ ಅವರ ಕುಟುಂಬಗಳಿಗೆ ಮತ್ತು ದೇಶಕ್ಕೆಆಗಿರುವ ನಷ್ಟವನ್ನು ತಡೆಗಟ್ಟುವುದಕ್ಕೆ ಸರಿಸಮಾನ ವಾದ ಪರಿಹಾರವೇ ?. ಇದಕ್ಕೆ ಪರಿಹಾರವೇನು ತಾವೇ ಹೇಳಿ ?. ನಾನು ರಾಜಕೀಯವಾಗಿ ಭಾಷಣ ಮಾಡುತ್ತಿಲ್ಲ. ಸರ್ಕಸ್ಸಿನವರು ಮಕ್ಕಳನ್ನು ಕೊಲ್ಲಬೇಕೆಂದು ಶೋ ತೋರಲಿಲ್ಲ. ನೋಡಲಿಕ್ಕೆ ಹೋದ ಮಕ್ಕಳು ಸಾಯಬೇಕೆಂದು ಹೋಗಲಿಲ್ಲ. ಅಧಿಕಾರಿಗಳು ಕೂಡ ಮಕ್ಕಳನ್ನು ಸಾಯಿಸಬೇಕೆಂದೇನೂ ಪರವಾನಗಿ ಕೊಟ್ಟಿಲ್ಲ. ಸರ್ಕಾರದ ಖಜಾನೆಯಿಂದ ಸಂಬಳವನ್ನು ಪಡೆಯುತ್ತಿರುವ ಅಧಿಕಾರಿಗಳು ಬೇಜವಾಬ್ದಾರಿಯಿಂದ ವರ್ತಿಸದೆ ಜವಾಬ್ದಾರಿಯಿಂದ ವರ್ತಿಸಬೇಕು. ಅಧಿಕಾರಕೊಟ್ಟು ಕೂಡಿಸಿರು ತ್ತಾರೆ, ಇವೆಲ್ಲವನ್ನೂ ಮರೆತು ಬೇಜವಾಬ್ದಾರಿಯಿಂದ ವರ್ತಿಸಿ ದೇಶಕ್ಕೆ ಮತ್ತು ರಾಜ್ಯಕ್ಕೆ ಆಗಿರ ತಕ್ಕಂತಹ ನಷ್ಟಕ್ಕೆ ಅಪಘಾತಕೆ ಅಧಿಕಾರಿಗಳೇ ಕಾರಣವೆಂದು ಹೇಳಿ ಈ ವಿಷಯವನ್ನು ಸಭೆಯ ಮುಖಾಂ ತರ ಮುಖ್ಯಮಂತ್ರಿ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಬೇರೆ ಯಾರೇ ಕಾರಣರಾಗಿದ್ದರೂ, ಸರ್ಕಸ್ ಶೋ ನಡೆಸುವುದಕ್ಕೆ ಯಾರು ಅವಕಾಶ ಮಾಡಿಕೊಟ್ಟಿದ್ದರೂ, ಲೈಸೆನ್ಸ್ ಯಾರು ಕೊಟ್ಟಿದ್ದರು ಅಂತಹವರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಎಚ್ಚರಿಕೆ ವಹಿಸಬೇಕು ಎಂದು ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಕರ್ನಾಟಕ ಪೋಲೀಸ್ ಆಕ್ಟ್ ಕೂಡ ಲೈಸನ್ಸ್ ಅಥಾರಿಟಿ ಮೆಟ್ರೋಪಾಲಿಟನ್ ಸಿಟಿ ಇವರಿಗೆ ಈ ಅಧಿಕಾರ ಇದೆ. ಸೆಕ್ಷನ್ ೩೧ರಲ್ಲಿ ಈ ರೀತಿ ಇದೆ.

> "[Prohibiting the keeping of places of public for amusement or entertainment or assembly in order to prevent, obstruction, inconvenience annoyance, risk, danger or damage to the residents or passengers in the vicinity"
> "Regulate the means of entrance and exit at places of public amusement or entertainment or assembly and providing for the maintenance of public sety and the prevention of disturbance threat.]"

ಯಾವ ಕಾರಣದಿಂದಲೂ ಕೂಡ ಈ ಒಂದು ಸರ್ಕಸ್ ಆಗಲಿ, ಬೇರೆ ಯಾವುದೇ ಪ್ರದರ್ಶನವಾಗಲಿ ನಡೆಸುವುದಕ್ಕೆ ಅಮ್ಯೂಸ್‌ಮೆಂಟ್ ಹಾಕಿಕೊಂಡಿರತಕ್ಕ ಕಾನೂನು ಮತ್ತು ನಿಯಮಗಳನ್ನು ಅವಲೋಕನ ಮಾಡಿದ್ದರೆ ಬಹುಶಃ ಈ ರೀತಿ ಆಗುತ್ತಿರಲಿಲ್ಲವೆಂದು ನನ್ನ ಒಂದು ಅಭಿಪ್ರಾಯ. ಅದನ್ನು ಎನ್‌ಕ್ವೈಯರಿ ಮಾಡುವುದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಒಪ್ಪಿಕೊಂಡಿದ್ದಾರೆ. ಮಾನ್ಯ ಸದಸ್ಯರಾದ

ಬೊಮ್ಮಾಯಿಯವರು ಹೇಳಿದಹಾಗೆ ಜ್ಯುಡಿಶಿಯಲ್ ಎನ್‌ಕ್ವಾಯರಿ ಯಾಗಬೇಕು. Judicial enquiry by a sitting judge of the High Court. ಆಗಬೇಕು ಖಂಡಿತವಾಗಿಯೂ ಇದರಲ್ಲಿ ಮೇಲ್ನೋಟಕ್ಕೆ ಕಷ್ಟವಾಗುದಿಲ್ಲ, ವಿಚಾರಗಳು ಸ್ಪಷ್ಟವಾಗಿ ಗೋಚರವಾಗುತ್ತವೆ, ಮತು ಅರ್ಥವಾಗುತ್ತದೆ. ಯಾವುದೇ ರೀತಿಯ ಒತ್ತಡಕ್ಕೆ ಪ್ರಭಾವಕ್ಕೆ ಮಣಿದು ಕಾನೂನು ಉಲ್ಲಂಘನೆ ಮಾಡಿದ್ದರೆ ಈ ಒಂದು ದುರ್ಘಟನೆ ಆಗುವುದಕ್ಕೆ ಕಾರಣವಾಗಿರುತ್ತದೆ. ನಾವೆಲ್ಲರೂ ಮೂಕ ಪ್ರೇಕ್ಷಕ ರಾಗಿ, ನಿಸ್ಸಾಯಕರಾಗಿರತಕ್ಕಂತಹ ಸ್ಥಿತಿ ಬಂದಿದೆ. ಈ ಸಂದರ್ಭದಲ್ಲಿ ಮುಂದೆ ಬಂದಿರತಕ್ಕಂತಹ ಅನೇಕ ಸಂಘಸಂಸ್ಥೆಗಳ ಸ್ವಯಂಸೇವಕರಿಗೆ ನಮ್ಮ ಅಭಿನಂದನೆಗಳನ್ನು ಸಲ್ಲಿಸಬೇಕು. ಮೃತರ ಕುಟುಂಬ ಗಳಿಗೆ ನಾನಾದರೂ ವೈಯಕ್ತಿಕವಾಗಿ ತಿಳಿಸತಕ್ಕಂಥದ್ದು, ಹೇಳತಕ್ಕಂಥದ್ದು ಏನು ಇಲ್ಲ. ಬಹುಶಃ ಇದೇ ಒಂದು ಅಪಘಾತ ನಮ್ಮ ಕುಟುಂಬಗಳಲ್ಲಿ ಆಗಿದ್ದರೆ ನಮ್ಮ ಪರಿಸ್ಥಿತಿ ಏನಾಗುತ್ತಿತ್ತು ? ಈ ರೀತಿ ಹೇಳ ಲಾರದ ಸ್ಥಿತಿಯಲ್ಲಿ ಅನುಕಂಪವನ್ನು ತಿಳಿಸಿ. ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಮಳ್ಳೂರು ಆನಂದರಾವ್ (ರಾಜಾಜಿನಗರ).—ಮಾನ್ಯ ಅಧ್ಯಕ್ಷರೇ, ನಿನ್ನೆ ನಡೆದಿರ ತಕ್ಕಂತಹ ದುರಂತ ಬಹುಶಃ ಕರ್ನಾಟಕದ ಜನ ಕೇಳಿರಲಿಲ್ಲ, ಕಂಡಿರಲಿಲ್ಲ. ಹೃದಯವಿದ್ರಾವಕ ಎಂದು ಕರೆಯುವುದಾದಾದರೆ ಅದಕ್ಕಿಂಥ ಹೃದಯವನ್ನು ಹಿಂಡತಕ್ಕಂಥಹ ಒಂದು ದುರ್ದೈವ್ಯ ಘಟನೆ ದುರಂತ ನಿನ್ನೆ ನಗರದಲ್ಲಿ ನಡೆದಿದೆ. ಅಲ್ಲಿ ಹೋಗಿ ನೋಡಿದರೆ ದೃಶ್ಯ ಮಕ್ಕಳನ್ನು ಕಳೆದುಕೊಂಡಂತಹವರು, ಅರ್ಧಂಬರ್ಧ ಮೈ ಸುಟ್ಟುಕೊಂಡಂತಹವರು, ಸುಟ್ಟವರನ್ನು ಎತ್ತಿಕೊಂಡು ಹೋಗುವ ದೃಶ್ಯ ಆಸ್ಪತ್ರೆ ಯಲ್ಲಿ ಗಾಯಾಳುಗಳನ್ನು ಸಾಲುಗಟ್ಟಿ ಮಲಗಿಸಿರುವುದು. ಶವಗಳನ್ನು ಇಟ್ಟಿರುವುದನ್ನು ನೋಡಿದರೆ ಕಲ್ಲು ಕೂಡ ಕರಗಿ ಹೋಗುವಂತಹ ಸ್ಥಿತಿ ಇತ್ತು, ಪತ್ರಿಕೆಗಳಲ್ಲಿ ಪ್ರಕಟವಾಗಿದೆ, ಅದನ್ನು ಪ್ರತ್ಯಕ್ಷ ವಾಗಿ ಕಂಡಿದ್ದೇನೆ. ಇಡೀ ಕರ್ನಾಟಕದ ಜನತೆ ಮೂಕವಾಗಿದೆ. ಅವರ ಹೃದಯ ದುಃಖತಪ್ತವಾಗಿದೆ. ಇದಕ್ಕೆ ಯಾವ ಪದಗಳನ್ನು ಬಳಸಿ ಹೇಳಿದರೂ ಕೂಡ ಕಡಿಮೆ. ಇದು ಸಾರ್ವಭೌಮ ಪ್ರತಿನಿಧಿಗಳ ಸಭೆ. ನಮ್ಮ ದುಃಖವನ್ನು ಮತ್ತು ಅನುತಾಪವನ್ನು ಯಾರು ಜೀವ ಕಳೆದುಕೊಂಡಿದ್ದಾರೆ ಅಂತಹವರ ಕುಟುಂಬಗಳಿಗೆ ತಿಳಿಸುವುದು ನಮ್ಮ ಕರ್ತವ್ಯಹಾಗೂ ಸೆ ಜೊತೆಗೆ ನಮ್ಮ ಹೃದಯದ ನೋವನ್ನು ತಿಳಿಸಿಕೊಡು ತ್ತೇವೆ. ಮುಖ್ಯಮಂತ್ರಿಗಳು ಹೇಳಿಕೆಯನ್ನು ಕೊಟ್ಟಿದ್ದಾರೆ, ಸಕಾಲಿಕವಾಗಿ ಏನೇನು ಕಾರ್ಯಕ್ರಮ ವನ್ನು ತೆಗೆದುಕೊಳ್ಳಬೇಕೋ ತೆಗೆದುಕೊಂಡಿದ್ದಾರೆ. ಸಾರ್ವಜನಿಕರು ಮುಂದೆ ಬಂದು ಮತ್ತಷ್ಟು ಆಗುವ ದುರಂತವನ್ನು ತಪ್ಪಿಸಿದ್ದಾರೆ. ದುರಂತ ನಡೆದ ಜಾಗ ತುಂಬ ಚಿಕ್ಕದು. ಸರ್ಕಾರ ಸಂತ್ರಸ್ಥ ಕುಟುಂಬಗಳಿಗೆ ನೆರವನ್ನು ಕೊಡುತ್ತೇವೆ ಎಂದು ಹೇಳಿದ್ದಾರೆ. ಈ ಸಭೆ ಕಳುಹಿಸುವ ದುಃಖಸೂಚಕ ನಿಲುವಳಿ ಆಯಾ ಕುಟುಂಬಗಳಿಗೆ ಮುಟ್ಟಬೇಕು. ಆದರೆ, ಇದು ಯಾವುದರಿಂದ ಕೂಡ ಅವರ ಮನಸ್ಸಿಗೆ ದುರಂತದಿಂದ ತಟ್ಟಿರತಕ್ಕಂತಹ, ಉಂಟಾಗಿರತಕ್ಕಂತಹ ನಷ್ಟವನ್ನು ಸರಿಪಡಿಸುವುದಕ್ಕೆ ಸಾಧ್ಯವಿಲ್ಲ.

೨–೦೦ ಪಿ.ಎಂ.

ಈ ಬಗ್ಗೆ ಕೆಲವು ಬಿಗಿ ಕ್ರಮಗಳನ್ನು ಸರ್ಕಾರ ಕೈಕೊಂಡರೆ ಅವರ ದುಃಖವನ್ನು ಸ್ವಲ್ಪ ಕಡಿಮೆ ಮಾಡಬಹುದೆಂದು ನನಗನ್ನಿಸುತ್ತದೆ. ಇದರಲ್ಲಿ ಎರಡು ಮುಖ್ಯವಾದ ವಿಚಾರಗಳಿವೆ. ಮೊದಲನೆಯ ದಾಗಿ, ಕಳೆದ ಸಲ ಬೆಂಗಳೂರಿನ ಸಿಟಿ ಮಾರ್ಕೆಟ್ ಬಳಿ ದೀಪಾವಳಿ ಹಬ್ಬದ ಸಲುವಾಗಿ ಇಟ್ಟಿದ್ದ ಪಟಾಕಿ ಅಂಗಡಿಗಳು ಸುಟ್ಟು ಹೋದಾಗ ಅದರಲ್ಲಿ ಕೆಲವರು ಸಜೀವವಾಗಿ ಭಸ್ಮವಾದರು, ಅದಾದನಂತರ ನಮ್ಮ ಅಧಿಕಾರಿಗಳು ಇದಕ್ಕೆ ಲೈಸನ್ಸ್ ಕೊಡುವ ಬಗ್ಗೆ ಸ್ವಲ್ಪ ಯೋಚನೆ ಮಾಡಬೇಕಾಗಿತ್ತು. ಆದರೆ ದುರ್ದೈವದ ಸಂಗತಿ ಎಂದರೆ, ನಮ್ಮ ಅಧಿಕಾರಿಗಳು ಮುನ್ನೆಚ್ಚರಿಕೆ ಕ್ರಮವಾಗಿ ಏನೇನೂ ಯೋಚನೆ ಮಾಡುವುದಿಲ್ಲ. ಇದರಿಂದ ಇಂತಹ ಪ್ರಕರಣಗಳು ನಡೆದುಕೊಂಡು ಹೋಗುತ್ತಿರುತ್ತವೆ. ದುರಂತ ನಡೆದಮೇಲೆ ಅಧಿಕಾರಿಗಳು ಎಚ್ಚರಗೊಳ್ಳುತ್ತಾರೆ. ಎಚ್ಚರಗೊಂಡ ಮೇಲೆ ಲೈಸನ್ಸ್ ಕೊಟ್ಟ ಅಧಿಕಾರಿ ಗಳು ಒಂದು ಪ್ರಾಣವನ್ನಾದರೂ ವಾಪಸ್ ಕೊಡುತ್ತಾರೆಯೇ ? ಈ ಅಧಿಕಾರಿಗಳು ಏನಿದ್ದರೂ ಏರ್‌ಕಂಡೀಷನ್ ಕೊಠಡಿಯಲ್ಲಿ ಕುಳಿತುಕೊಂಡು ಲೈಸನ್ಸ್ ಕೊಡುತ್ತಾರೆಯೇ ಹೊರತು ಸ್ಥಳ ಸರಿಯಾಗಿದೆಯೇ ಎಂದು ಹೋಗಿ ನೋಡುವುದಿಲ್ಲ. ಈಗ ಸುಟ್ಟು ಹೋದ ಸರ್ಕಸ್ ಇದ್ದ ಜಾಗ ಬಹಳ ಕಿಕ್ಕಿರಿದ ಜಾಗದಲ್ಲಿತ್ತು. ಆ ಜಾಗದಲ್ಲಿ ಸಾಮಾನ್ಯ ದಿನಗಳಲ್ಲಿಯೇ ಹೋಗಲು ಸಾಧ್ಯವಿರುವುದಿಲ್ಲ

ಅಷ್ಟೊಂದು ಜನಸಂದಣಿ ಇರುತ್ತದೆ. ಇದರ ಜೊತೆಗೆ ಆ ಸರ್ಕಸ್‌ನ ಎರಡೂ ಕಡೆಗಳಲ್ಲಿ ಅಂಡರ್ ಬ್ರಿಡ್ಜ್‌ಗಳಿವೆ. ಮತ್ತೊಂದು ಕಡೆಯಲ್ಲಿ ಸ್ಲಮ್ ಏರಿಯಾ ಇದೆ. ಒಂದು ಸಲ ಸರ್ಕಸ್ ಬಿಟ್ಟರೆ ೩-೪ ಸಾವಿರ ಜನರು ಹೊರ ಬರುತ್ತಾರೆ. ಅವರೆಲ್ಲರೂ ಅಲ್ಲಿರುವಂತಹ ರೈಲ್ವೆ ಲೈನ್ ದಾಟಿ ಬರಬೇಕಾದರೆ ಇನ್ನೊಂದು ರೀತಿಯ ಸರ್ಕಸ್ ಮಾಡಬೇಕಾಗುತ್ತದೆ. ಇಂತಹ ಜಾಗದಲ್ಲಿ ಸರ್ಕಸ್ ನಡೆಸಲು ಲೈಸೆನ್ಸ್ ಹೇಗೆ ಕೊಟ್ಟರೋ ನನಗೆ ಅರ್ಥವಾಗುವುದಿಲ್ಲ. ಮಾನ್ಯ ಬೊಮ್ಮಾಯಿ ಅವರು ಮತ್ತು ಮಾನ್ಯ ಪಟೇಲ್ ಅವರು ಹೇಳಿದಂತೆ, ಆ ಜಾಗವನ್ನು ನೋಡಿದಂಥ ಎಲ್ಲೂ ಈ ಮಾತನ್ನು ಒಪ್ಪಿಕೊಳ್ಳುತ್ತಾರೆ, ಜಕ್ಕರಾಯನ ಕೆರೆಯ ಪಕ್ಕದಲ್ಲಿ ಈ ಸರ್ಕಸ್ ನಡೆಸಲು ಅನುಮತಿ ಕೊಡಬಹುದಾಗಿತ್ತು. ಆದರೆ ಆ ರೀತಿ ಮಾಡದೆ ಹುಡುಕಿಹುಡುಕಿ ಈ ಜಾಗದಲ್ಲಿ ಸರ್ಕಸ್ ನಡೆಸಲು ಅನುಮತಿ ಕೊಟ್ಟು ನೂರಾರು ಮಕ್ಕಳನ್ನು ಬಲಿ ತೆಗೆದುಕೊಂಡರು. ನಾನು ನೇರವಾಗಿ ಯಾವುದೇ ಅಧಿಕಾರಿಗಳಮೇಲೆ ಅಪಾದನೆ ಮಾಡುವುದಿಲ್ಲ. ಒಟ್ಟಿನಲ್ಲಿ ಇದಕ್ಕೆ ಲೈಸನ್ಸ್ ಕೊಟ್ಟವರು ಪೋಲೀಸ್ ಅಧಿಕಾರಿಗಳು ಇರಬಹುದು, ಇಲ್ಲವೇ ಕಾರ್ಪೊರೇಷನ್ ಅಧಿಕಾರಿಗಳು ಇರಬಹುದು, ಇಲ್ಲವೇ ರೆವಿನ್ಯೂ ಅಧಿಕಾರಿಗಳು ಇರಬಹುದು ಆದಕಾರಣ ಈ ಬಗ್ಗೆ ತನಿಖೆ ಮಾಡಿಸಿದರೆ, ಇದಕ್ಕೆ ಯಾರು ಹೊಣೆಗಾರರೆಂಬುದೆಲ್ಲಾ ಹೊರಗಡೆ ಬರುತ್ತದೆಂಬುದು ನನ್ನ ಅಭಿಪ್ರಾಯ. ಎರಡನೆಯದಾಗಿ ಬೆಂಗಳೂರು ನಗರದ ಸುತ್ತಮುತ್ತ ಅನೇಕ ಟೆಂಟ್ ಸಿನಿಮಾ ಮಂದಿರಗಳಿವೆ. ಆರಾರು ತಿಂಗಳುಗಳಿಗೆ ಲೈಸನ್ಸ್ ಕೊಡಬೇಕೆಂದು ನಿಯಮವಿದ್ದರೂ ಸಹ, ಈ ಟೆಂಪರರಿ ಸಿನಿಮಾ ಟೆಂಟ್‌ಗಳು ಖಾಯಂ ಸಿನಿಮಾ ಮಂದಿರಗಳಂತೆಯೇ ಇವೆ. ಇವುಗಳಿಗೆ ಲೈಸನ್ಸ್ ಯಾವರೀತಿ ಕೊಡುತ್ತಾರೋ ನನಗೆ ಅರ್ಥವಾಗುವುದಿಲ್ಲ. ಹಳೆ-ಜಯನಗರದ ಹತ್ತಿರ ಒಂದು ಟೆಂಟ್ ಇದೆ. ಅದು ಯಾವ ರೀತಿ ಇದೆ ಎಂದರೆ, ಒಳಗಡೆ ಗಾಳಿ ಹೋಗುವುದಕ್ಕೆ ಸಾಧ್ಯವಾಗುವುದಿಲ್ಲ, ಆ ರೀತಿ ಮರೆ ಮಾಡಿದ್ದಾರೆ. ಅಲ್ಲಿ ಮ್ಯಾಟಿನಿ ಕೂಡ ನಡೆಯುತ್ತದೆ ಜನರೇನೋ ಸಿನಿಮಾ ನೋಡಬೇಕೆಂಬ ಖಯಾಲಿಯಿಂದ ಹೋಗುತ್ತಾರೆ. ಆದರೆ ಅವರ ಆರೋಗ್ಯದ ಮೇಲೆ ಯಾವ ರೀತಿ ಹಾನಿಯಾಗಬಹುದೆಂಬುದನ್ನು ಈ ಅಧಿಕಾರಿಗಳು ನೋಡಬಾರದೇ ? ಈ ಸಿನಿಮಾ ಟೆಂಟ್‌ಗಳ ಜೊತೆಗೆ ಈಗ ಬೆಂಗಳೂರು ನಗರದಲ್ಲಿ ಹಾಲಿಡೇ-ಆನ್-ಐಸ್ ಎಂಬ ಕಾರ್ಯಕ್ರಮ ಒಂದು ಟೆಂಟ್‌ನಲ್ಲಿ ನಡೆಯುತ್ತಿದೆ. ಅದನ್ನು ನೋಡಲು ಮುಖ್ಯಮಂತ್ರಿಗಳು ಹೋಗಿದ್ದರು. ನಾನೂ ಸಹ ಹೋಗಿದ್ದೆ, ಅಲ್ಲಿ ಸೀಟ್‌ಗಳ ವ್ಯವಸ್ಥೆ ಚೆನ್ನಾಗಿಲ್ಲ. ಎಲ್ಲ ಅವ್ಯವಸ್ಥೆಯಿಂದ ಕೂಡಿದೆ. ನಾನು ಹೋದಾಗ ಹೆಣ್ಣುಮಕ್ಕಳು ದಬದಬಾ ಎಂದು ಬಿದ್ದುಬಿಟ್ಟರು. ಅವರಿಗೆ ದುಡ್ಡು ತೆಗೆದುಕೊಳ್ಳುವುದು ಒಂದು ಗೊತ್ತೇ ಹೊರತು ಸರಿಯಾದ ವ್ಯವಸ್ಥೆ ಇರಬೇಕೆಂಬ ಕಡೆಗೆ ಲಕ್ಷ್ಯ ಕೊಡುವುದಿಲ್ಲ. ಇದನ್ನು ನೋಡಲು ಜನರು ನುಗ್ಗುತ್ತಾರೆ. ಆದಕಾರಣ ಇದರ ಬಗ್ಗೆ ಮುಖ್ಯಮಂತ್ರಿಗಳಲ್ಲಿ ನನ್ನ ಮನವಿ ಏನೆಂದರೆ, ನಮ್ಮ ಅಧಿಕಾರಿಗಳು ಸಿಟಿಮಾರ್ಕೆಟಿನ ದುರಂತದಿಂದ ಪಾಠ ಕಲಿಯಲಿಲ್ಲ, ಈಗ ಈ ಸರ್ಕಸ್‌ನ ಒಂದು ದುರಂತದಿಂದ ನಾವು ಕೇವಲ ಕಂಬನಿ ಸುರಿಸಿದರೆ, ದೇವರು ನಮ್ಮನ್ನು ಕ್ಷಮಿಸುವುದಿಲ್ಲ. ಮತ್ತು ಈ ದುರಂತದಲ್ಲಿ ಮಡಿದವರ ಸಂಬಂಧೀಕರಿಗೆ ಸಂತಾಪ ಸೂಚಕ ನಿರ್ಣಯವನ್ನು ಕಳುಹಿಸಿಕೊಟ್ಟರೆ ದೇವರು ನಮ್ಮನ್ನು ಕ್ಷಮಿಸುವುದಿಲ್ಲ, ಇದರ ಬಗ್ಗೆ ತನಿಖೆಯಾಗಿ ಒಬ್ಬ ಅಧಿಕಾರಿಯನ್ನು ಸಸ್ಪೆಂಡ್ ಮಾಡಬಹುದು ಇಲ್ಲವೇ ನಾಲ್ಕು ಜನ ಅಧಿಕಾರಗಳನ್ನು ಡಿಸ್‌ಮಿಸ್ ಮಾಡಬಹುದು ಹಾಗೂ ಇದರಲ್ಲಿ ನೊಂದವರಿಗೆ ಪರಿಹಾರ ಕೊಡಬಹುದು, ಇಷ್ಟು ಮಾಡಿಬಿಟ್ಟರೆ ದೇವರು ನಮ್ಮನ್ನು ಕ್ಷಮಿಸುವುದಿಲ್ಲ. ದೇವರು ನಮ್ಮನ್ನು ಯಾವಾಗ ಕ್ಷಮಿಸುತ್ತಾನೆಂದರೆ, ಇಂತಹ ತಪ್ಪು ಇನ್ನೊಂದು ಸಲ ಆಗದಂತೆ ನೋಡಿಕೊಂಡಾಗ, ಅಂದರೆ ಈಗ ಲೂಪ್-ಹೋಲ್ಸ್‌ನ್ನು ಪ್ಲಗ್ ಮಾಡಿದರೆ ಈಗ ಆಗಿರುವಂತಹ ಕೃತ್ಯಕ್ಕೆ ನಾವು ಪ್ರಾಯಶ್ಚಿತ ಮಾಡಿಕೊಂಡಂತೆ ಆಗುತ್ತದೆ. ಆದ್ದರಿಂದ ಕೂಡಲೇ ಸಂಬಂಧಪಟ್ಟ ಅಧಿಕಾರಗಳನ್ನು ಎಲ್ಲ ಟೆಂಟ್ ಸಿನಿಮಾ ಮಂದಿರಗಳಿಗೂ ಕಳುಹಿಸಿ ಕೊಟ್ಟು, ಅಲ್ಲಿ ಏನಾದರು ನಿಯಮಗಳಿಗೆ ವಿರುದ್ಧವಾಗಿ ಸೂಜಿಮನೆಯಷ್ಟು ಲೋಪ ಕಂಡುಬಂದರೂ ಸಹ ಲೈಸನ್ಸ್ ರದ್ದು ಮಾಡಿಸಬೇಕೆಂದು ಮುಖ್ಯಮಂತ್ರಿಗಳಲ್ಲಿ ಅರಿಕೆಮಾಡಿಕೊಳ್ಳುತ್ತೇನೆ. ಈಗ ಮೃತರ ಆತ್ಮಕ್ಕೆ ಶಾಂತಿ ಕೋರುವ ಹಾಗು ಮೃತರ ಕುಟುಂಬಗಳಿಗೆ ಸ್ವಾಂತನ ನೀಡುವ ಈ ಸೂಚನೆಯನ್ನು ಈ ಸಭೆಯ ಮುಂದೆ ಏನು ತರಲಾಗಿದೆ ಇದಕ್ಕೆ ಇಡೀ ಸಭೆಯೇ ಈ ದುಃಖದಲ್ಲಿ ಭಾಗಿಯಾಗಿದೆ. ನನ್ನ ಮತ್ತು ಹೃದಯದ ಕಳಕಳಿಯ ಅಶ್ರುಗಳನ್ನು ಸಹ ಅದಕ್ಕೆ ಸೇರಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಡಿ. ದೇವರಾಜ ಅರಸ್ (ಹುಣಸೂರು).—ಮಾನ್ಯ ಅಧ್ಯಕ್ಷರೇ, ಸರ್ಕಾರದ ವತಿಯಿಂದ ಹಾಗೂ ಸರ್ಕಾರ ನಡೆಸುತ್ತಿರುವ ಪಕ್ಷದ ವತಿಯಿಂದ ಮಾನ್ಯ ಮುಖ್ಯಮಂತ್ರಿಗಳು ಒಂದು ಬರವಣಿಗೆ ಹೇಳಿಕೆಯನ್ನು ಇಲ್ಲಿ ಮಂಡನೆ ಮಾಡಿದ್ದಾರೆ. ಇದರಲ್ಲಿ ಎರಡು ವಿಚಾರಗಳನ್ನು ಹೇಳಿದ್ದಾರೆ. ಮೊದಲನೆಯದಾಗಿ ಈ ದುರಂತದಲ್ಲಿ ಸತ್ತವರಿಗೆ ೫ ಸಾವಿರ ರೂಪಾಯಿಗಳ ಪ್ರಕಾರ ಹಾಗೂ ಗಾಯ ಗೊಂಡವರಿಗೆ ಒಂದು ಸಾವಿರ ರೂಪಾಯಿಗಳ ಪ್ರಕಾರ ಪರಿಹಾರ ನೀಡಿರುವುದು. ಎರಡನೆಯದಾಗಿ ಈ ದುರಂತ ನಡೆದಿರುವ ಬಗ್ಗೆ ಕಮಿಷನ್ ಆಫ್ ಎನ್‌ಕ್ವೈರಿ ಆಕ್ಟ್ ಪ್ರಕಾರ ತನಿಖೆ ನಡೆಸುತ್ತೇವೆಂದು ಹೇಳಿದ್ದಾರೆ. ಸರ್ಕಾರ ಮನಸ್ಸು ಮಾಡಿ ಈ ರೀತಿ ತನಿಖೆ ನಡೆಸುವುದರ ಬಗ್ಗೆ ಮುಂದೆ ಬಂದಿರುವುದಕ್ಕಾಗಿ ನಮಗೆಲ್ಲರಿಗೂ ಸಮಾಧಾನವಾಗಿದೆ. ನಮ್ಮ ಮನಸ್ಸಿಗೆ ಬಹಳ ನೋವಾಗುತ್ತಿರುವುದು, ಮೊದಲನೆಯ ದಾಗಿ ಈಗ ಯಾರು ಮೃತರಾಗಿದ್ದಾರೆ, ಯಾರು ಗಾಯಗೊಂಡಿದ್ದಾರೆ. ಅವರ ಮನೆಯ ಜನರಿಗೆ, ಅವರ ತಂದೆತಾಯಿಗಳಿಗೆ, ಅವರ ಬಂಧುಬಳಗದವರಿಗೆ ಆಗಿರುವಂತಹ ನೋವು ಎಷ್ಟು ಎಂಬುದನ್ನು ಹೇಳುವು ದಕ್ಕಾಗುವುದಿಲ್ಲ. ಅದರಲ್ಲಿಯೂ ಈ ದುರಂತದಲ್ಲಿ ಮಕ್ಕಳೇ ಜಾಸ್ತಿ ಸತ್ತಿರುವುದು. ಪುತ್ರ ಶೋಕಂ ನಿರಂತರಂ ಎಂದು ಹೇಳುತ್ತಾರೆ. ಯಾರು ಸತ್ತರೂ ಮರೆಯುತ್ತೇವೆ. ಆದರೆ ಮಕ್ಕಳು ಸತ್ತರೆ, ಆ ಒಂದು ದುಃಖವನ್ನು ಆ ಮಕ್ಕಳ ತಂದೆತಾಯಿಗಳು ಸಾಯುವವರೆಗೂ ಮರೆಯುವುದಿಲ್ಲ. ಈ ಬಗ್ಗೆ ನನಗೂ ಒಂದು ರೀತಿಯ ಅನುಭವವಾಗಿದೆ. ದುರ್ದೈವದ ಸಂಗತಿಯೆಂದರೆ, ಈ ದುರಂತದಲ್ಲಿ ಮಕ್ಕಳೇ ಜಾಸ್ತಿ ಸಂಖ್ಯೆಯಲ್ಲಿ ಸತ್ತಿವೆ. ಈ ಮಕ್ಕಳ ತಂದೆತಾಯಿಗಳಿಗೆ ಈ ಮಕ್ಕಳ ಸಾವಿನಿಂದ ಆದಂಥ ದುಃಖ ವನ್ನು ಸಹಿಸಿಕೊಳ್ಳುವಂತಹ ಶಕ್ತಿಯನ್ನು ಕೊಡಲಿ ಎಂದು ದೇವರಲ್ಲಿ ಮೊರೆ ಇಡುವುದನ್ನು ಒಂದನ್ನು ಬಿಟ್ಟರೆ ಬೇರೆ ಏನು ಮಾಡಲೂ ನಮ್ಮ ಕೈಯಲ್ಲಿ ಆಗುವುದಿಲ್ಲ. ಈ ದುರಂತದಲ್ಲಿ ದೊಡ್ಡವರು, ಹೆಣ್ಣು ಮಕ್ಕಳು ಹಾಗೂ ಗಂಡಸರು ಸತ್ತಿದ್ದಾರೆಂಬ ವರದಿ ಇದೆ. ಸರ್ಕಾರದ ಲೆಕ್ಕದಲ್ಲಿ ೬೭ ಜನರು ಸತ್ತಿದ್ದಾರೆ. ಪತ್ರಿಕೆಗಳಲ್ಲಿಯೂ ಇದೇರೀತಿ ಬಂದಿರಬಹುದು. ಆದರೆ ಆಸ್ಪತ್ರೆಯಲ್ಲಿ ಇನ್ನೂ ೮೮ ಜನರಿದ್ದಾರೆ. ಈ ೮೮ ಜನದಲ್ಲಿ ಬಹು ಜನರು ಬದುಕುಳಿಯುವುದು. ಅಸಂಭವ. ನಾನು ಅವರನ್ನು ಹೋಗಿ ನೋಡಿಲ್ಲ. ಹೋಗಿ ನೋಡಬೇಕೆಂದಿದ್ದೇನೆ. ಇವರುಗಳ ಪೈಕಿ ಶೇಕಡಾ ೩೦ ಭಾಗದಷ್ಟು ಸುಟ್ಟಿರುವವರಿದ್ದಾರೆ, ಅದೇರೀತಿ ಶೇಕಡಾ ೬೦ ರಷ್ಟು, ೭೦ರಷ್ಟು, ೮೦ರಷ್ಟು ಸುಟ್ಟಿರುವವರಿದ್ದಾರೆಂದು ನಾನು ಕೇಳಿದೆ. ಶೇಕಡಾ ೨೦ ರಿಂದ ೩೦ ರಷ್ಟು ಸುಟ್ಟಿರುವವರನ್ನು ಬದುಕಿಸುವುದಕ್ಕೆ ಕೆಲಮಟ್ಟಿಗೆ ಅವಕಾಶವಿದೆ ಎಂದು ಕೆಲವು ಡಾಕ್ಟರ್‌ಗಳು ಹೇಳುತ್ತಾರೆ.

ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಅಪಘಾತವಾಗಿರತಕ್ಕ ಕಾಲದಲ್ಲಿ, ಇಷ್ಟೊಂದು ಸಾವು ನೋವು ಆಗಿರತಕ್ಕ ಕಾಲದಲ್ಲಿ ಇದನ್ನು ಎದುರಿಸುವುದಕ್ಕೆ ಅಲ್ಲಿ ಸಾಕಷ್ಟು ಔಷಧಿ ಮತ್ತಿತರ ಉಪಕರಣಗಳು ಇದೆಯೋ ಇಲ್ಲವೋ ಗೊತ್ತಿಲ್ಲ. ಇನ್‌ಫೆಕ್ಷನ್ ಆಯಿತು ಎಂದರೆ ಅದು ೨-೩ ದಿವಸ ಕಳೆಯುವುದರೊಳ ಗಾಗಿ ಅದು ಇನ್ನು ಜಾಸ್ತಿಯಾಗಿ ತೊಂದರೆಯಾಗುತ್ತದೆಂದು ಕೇಳಿ ತಿಳಿದುಕೊಂಡಿದ್ದೇನೆ. ಅದರಿಂದ ಅಕ್ಕ ಪಕ್ಕದವರಿಗೂ ಈ ಇನ್‌ಫೆಕ್ಷನ್ ಹರಡುವ ಸಂಭವ ಹೆಚ್ಚೆಂದು ಕೇಳಿದ್ದೇನೆ. ಆದುದರಿಂದ ಈ ಇನ್‌ಫೆಕ್ಷನ್ ಬಾಕಿ ಅಲ್ಪ ಸ್ವಲ್ಪ ಗಾಯವಾಗಿರತಕ್ಕವರಿಗೆ ತಗುಲಿದರೆ ಅವರು ಸಹ ಬದುಕುವುದು ಅಸಂಭವ ಎಂದು ಡಾಕ್ಟರ್‌ಗಳು ಹೇಳುತ್ತಾರೆ. ಆದುದರಿಂದ ಇಂಥಾ ಸಂದರ್ಭಗಳಲ್ಲಿ ಸರ್ಕಾರ ಕೂಡಲೇ ಎಚ್ಚರಿಕೆ ವಹಿಸಿ ಅಲ್ಲಿಗೆ ಇನ್ನು ಹೆಚ್ಚಿನ ಡಾಕ್ಟರ್‌ಗಳ ಸಹಕಾರ ಬೇಕಾಗಿದ್ದರೆ ಸಹಕಾರ ಪಡೆದುಕೊಂಡು ಮತ್ತು ಅಲ್ಲಿಗೆ ಬೇಕಾಗತಕ್ಕ ಔಷಧಿಗಳು ನಮ್ಮ ದೇಶದಲ್ಲಿ ಸಿಗದಿದ್ದರೆ ಬೇಕಾದರೆ ಹೊರದೇಶಗಳಿಂದ ತಕ್ಷಣವೇ ತರಿಸಿಕೊಳ್ಳಿ. ಅಲ್ಲಿ ಔಷಧಿ ಸಪ್ಲೈ ಸರಿಯಾಗಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಆದುದ ರಿಂದ ದುಡ್ಡು ಎಷ್ಟೇ ಆದರೂ ಪರವಾಗಿಲ್ಲ ಆ ಮಕ್ಕಳನ್ನು ಬದುಕಿಸುವುದಕ್ಕೆ ಪ್ರಯತ್ನ ಮಾಡಲಿ ಎಂದು ನಾನು ಸಲಹೆ ಮಾಡುತ್ತೇನೆ. ಎರಡನೆಯದಾಗಿ ಅಷ್ಟೊಂದು ಜನ ವಿಪರೀತವಾಗಿ ನುಗ್ಗಿದರೆ ಆಸ್ಪತ್ರೆಯಲ್ಲಿ ಕೆಲಸ ಮಾಡುವುದು ಕಷ್ಟ. ಆದುದರಿಂದ ಅಲ್ಲಿ ಪೋಲೀಸಿನವರ ಕಾವಲು ಹಾಕಿದ್ದೀರಿ. ಯಾರನ್ನೂ ಒಳಗಡೆ ಬಿಡುತ್ತಿಲ್ಲವೆಂದು ಕೇಳಿದ್ದೇನೆ. ಇದರಿಂದ ಮಕ್ಕಳನ್ನು ಕಾಣದೇ ಅವರ ತಂದೆ ತಾಯಿಗಳ ವ್ಯಥೆ ಇನ್ನೂ ಹೆಚ್ಚಾಗಿದೆ. ಅದಕ್ಕೆ ಅಧ್ಯಕ್ಷರೇ ತಮ್ಮ ಮೂಲಕ ಸರ್ಕಾರದವರಲ್ಲಿ ನಾನು ಕೇಳಿಕೊಳ್ಳುವುದಿಷ್ಟೆ, ಯಾರ ಯಾರ ಮನೆಯಲ್ಲಿ ಹುಡುಗರು ಕಾಣೆಯಾಗಿದ್ದಾರೋ ಅಂಥವರು ಕೂಡಲೇ ಬಂದು ಅವರ ಹೆಸರುಗಳನ್ನು ಕೊಡಲಿ ಎನ್ನುವ ಬಗ್ಗೆ ರೇಡಿಯೋ ಮೂಲಕ ಅನೌನ್ಸ್ ಮಾಡಿಸಿ ಬಿಡಿ. ಅನಂತರ ಆ ಒಂದು ಪಟ್ಟಿಯನ್ನು ಮಾಡಿ, ಅಂಥವರನ್ನು ಮಾತ್ರ ಆಸ್ಪತ್ರೆಯಲ್ಲಿ ಅವರ ಮಕ್ಕಳನ್ನು ನೋಡುವುದಕ್ಕೆ ಅವಕಾಶ ಮಾಡಿ ಕೊಡಿ ಇಲ್ಲದೇ ಹೋದರೆ ಅವರು ಬೀದಿಯಲ್ಲಿ ಕೂತರೆ

ಅವರ ಹೊಟ್ಟೆ ಉರಿ ಜಾಸ್ತಿಯಾಗುತ್ತದೆ, ಅವರಿಗೆ ಹೃದಯ ಬೇನೆ ಜಾಸ್ತಿಯಾಗುತ್ತದೆ. ಆದುದರಿಂದ ಈ ವ್ಯವಸೆ ಯನ್ನು ಕೂಡಲೇ ಮಾಡಿಸಿ ಎಂದು ನಾನು ಸಲಹೆ ಮಾಡುತ್ತೇನೆ.

ಸ್ವಾಮಿ, ೧೫ ದಿವಸಗಳಾಗಿರಬಹುದು ನಾನು ಹುಬ್ಬಳ್ಳಿಯಿಂದ ಇಲ್ಲಿಗೆ ರೈಲಿನಲ್ಲಿ ಬರುತ್ತಿದೆ. ಬೆಳಗಿನ ಹೊತ್ತು ೮½ ಗಂಟೆಗೆ ರೈಲ್ವೇ ಸ್ಟೇಷನ್ ಸಮೀಪಿಸುತ್ತಿರುವಾಗ ಒಂದು ಡೇರಾ ನೋಡಿದೆ. ಅದು ಸರ್ಕಸ್ ಡೇರೆ ಹಾಗೆ ಇತ್ತು, ಅಲ್ಲಿ ಒಂಟೆಗಳು, ಆನೆಗಳು ಪಕ್ಕದಲ್ಲಿ ನಿಂತಿದ್ದವು. ಅದನ್ನು ನೋಡಿ ಸರ್ಕಸ್ ಇರಬಹುದೆಂದು ಮನಸ್ಸಿಗೆ ಹೊಳೆಯಿತು. ಆಗ ಮನಸ್ಸಿಗೆ ಇನ್ನೊಂದು ವಿಚಾರ ಏನು ಹೊಳೆ ಯಿತೆಂ ಎಂದರೆ ಒಂದು ಕಡೆ ಅಂಡರ್ ಬ್ರಿಡ್ಜ್ ಇದೆ. ಮತ್ತೊಂದು ಕಡೆ ಹಳ್ಳವಿದೆ, ಇಂಥ ಕಡೆ ಜಾಗ ಸರಿಯಾಗಿಲ್ಲ, ಏನಾದರೂ ಅಪಾಯ ಒದಗಿದರೆ ಬಹಳ ತೊಂದರೆಯಾಗುತ್ತದೆಂದು ಅಂದು ಕೊಂಡೆ. ಅನಂತರ ಈಗ ನಾನು ಇಲ್ಲಿಗೆ ಬರುವುದಕ್ಕಿಂತ ಮುಂಚಿತವಾಗಿ ಅಲ್ಲಿಗೆ ಹೋಗಿ ನೋಡಿಕೊಂಡು ಬಂದೆ ಎರಡೂ ಕಡೆ ದೊಡ್ಡ ದೊಡ್ಡ ಹೈ ಟೆನ್‌ಷನ್ ವೈರ್‌ಗಳು ಹೋಗಿದೆ. ಮತ್ತೆ ಅಲ್ಲಿ ಎರಡು ಹೈ ಟೆನ್‌ಷನ್ ಟವರ್ ಕೂಡ ಇದೆ. ಆದರಿಂದ ಹೈ ಟೆನ್‌ಷನ್ ವೈರ್‌ಗಳು ಎಲ್ಲೆಲ್ಲಿ ಹೋಗಿರುತ್ತವೋ ಅಲ್ಲೆಲ್ಲಾ ಮನೆಗಳನ್ನು ಕಟ್ಟಬಾರದೆಂದು ಕೆ. ಇ. ಬಿ. ಇಲಾಖೆಯವರು ಹೇಳುತ್ತಾರೆ. ನನಗೆ ಚೆನ್ನಾಗಿ ಗೊತ್ತಿದೆ ಮೈಸೂರಿನಲ್ಲಿ ಒಬ್ಬರು ಮನೆ ಕಟ್ಟುತ್ತಿದ್ದರು, ಆಗ ಅವರು ಸಹ ಹೈ ಟೆನ್‌ಷನ್ ವೈರ್ ಹೋಗುತ್ತಿದ್ದ ಜಾಗವನ್ನು ಬಿಟ್ಟು ಮನೆಯನ್ನು ಕಟ್ಟಿಸಿದ್ದು ಜ್ಞಾಪಕವಿದೆ. ಆದುದರಿಂದ ಇವತ್ತು ಸರ್ಕಸ್‌ಗೆ ಇರುವಂಥಾ ಜಾಗದಲ್ಲಿ ನೋಡಿದರೆ, ಅಲ್ಲಿ ಎರಡು ಪೋಲ್‌ಗಳನ್ನು ನೆಟ್ಟಿದ್ದಾರೆ ಅದರ ಮೇಲೆ ಕೇವಲ ೫-೬ ಅಡಿಗಳ ಅಂತರದಲ್ಲಿಯೇ ಹೈ ಟೆನ್‌ಷನ್ ವೈರ್ ಹೋಗಿದೆ. 'ಟೆಕ್ನಿಕಲ್ ಆಗಿ ಅದರ ಪೂರ್ಣ ವಿವರ ನನಗೆ ಗೊತ್ತಿಲ್ಲ ಅದರ ಬಗ್ಗೆ ಶ್ರೀ ರಮೇಶ್‌ರವರು ಕೆಲವು ವಿವರಗಳನ್ನು ಕೊಟ್ಟು ಹೇಳಿದ್ದಾರೆ. ಈಗ ಕಮಿಷನ್ ಆಫ್ ಎನ್‌ಕ್ವೈರಿ ಬಂದಿರುವುದರಿಂದ ಅದನ್ನೆಲ್ಲಾ ಅವರು ನೋಡುತ್ತಾರೆ. ಇನ್ನೊಂದು ವಿಷಯ ನಮ್ಮ ಮನಸ್ಸಿಗೆ ಬಹಳ ದುಗುಡವನ್ನು ಉಂಟು ಮಾಡತಕ್ಕ ವಿಚಾರ ಏನೆಂದರೆ ಇದಕ್ಕೆ ಲೈಸನ್ಸ್ ಕೊಟ್ಟಿದ್ದಾರೋ ಇಲ್ಲವೋ ಎನ್ನುವುದೇ ಮೊದಲನೆ ಪ್ರಶ್ನೆಯಾಗಿಬಿಟ್ಟಿದೆ. ನಾನು ಇದನ್ನು ತಮಾಷೆಗೆ ಹೇಳುತ್ತಿಲ್ಲ. ಲೈಸೆನ್ಸ್ ತೆಗೆದುಕೊಳ್ಳಲೇಬೇಕು ಅಂತ ಎಲ್ಲಿದೆ? ತೆಗೆದುಕೊಂಡರೂ ಆಯಿತು, ಇಲ್ಲದಿದ್ದರೂ ಆಯಿತು ಎಂದು ಹೇಳುವವರೂ ಇದ್ದಾರೆ. ಆ ರೀತಿ ಏನಾದರೂ ಆಗಿದೆಯೋ ಎನ್ನುವ ಬಗ್ಗೆ ತುಂಬಾ ಪ್ರಬಲವಾದ ಅನುಮಾನ ಉಂಟಾಗಿದೆ. ಶುರು ಮಾಡುವವರು ಮಾಡಿದರು, ಲೈಸೆನ್ಸ್ ಶುರು ಮಾಡಿದ ಮೇಲೆ ಬಂದಿರಬಹುದು. ಆದರೆ ಅವರಿಗೆ ಲೈಸನ್ಸ್ ಕೊಡುವವರು ಯಾರು? ಪೋಲೀಸ್ ಕಮೀಷನರ್ ಅಥವಾ ಇಲ್ಲವೇ ಡೆಪ್ಯುಟಿ ಕಮೀಷನರ್‌ರವರು, ಇದನ್ನು ಯಾರು ಕೊಡಬೇಕು ಎನ್ನುವ ಬಗ್ಗೆ ಯೋಚನೆ ಮಾಡಬೇಕಾಗಿದೆ, ರೂಲ್ಸ್ ಪ್ರಕಾರ ಯಾರು ಕೊಡುತ್ತಾರೆಂದು ಗೊತ್ತಿಲ್ಲ. ನನಗೆ ಗೊತ್ತಿರುವ ಹಾಗೆ ಇದರಲ್ಲಿ ೩-೪ ಜನ ಇನ್‌ವಾಲ್ವ್ ಆಗಿರುತ್ತಾರೆ.

ಶ್ರೀ ಜೆ. ಎಚ್. ಪಾಟೀಲ್.—ಕಾರ್ಪೊರೇಷನ್ನಿನವರು...

ಶ್ರೀ ಡಿ ದೇವರಾಜ್ ಅರಸ್.—ಕಾರ್ಪೊರೇಷನ್ನಿನವರೊಬ್ಬರೇ ಕೊಡುವುದಕ್ಕಾಗುವುದಿಲ್ಲ. ಕಾರ್ಪೊರೇಷನ್ನಿನವರ ಅನುಮತಿಯೂ ಬೇಕಾಗುತ್ತದೆಂದು ಕಾಣಿಸುತ್ತದೆ. ಇದಕ್ಕೆ ಪೋಲೀಸ್ ಕಮೀಷನರ್‌ರವರ ಒಪೀನಿಯನ್ ಕೊಡಬೇಕಾಗುತ್ತದೆ. ಮತ್ತು ಡಿ. ಸಿ. ಯವರು ಫೈನಲ್ ಆಗಿ ಒಪೀನಿಯನ್ ಕೊಡುವ ಅಥಾರಿಟಿ ಇದೆ ಎಂದು ನನ್ನ ಭಾವನೆ. ಲೈಸನ್ಸನ್ನು ಕೊಡುವುದಕ್ಕೆ ಪೂರ್ವ ಭಾವಿಯಾಗಿ ಅವರೆಲ್ಲಾ ಒಟ್ಟಿಗೆ ಸೇರಿ ವಿಮರ್ಶೆ ಮಾಡಿ ಆ ಜಾಗದಲ್ಲಿ ಕೊಡಬೇಕೇ ಬೇಡವೇ ಎನ್ನುವ ಬಗ್ಗೆ ಪರೀಕ್ಷೆ ಮಾಡಬೇಕಾಗುತ್ತದೆ. ಆ ನಂತರ ಒಂದು ತೀರ್ಮಾನಕ್ಕೆ ಬರಬೇಕಾಗುತ್ತದೆ. ಆದುದ ರಿಂದ ಇದರಲ್ಲಿಯೇ ನಮಗೆ ಮೊದಲಿನ ಅನುಮಾನ ಬರುತ್ತಿದೆ. ಇವತ್ತು ಲೈಸನ್ಸ್ ಕೊಟ್ಟಿದ್ದಾರೋ ಬಿಟ್ಟಿದ್ದಾರೋ ಅದು ಮೊದಲನೆಯ ಭಾಗ. ಕೊಟ್ಟಿದ್ದರೆ ಯಾವಾಗ ಕೊಟ್ಟರು? ಅವರೆಲ್ಲಾ ಒಟ್ಟಿಗೆ ಹೋಗಿ ನೋಡಿಕೊಂಡು ಬಂದು ಲೈಸನ್ಸ್ ಕೊಟ್ಟಿದ್ದಾರೆಯೋ ಎನ್ನುವುದು ಮತ್ತೊಂದು ಭಾಗ. ಇಲ್ಲದಿದ್ದರೆ ಇದು ಹೇಗಾಯಿತು? ಈ ವೀನಸ್ ಸರ್ಕ್‌ಸ್‌ನ ಚರ್ಚೆಯನ್ನು ನಾವು ಸ್ವಲ್ಪ ತೆಗೆದುಕೊಳ್ಳ ಬೇಕಾಗುತ್ತದೆ. ಇದು ಒಂದು ಕಾಲಕ್ಕೆ ಯಾರೋ ಪಟೇಲ್ ಎನ್ನುವವರು ಕೊಲ್ಲಾಪುರದವರದಾಗಿತ್ತು, ಅದಾದ ಮೇಲೆ ಇತ್ತೀಚೆಗೆ ಬೇರೆಯವರ ವಶಕ್ಕೆ ಹೋಗಿದೆ. ಇದಕ್ಕೆ ೬೦ ವರ್ಷವಾಗಿ ಬಿಟ್ಟಿದೆಯಂತೆ. ಈ ಸಂಸ್ಥೆ ಹುಟ್ಟಿದಾಗ ಅದಕ್ಕೆ ಕೊಲ್ಲಾಪುರದವರು ಒಡೆಯರಾಗಿದ್ದರು ಎಂದು ಪ್ರಜಾವಾಣಿಯಲ್ಲಿ ಬಂದಿದೆ. ಈಗ ಇದಕ್ಕೆ ಒಡೆಯರು ಯಾರೋ ಎಂ. ಮೂಸ ಮತ್ತು ಶ್ರೀ ಎಸ್. ವಿ. ಲಾಲ್ ಪಾಶ ಎನ್ನುವವರಂತೆ

ಇದನ್ನು ನಾವು ಸ್ವಲ್ಪ ನೋಡಬೇಕು. ಅವರಿಬ್ಬರು ಮಾಲೀಕರು. ನಂಬಿಯಾರ್ ಎನ್ನುವವರು ಅದರ ಮ್ಯಾನೇಜರ್. ಈ ಮೂಸಾ ಮತ್ತು ಪಾಶಾ ಎನ್ನುವವರು ಬೆಂಗಳೂರಿನವರೇ? ಅಥವಾ ಕೊಲ್ಲಾಪುರದವರೇ? ಅಥವಾ ಕೇರಳದವರೇ ಎನ್ನುವುದನ್ನು ನೋಡಬೇಕಾಗಿದೆ. ಇವತ್ತು ಅಕಸ್ಮಾತ್ ಬೆಂಕಿ ಅನಾಹುತವಾದರೆ, ಅವರ ಪೂರ್ವ ಇತಿಹಾಸಕ್ಕೂ ಇದಕ್ಕೂ ಏನು ಸಂಬಂಧವೆಂದರೆ ಅವಕ್ಕೆ ಹಿನ್ನೆಲೆ ಇದೆ.

ಅವರು ನಮ್ಮ ರಾಜಕಾರಣಿಗಳ ಪೈಕಿ ಯಾರ ಸಂಬಂಧವನ್ನು ಇಟ್ಟುಕೊಂಡಿದ್ದಾರೆಂಬುದು ಬಹಳ ಮುಖ್ಯ. ಯಾವುದೋ ಒಂದು ರಾಜಕಾರಣ ಶಕ್ತಿ ಇಲ್ಲದೆ ಇದ್ದ ಪಕ್ಷದಲ್ಲಿ ಆ ಜಾಗದಲ್ಲಿ ಖಂಡಿತಾ ಲೈಸೆನ್ಸ್ ಕೊಡುವುದಕ್ಕೆ ಸಾಧ್ಯವಿಲ್ಲ. ಕೆಲವು ಅಧಿಕಾರಿಗಳಿಗಂತೂ ರೂಲ್ಸ್ ಹೇಗಿದೆ ಎಂಬುದು ಗೊತ್ತಿಲ್ಲ. ಕೇಳುವುದಕ್ಕೆ ಹೋದರೆ ಕೇಳುವವರನ್ನೇ ನಿಕೃಷ್ಟವಾಗಿ ಕಾಣುತ್ತಾರೆ. ರಾಜಕಾರಣಿಗಳು ಹೋದರೆ ಕೆಲವು ಅಧಿಕಾರಿಗಳಿಗೆ ಎಲ್ಲಿ ವರ್ಗ ಮಾಡುತ್ತೇವೆಂದು ಹೇಳುತ್ತಾರೋ ಎಂಬ ಗಾಬರಿ. ಒಟ್ಟಿನಲ್ಲಿ, ಬಹುತೇಕ ಅಧಿಕಾರಿಗಳಿಗೆ ರೂಲ್ಸ್ ರೆಗ್ಯುಲೇಷನ್ ಚೆನ್ನಾಗಿ ಗೊತ್ತಿದೆ ಎಂದು ನಂಬಿದ್ದೇನೆ. ಇರತಕ್ಕ ಅಧಿಕಾರಿಗಳು ಅಷ್ಟೊಂದು ದಡ್ಡರಲ್ಲ. ಎಲ್ಲ ಐ. ಎ. ಎಸ್. ಅಧಿಕಾರಿಗಳು ಇದ್ದಾರೆ. ಇಂಜಿನಿಯರಿಂಗ್ ಇಲಾಖೆಯಲ್ಲಿ ಛೀಫ್ ಇಂಜಿನಿಯರ್ ಲೆವೆಲ್‌ನವರು ಇದ್ದಾರೆ. ಇಂಥಿಂಥ ಅಧಿಕಾರಿಗಳು ಇರುವಾಗ ರೂಲ್ ಗೊತ್ತಿಲ್ಲದೆ ಲೈಸೆನ್ಸ್ ಕೊಟ್ಟರು ಎಂಬ ಮಾತಿಗೆ ಬೆಲೆ ಕೊಡುವುದಕ್ಕಾಗುವುದಿಲ್ಲ. ಆದರೂ ಅವರು ಯಾವುದೋ ಒಂದು ಪ್ರಬಲ ಒತ್ತಡಕ್ಕೆ ಒಳಗಾಗಿದ್ದಾರೆ. ನಾನು ಈ ಮಾತನ್ನು ಸುಲಭವಾಗಿ ಹೇಳುವುದಕ್ಕೆ ಇಷ್ಟವಿರಲಿಲ್ಲ. ಆ ಸ್ಥಳವನ್ನು ನೋಡಿದರೆ ಎಂಥವರಿಗೂ ಅರ್ಥವಾಗುತ್ತದೆ, ಅಲ್ಲಿ ಲೈಸೆನ್ಸ್ ಕೊಟ್ಟಿರುವುದು ಸರಿಯಲ್ಲ ಎಂಬುದು. ಆ ಸರ್ಕಸ್ಸಿನ ಮುಂಬಾಗದಲ್ಲಿ ಒಂದು ರಸ್ತೆ ಇದೆ ಅದರಲ್ಲಿ ಇತ್ತ ಕಡೆ ಬಂದರೆ ರೈಲ್ವೆ ಸ್ಟೇಷನ್ನಿಗೆ ಬರುತ್ತದೆ ಮತ್ತು ಅತ್ತ ಕಡೆ ಹೋದರೆ ರಾಜಾಜಿನಗರಕ್ಕೆ ಹೋಗುತ್ತದೆ. ಆ ಸರ್ಕಸ್ ನಡೆಸುತ್ತಿದ್ದ ಜಾಗದಲ್ಲಿ ಇದ್ದ ಹಳ್ಳಕ್ಕೆ ೧೫ ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ಮಣ್ಣನ್ನು ತಂದು ತುಂಬಿ ಲೆವೆಲ್ ಮಾಡಿದ್ದಾರೆ. ಆ ಸರ್ಕಸ್ಸಿನ ಒಳಗಡೆ ಸುಮಾರು ೪–೫ ಸಾವಿರ ಜನ ಕೂರುವುದಕ್ಕೆ ಏರ್ಪಾಡು ಮಾಡಿದ್ದರು. ಆ ಸರ್ಕಸ್ಸಿನ ಒಳಗೆ ಹೋಗಲು ಮತ್ತು ಹೊರಗೆ ಬರಲು ಒಂದೇ ಒಂದು ದ್ವಾರ ಇದ್ದುದನ್ನು ನೋಡಿದೆ. ಆ ಸರ್ಕಸ್ಸಿನ ಸುತ್ತ ಎಲ್ಲ ಕೊಳಚೆ ನೀರು ಹರಿದು ಬರುತ್ತಿದೆ ಪಕ್ಕದಲ್ಲೇ ರೈಲ್ವೆ ಲೈನ್ ಇದೆ ಅದರ ಕೆಳಗಡೆ ಸುಮಾರು ೨೦--೨೫ ಅಡಿ ಹಳ್ಳ ಇದೆ. ಅದರಲ್ಲಿ ತುಂಬ ಕೊಳಚೆ ನೀರು ತುಂಬಿಕೊಂಡಿದೆ. ಈ ಕಡೆಯಲ್ಲು ಕೂಡ ಕೊಳಚೆ ನೀರು ಬರುತ್ತದೆ. ಎರಡೂ ಕಡೆ ಕೊಳಚೆ ನೀರು ಸುತ್ತಿಕೊಂಡು ಹೋಗಿ ಆಚೆ ಕಡೆ ಒಂದು ದೊಡ್ಡ ಹಳ್ಳವಾಗಿದೆ. ಒಟ್ಟಿನಲ್ಲಿ ಹೇಳುವುದಾದರೆ, ಸರ್ಕಸ್ ಇದ್ದ ಜಾಗ ಒಂದು ದ್ವೀಪ ಇದ್ದ ಹಾಗೆ ಇದೆ. ಆ ಕಡೆ ಮತ್ತು ಈ ಕಡೆ ಎರಡೂ ಕಡೆ ಹಳ್ಳ ಮತ್ತೊಂದು ಕಡೆ ರಸ್ತೆ. ಆ ರಸ್ತೆಗೆ ಬರಲೂ ಸಹ ಒಂದೇ ಬಾಗಿಲು ಒಂದೇ ಬಾಗಿಲಿನಲ್ಲಿ ಬರುವುದಾದರೂ ಹೇಗೆ? ಅಷ್ಟೊಂದು ಮಕ್ಕಳು ಬೆಂಕಿಗೆ ಸಿಕ್ಕಿ ಸತ್ತಿದದ್ದಾರೆಂಬುದಕ್ಕಿಂತಲೂ ಜನರ ತುಳಿತಕ್ಕೆ ಸಿಕ್ಕಿ ಬಹು ಮಂದಿ ಮಕ್ಕಳು ಸತ್ತಿದ್ದಾರೆಂದು ಹೇಳಬಹುದು. ಅಲ್ಲಿಗೆ ಹೋಗಿ ನೋಡಿದಾಗ ಹೀಗೇ ನಡೆದಿದೆ ಎಂದು ಊಹಿಸಬಹುದು. ಜನರು ನೂಕಾಡಿಕೊಂಡು ಹೊರಗೆ ಬರುವಾಗ ಅವರ ತುಳಿತಕ್ಕೆ ಸಿಕ್ಕಿ ಅರ್ಧ ಭಾಗ ಮಕ್ಕಳು ಸತ್ತಿದ್ದಾರೆ. ಇನ್ನರ್ಧ ಭಾಗ ಬೆಂಕಿಗೆ ಸಿಕ್ಕಿ ಸತ್ತಿದ್ದಾರೆ. ಅಲ್ಲಿದ್ದ ಹಳ್ಳಕ್ಕೆ ೧೫ ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ಮಣ್ಣು ತುಂಬಿಸಿ ಯಾರ್ಯಾರನ್ನು ನಾಶ ಮಾಡುವುದಕ್ಕೆ ಮಾಡಿದ್ದರೋ ಗೊತ್ತಿಲ್ಲ; ದೇವರಿಗೇ ಗೊತ್ತು. ಆ ಜಾಗಕ್ಕೆ ಲೈಸೆನ್ಸ್ ಕೊಟ್ಟಿದ್ದಾರೋ, ಬಿಟ್ಟಿದ್ದಾರೋ, ಗೊತ್ತಿಲ್ಲ; ಅಂತೂ ಕೊಟ್ಟಿರಬಹುದು. ಕೊಟ್ಟಿದ್ದಾರೆಂದರೂ ಆ ಜಾಗಕ್ಕೆ ಕೊಟ್ಟಿರುವುದು ಬಹಳ ಹೀನ. ಆದ್ದರಿಂದ, ಈ ವಿಚಾರವನ್ನು ಸರ್ಕಾರದವರು ಕಮೀಷನ್ ಆಫ್ ಎನ್‌ಕ್ವೈರಿಗೆ ರೆಫರ್ ಮಾಡಬೇಕೆಂದು ಹೇಳುತ್ತೇನೆ. ನಂಬಿಕೆಗೆ ಅರ್ಹರಾದ ಅಧಿಕಾರಿಗಳಿಗೆ ಹೇಳಿ ಈ ಕ್ಷಣದಲ್ಲೇ ರೆಕಾರ್ಡ್‌ಗಳನ್ನೆಲ್ಲಾ ಸೀಜ್ ಮಾಡಿಸಬೇಕು. ಕಮೀಷನ್ ಆಫ್ ಎನ್‌ಕ್ವೈರಿ ಇವತ್ತು ನಾಳೆಯೊಳಗೆ ಚಾರ್ಜ್ ತೆಗೆದುಕೊಂಡು ಶುರು ಮಾಡಬೇಕು ಇದನ್ನು ಹೀಗೇ ಬಿಟ್ಟರೆ ಇನ್ನೂ ಏನೇನು ನಡೆಯುತ್ತದೋ ಗೊತ್ತಿಲ್ಲ. ಕಮೀಷನ್ ಆಫ್ ಎನ್‌ಕ್ವೈರಿ ಮಾಡಿದಾಕ್ಷಣ ಸತ್ತವರನ್ನು ಬದುಕಿಸುವುದಕ್ಕೆ ಆಗುವುದಿಲ್ಲ. ಹಾಗಾದರೆ ಏಕೆ ಮಾಡಬೇಕೆಂದು ಬಿಡಬಹುದು. ಆದರೆ ಅದನ್ನು ಮಾಡುವುದು ಕೊನೇಪಕ್ಷ, ಈ ಒಂದು ಅನಾಹುತಕ್ಕೆ ಕಾರಣರು ಯಾರಿರಬಹುದು, ಅಧಿಕಾರಿಗಳೋ ರಾಜಕಾರಣಿಗಳೋ ಎಂಬುವನ್ನು ಕಂಡುಹಿಡಿದು ಇನ್ನು ಮುಂದೆ ಈ ರೀತಿಯಾಗದಂತೆ ನೋಡಿಕೊಳ್ಳುವ ಸಲುವಾಗಿ ಮಾಡಬೇಕು.

ಕಾನೂನು ಪರಿಪಾಲನೆ ಮಾಡುವಾಗ ಕಡ್ಡಾಯವಾಗಿ ವಿಧಿನಿಯಮಗಳನ್ನು ಅನುಸರಿಸಬೇಕು. ಯಾರ ಹಸ್ತಕ್ಷೇಪವೂ ಇಲ್ಲದೆ ಇಂಥ ಕೆಲಸಗಳು ನಡೆಯಬೇಕೆಂಬ ಉದ್ದೇಶವನ್ನು ಇಟ್ಟುಕೊಂಡು ಕಮೀಷನ್ ಆಫ್ ಎನ್‌ಕ್ವೈರಿಯನ್ನು ಸರ್ಕಾರ ನೇಮಕ ಮಾಡಬೇಕು. ಆಗ ಮಾತ್ರ ಅದರ ಬಗ್ಗೆ ಜನರಿಗೆ ನಂಬಿಕೆ ಬರುತ್ತದೆ. ಸರ್ಕಾರ ಈ ದಿಸೆಯಲ್ಲಿ ಯಾರನ್ನೂ ಒಳಗೆ ಸೇರಿಸಿಕೊಳ್ಳಬಾರದೆಂಬ ದೃಷ್ಟಿಯಲ್ಲಿ ಇದನ್ನು ಹೇಳುತ್ತಿದ್ದೇನೆ. ಸಂಬಂಧಪಟ್ಟ ದಾಖಲಾತಿಗಳು ಯಾವುವು ಇವೆ ಅವುಗಳಿಗೆಲ್ಲ ಬೀಗ ಹಾಕಿಸಿ ಕಮೀಷನ್ ಆಫ್ ಎನ್‌ಕ್ವೈರಿಯನ್ನು ಇವತ್ತು ನಾಳೆಯೊಳಗೆ ನೇಮಿಸಬೇಕೆಂದು ಹೇಳುತ್ತೇನೆ. ಅದಕ್ಕೆ ನಿವೃತ್ತ ಉಚ್ಚ ನ್ಯಾಯಾಲಯದ ನ್ಯಾಯಾಧೀಶರನ್ನಾಗಲೀ ಅಥವಾ ಯಾರನ್ನಾದರೂ ಒಬ್ಬರನ್ನು ಅಂದರೆ ಇಂಪಾರ್ಷಿಯಲ್ ಆಗಿರುವವರನ್ನು ನೇಮಕ ಮಾಡಿ, ಅವರಿಂದ ವರದಿ ಬಂದ ಮೇಲೆ ಏನೇನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳಲಿ ಎಂಬುದು ನನ್ನ ಒಂದು ಸಲಹೆ.

ಮತ್ತೆ ಒಂದು ಮಾತು ಹೇಳುತ್ತೇನೆ, ಅಗ್ನಿ ಶಾಮಕ ದಳದವರು ಬಹಳ ಕಷ್ಟಪಟ್ಟಿದ್ದಾರೆ, ಶಕ್ತಿ ಮೀರಿ ಕೆಲಸ ಮಾಡಿದ್ದಾರೆ. ಅದೇ ರೀತಿ, ಪೋಲೀಸ್ ಇಲಾಖೆಯವರು, ಆರೋಗ್ಯ ಇಲಾಖೆಯವರು ಎಲ್ಲರೂ ಸೇರಿ ತುಂಬ ಶ್ರಮವಹಿಸಿ ಕೆಲಸ ಮಾಡಿದ್ದಾರೆ. ಅದಕ್ಕಾಗಿ ಅವರೆಲ್ಲರಿಗೂ ನನ್ನ ಅಭಿನಂದನೆಗಳು. ಆದರೆ, ಸರ್ಕಸ್ ನಡೆಯುವ ಸಂದರ್ಭದಲ್ಲಿ ಅದರ ಹತ್ತಿರ ಒಂದಾದರೂ ಅಗ್ನಿ ಶಾಮಕ ದಳದ ಯೂನಿಟ್ ಅನ್ನು ಇಡಲಾಗಿತ್ತೇ ಎಂದು ಪ್ರಶ್ನಿಸುತ್ತೇನೆ.

ಶ್ರೀ ಜೆ.ಹೆಚ್. ಪಟೇಲ್.—ಅಲ್ಲಿ ಜಾಗವೇ ಇಲ್ಲ, ಎಲ್ಲಿ ಇಡುತ್ತಾರೆ?

ಶ್ರೀ ಡಿ. ದೇವರಾಜ ಅರಸ್.—ಅಲ್ಲಿ ಒಂದು ಯೂನಿಟ್ ಆದರೂ ಇದ್ದಿದ್ದರೆ ಎಷ್ಟೋ ಅನುಕೂಲವಾಗುತ್ತಿತ್ತು. ಅಲ್ಲಿ ೧೦–೬ ಸಾವಿರ ಜನ ಓಡಾಡಲು ಸ್ಥಳ ಇಲ್ಲ ಎಂಬ ಜ್ಞಾನ ಇರಲಿಲ್ಲವೆ? ಅದಕ್ಕೆ ಬೆಂಕಿ ಬಿದ್ದಾಗ ಅಲ್ಲಿ ಯಾರೂ ಇರಲಿಲ್ಲ. ಅಗ್ನಿ ಶಾಮಕ ದಳದವರು ಬರಬೇಕಾದರೆ ಸ್ವಲ್ಪ ವೇಳೆಯೇ ಆಗಿದೆ. ಇಂಥಲ್ಲಿ ಹೀಗಾಗಿದೆ, ಯಾರೂ ಸಿಕ್ಕುತ್ತಿಲ್ಲ, ಸ್ವಲ್ಪ ನೋಡಿ ಹೇಳಿ ಎಂದು ಯಾರೋ ನಮ್ಮ ಮನೆಗೆ ಫೋನ್ ಮಾಡಿದ್ದರು. ಆಗ ನಾನೂ ಕೂಡ ಮನೆಯಲ್ಲಿರಲಿಲ್ಲ. ನಮ್ಮ ಕಛೇರಿಯಲ್ಲಿ ನೋಡಿ ಹೇಳಿದ್ದಾರೆ. ಆ ಸಂದರ್ಭದಲ್ಲಿ ಅಲ್ಲಿ ಒಂದು ಅಗ್ನಿ ಸಾಮಕ ದಳದವರೂ ಇಲ್ಲ ಆಮೇಲೆ ಬಂದಿದ್ದಾರೆ. ಅವರು ಹೋಗಲಿಲ್ಲವೆಂದು ಅಲ್ಲ. ಅಂಥ ಸನ್ನಿವೇಶದಲ್ಲಿ ಅಲ್ಲ ಮೊದಲೇ ಒಂದು ಯೂನಿಟ್ ಇರಬೇಕಾಗಿತ್ತು. ಕೊನೇ ಪಕ್ಷ ಒಂದು ಯೂನಿಟ್ ಆದರೂ ಅಲ್ಲಿ ಇದ್ದಿದ್ದರೆ ಬಹುಶಃ ಇಷ್ಟೊಂದು ಅಪಾಯಕ್ಕೆ ಕಾರಣವಾಗುತ್ತಿರಲಿಲ್ಲವೆಂದು ನನ್ನ ಅಭಿಪ್ರಾಯ. ಸುಮಾರು ೪–೫ ಸಾವಿರ ಜನ ಸೇರುವ ಜಾಗದಲ್ಲಿ ಆ ಒಂದು ನಿಗ ಕೂಡ ತೆಗೆದುಕೊಳ್ಳದೆ ಇರುವುದು ಶೋಚನೀಯ. ಅವತ್ತಿನ ದಿವಸ, ಅದೇ ಕೊನೇ ದಿವಸ ಎಂತಲೋ ಅಥವಾ ಕನ್‌ಸೇಷನ್ ಅಂತಲೋ ಒಂದೇ ಒಂದು ಸ್ಥಳವೂ ಖಾಲಿ ಇರಲಿಲ್ಲ. ಟಿಕೆಟ್ಟನ್ನು ಅಷ್ಟೇ ಕೊಟ್ಟಿದ್ದರೋ ಅಥವಾ ಅದಕ್ಕಿಂತಲೂ ಹೆಚ್ಚಿಗೆ ಕೊಟ್ಟಿದ್ದರೋ ಗೊತ್ತಿಲ್ಲ. ಟಿಕೆಟ್ ಪುಸ್ತಕಗಳೆಲ್ಲ ಅಲ್ಲಿ ಉರಿಯುತ್ತ ಬಿದ್ದಿವೆ. ಅಲ್ಲಿ ೪—೫ ಸಾವಿರ ಜನರು ಕುಳಿತಿದ್ದಾರೆಂದರೆ ಅವರ ಸೈಕಲ್, ಸ್ಕೂಟರ್ ಕಾರು ಮತ್ತೊಂದು ಎಲ್ಲ ಎಲ್ಲಿ ನಿಲ್ಲುವುದು? ಆ ಟ್ರಾಫಿಕ್ ನಡುವೆ ಜನರು ಓಡಾಡುವುದಾದರು ಹೇಗೆ? ಇವು ಒಂದೂ ಅರ್ಥವಾಗುವುದಿಲ್ಲ.

೨—೩೦ ಪಿ. ಎಂ.

ಹೀಗಿರಬೇಕಾದರೆ ಅಲ್ಲಿ ನಾಲ್ಕು ಸಾವಿರ ಜನರಿದ್ದರೋ, ೫ ಸಾವಿರ ಜನರಿದ್ದರೋ ದೇವರಿಗೇ ಗೊತ್ತು. ಒಳಗಡೆ ೫ ಸಾವಿರ ಜನ ಕುಳಿತುಕೊಂಡಿದ್ದರೆಂದರೆ ಆ ಜನರ ಸೈಕಲ್‌ಗಳು, ಮೋಟಾರ್ ಸೈಕಲ್‌ಗಳು ಕಾರುಗಳು ಇದನ್ನೆಲ್ಲಾ ಎಲ್ಲಿ ನಿಲ್ಲಿಸಬೇಕು? ಆ ವಾಹನಗಳು ಓಡಾಡುವುದು ಹೇಗೆ, ಜನರು ಓಡಾಡುವುದು ಹೇಗೆ ಏನು ಗತಿ ನನಗಂತೂ ಅರ್ಥವಾಗುವುದಿಲ್ಲ. ಇಂಥ ಸನ್ನಿವೇಶವಿರುವಾಗ ಅಲ್ಲಿ ಬೆಂಕಿಯಿಂದಲೇ ಎಲ್ಲರೂ ಸತ್ತುಹೋದರು, ಬೆಂಕಿಯಿಂದ ಬೆಂದು ಸುಟ್ಟುಹೋದರು ಎಂದು ಯಾರು ಹೇಳಿದರೂ ನಂಬುವುದಕ್ಕೆ ಸಾಧ್ಯವಾಗುವುದಿಲ್ಲ. ಹೆಣಗಳೆಲ್ಲಾ ಬೆಂಕಿಯಲ್ಲಿ ಸಿಕ್ಕಿಹಾಕಿಕೊಂಡರೂ ಕೂಡ ಸುಟ್ಟುಹೋಗಿರುತ್ತವೆ. ಅವು ಮೊದಲೇ ಸುಟ್ಟುಹೋದವೋ, ಸತ್ತಮೇಲೆ ಸುಟ್ಟುಹೋದವೋ ಎಂಬುದನ್ನು ಡಾಕ್ಟರು ಪತ್ತೆ ಹಚ್ಚುವುದಕ್ಕಾಗುತ್ತದೆಯೇ? ಆಗುವುದಿಲ್ಲ. ಸ್ವಾಮಿ ತಮಗೆ ಗೊತ್ತಿದೆ, ತಾವು ಕೇಳಿದ್ದೀರಿ, ನೋಡಿದ್ದೀರಿ, ಕೆಲವು ದೊಡ್ಡ ದೊಡ್ಡ ಜಾಗ್ರತೆಗಳಲ್ಲಿ, ಕುಂಭ ಮೇಳ ಮುಂತಾದ ಕಡೆ ಲಕ್ಷಗಟ್ಟಲೆ ಜನ ಸೇರಿದಾಗ ಎಷ್ಟೋ ಜನ ಸಾಯುತ್ತಾರಲ್ಲ ಅವರೆಲ್ಲಾ ಸುಮ್ಮನೆ

ಸತ್ತಿರುವುದು ಎಂದು ಹೇಳುತ್ತೀರಾ ? ಖಂಡಿತ ಸಾಧ್ಯವಿಲ್ಲ ; ಅವರೆಲ್ಲಾ ತುಳಿತದಲ್ಲಿ ಸಾಯುತ್ತಾರೆ. ಇಲ್ಲಿ ಆಗಿರುವುದೂ ಹಾಗೆಯೇ. ತುಳಿತದಲ್ಲಿ ಮಕ್ಕಳು ಸತ್ತಿದ್ದಾರೆ. ಆಮೇಲೆ ಬೆಂಕಿಯಿಂದ ಸುಟ್ಟು ಹೋಗಿರಬಹುದು, ಆ ಮಾತು ಬೇರೆ. ಆಮೇಲೆ ಕೆಲವು ಆನೆ ಹೊರಗಡೆ ನುಗ್ಗಿದೆ, ನೀರಾನೆಯು ಮೈಸ್ಕಿ ಬೆಂದಿದೆ, ಡಾಕ್ಟರು ಶ್ರದ್ಧೆಯಿಂದ ಔಷದಿ ಕೊಟ್ಟಿದ್ದಾರೆ, ಬದುಕಬಹುದು ಎಂದು ಹೇಳುತ್ತಾರೆ. ಅದೇ ನಾಗುತ್ತದೋ ಗೊತ್ತಿಲ್ಲ. ಅಂದರೆ ಒಟ್ಟಿನಲ್ಲಿ ಇದೊಂದು biggest ommission on the part of the authorities who have not taken proper steps and precau-tionary measures to keep at least one unit of the fire fighting force close by.

ಶ್ರೀ ಜೆ.ಹೆಚ್. ಪಟೇಲ್.—ಅಲ್ಲಿ ಜಾಗವೇ ಇರಲಿಲ್ಲ ಯಾವುದಕ್ಕೂ.

ಶ್ರೀ ಡಿ. ದೇವರಾಜ ಅರಸ್.—ಜಾಗ ಇಲ್ಲ ಎಂದರೆ ಎಲ್ಲಾದರೂ ಜಾಗ ಮಾಡಬೇಕಾಗಿತ್ತು. ಮೊದಲೇ ಇವರ ಮನಸ್ಸಿಗೆ ಮಾಡಲೇಬೇಕು ಎಂದು ಬಂದಿದ್ದರೆ ಮಾಡಬಹುದಾಗಿತ್ತು. ಅದು ಇವರ ಮನಸ್ಸಿಗೆ ಬಂದಹಾಗೆ ಕಾಣುವುದಿಲ್ಲ. ಈಗ ಏನೇನು ಕಾರ್ಯಕ್ರಮವನ್ನು ಸರ್ಕಾರ ತೆಗೆದುಕೊಂಡಿದೆ ಎಂಬುದನ್ನು ವಿವರಿಸಿದ್ದಾರೆ, ತೆಗೆದುಕೊಳ್ಳಬೇಕಾದ ಕಾರ್ಯಕ್ರಮದ ವಿವರವನ್ನೂ ಹೇಳಿದ್ದಾರೆ. ಮುಂದೆ ತೆಗೆದುಕೊಳ್ಳಬೇಕಾದ ಕ್ರಮಗಳನ್ನು ಬೇಗ ತೆಗೆದುಕೊಳ್ಳಲಿ ಎಂದು ಸಲಹೆ ಕೊಟ್ಟು ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಪಿ. ರಾಮದೇವ್ (ಮಲ್ಲೇಶ್ವರ).—ಸನ್ಮಾನ್ಯ ಸಭಾಧ್ಯಕ್ಷರೇ, ಇದುವರೆಗೂ ನಮ್ಮ ಸ್ನೇಹಿತರು ಹೇಳಿರತಕ್ಕ ಮಾತುಗಳಲ್ಲಿ ನಾನೂ ಸಹಭಾಗಿಯಾಗುತ್ತಾ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಸರ್ಕಸ್‌ಗೆ ಬೆಂಕಿ ಹತ್ತಿಕೊಂಡನಂತರದ ದೃಶ್ಯ ಮತ್ತು ಆಸ್ಪತ್ರೆಯಲ್ಲಿ ಇರತಕ್ಕ ಸನ್ನಿವೇಶವನ್ನು ನೋಡಿದಾಗ ನನಗಂತೂ ಮನಸ್ಸಿಗೆ ಬಹಳ ವ್ಯಥೆಯಾಯಿತು. ಈ ದುರಂತಕ್ಕೆ ಕಾರಣರು ನಮ್ಮ ಅಧಿಕಾರಿಗಳೇ ವಿನಹ ಬೇರೆ ಯಾರು ಅಲ್ಲವೆಂಬುದು ನನ್ನ ಮನಸ್ಸಿಗೆ ಬಂದಿದೆ. ಅಪಘಾತವಾದನಂತರ ಮಾನ್ಯ ಮಂತ್ರಿಗಳಾದ ಶ್ರೀಮಾನ್ ಅಬ್ದುಲ್ ಸಮದ್ ಅವರು, ಹಾಗೂ ಇತರ ಅಧಿಕಾರಿಗಳು ಚೆನ್ನಾಗಿ ಕೆಲಸ ಮಾಡಿದ್ದಾರೆ. ಈ ದುರಂತಕ್ಕೆ ೬ ಏಜೆನ್ಸಿಗಳು ಕಾರಣ ಎಂದು ನನಗನ್ನಿಸುತ್ತದೆ. ಮೊದಲನೇ ಜವಾಬ್ದಾರಿ ಪೋಲೀಸರದು. ನಗರದ ಪೋಲೀಸ್ ಕಮಿಷನ್‌ರವರು ಸರ್ಕಸ್ಸನ್ನು ಉದ್ಘಾಟನೆ ಮಾಡಿದರು, ಅವರು ಉದ್ಘಾಟನೆ ಮಾಡಿದಾಗ ನಗರ ಕಾರ್ಪೊರೇಷನ್ನಿನವರು ಸರ್ಕಸ್ಸಿಗೆ ಲೈಸನ್ಸ್ ಕೊಟ್ಟಿರಲಿಲ್ಲ, ಯಾವುದೇ ಒಬ್ಬ ಅಧಿಕಾರಿ ಹೋಗಿ ಉದ್ಘಾಟನೆ ಮಾಡಬೇಕಾದರೆ ಎಲ್ಲ ಸಂಬಂಧಪಟ್ಟ ಏಜೆನ್ಸಿಯ ಪರವಾನಗಿ ಇದೆಯೋ ಇಲ್ಲವೋ ಎಂಬುದನ್ನು ನೋಡಬೇಕಾಗಿತ್ತು. ಆದರೆ ಇವರು ನೋಡಲಿಲ್ಲ. ಕಾರ್ಪೊರೇಷನ್ ಅಧಿಕಾರಿಗಳು ಲೈಸೆನ್ಸ್ ಇಲ್ಲದೆ ಸರ್ಕಸ್ ಡೇರಾ ನಿರ್ಮಾಣ ಮಾಡಿರುವುದಕ್ಕೆ ನೋಟೀಸ್ ಕೊಟ್ಟು ಅದನ್ನು ಡೆಮಾಲಿಷ್ ಮಾಡುವುದಕ್ಕೆ ಆದೇಶ ನೀಡಿದ್ದರು. ಇಂಥ ಸಂದರ್ಭದಲ್ಲೂ ಕೂಡ ಪೋಲೀಸ್ ಕಮಿಷನರ್‌ರವರು ಸರ್ಕಸ್ಸನ್ನು ಉದ್ಘಾಟನೆ ಮಾಡಿರುವುದು ಒಂದು ದುರಂತ ಎಂದು ನನಗನ್ನಿಸುತ್ತದೆ. ಎರಡನೆಯದಾಗಿ ಟ್ರಾಫಿಕ್ ಪೋಲೀಸಿನವರು ಕೂಡ ಅಲ್ಲಿ ಸರ್ಕಸ್‌ಗೆ ಅವಕಾಶ ಕೊಡಬಾರದು ಎಂಬ ಮಾತನ್ನು ಹೇಳಿದ್ದಾರೆ. ಈ ಫೈಲು ಮೂರು ಬಾರಿ ಕೆಳಗಿನಿಂದ ಮೇಲೆ ಹೋಗಿ ಮೇಲಿನಿಂದ ಕೆಳಗೆ ಬಂದಿದೆ. ಇದರಲ್ಲಿ ಯಾವುದೋ ಕಾಣದ ಕೈ ಕೈವಾಡದಿಂದ ರಾಜಕೀಯ ಒತ್ತಡದ ಮೇಲೆ ಕೊನೆಗೆ ಅವಕಾಶ ಕೊಡಬೇಕಾದ ದುರಂತ ಪರಿಸ್ಥಿತಿ ಬಂದಿದೆ, ಈ ಅಪಘಾತದಲ್ಲಿ ೧೦೦ ಮಕ್ಕಳು ಸತ್ತಿದ್ದಾರೆಂದರೆ ಬಹಳ ದುಃಖವಾಗುತ್ತದೆ. ಒಂದು ಕಟ್ಟಡಕ್ಕೆ ಅವಕಾಶ ಕೊಡಬೇಕಾದರೆ ಸೆಕ್ಷನ್ ೩೦೮ರಿಂದ ೩೧೫ರವರೆಗೆ ಸೆಕ್ಷನ್ ಇದ್ದು ಆ ಪ್ರಕಾರ ಇನ್‌ಸ್ಪೆಕ್ಟ್ ಮಾಡಿ ಕಾರ್ಪೊರೇಷನ್ನಿನವರು ಅವಕಾಶ ಕೊಡಬೇಕಾಗಿತ್ತು. ಯಾರೊಬ್ಬರೂ ಸ್ಥಳಕ್ಕೆ ಹೋಗಿ ಸ್ಥಳ ತನಿಖೆ ಮಾಡಿಲ್ಲ.

ಅಧ್ಯಕ್ಷರು.—ಜಾಸ್ತಿ ಸೆಕ್ಷನ್‌ಗಳಿರುವುದರಿಂದಲೇ ಈ ಕಷ್ಟಗಳು ಬಂದಿರುವುದು. ಒಂದೆರಡು ಸೆಕ್ಷನ್‌ಗಳಿದ್ದರೆ ಚೆನ್ನಾಗಿರುತ್ತಿತ್ತು.

ಶ್ರೀ ಪಿ. ರಾಮದೇವ್.—ಕಾನೂನು ಪ್ರಕಾರ ಸಾಕಷ್ಟು ಸ್ಥಳಾವಕಾಶ ಇರಬೇಕಾಗಿತ್ತು. prohibition against the use of inflamable materials ಎಂದಿದೆ. ಆ ಪ್ರಕಾರ ಸರ್ಕಸ್ ಕಂಪನಿಯಲ್ಲಿರತಕ್ಕ ಇನ್‌ಫ್ಲೇಮಬಲ್ ಮೆಟೀರಿಯಲ್‌ಗಳನ್ನು ಪ್ರೊಹಿಬಿಟ್ ಮಾಡಬೇಕಾಗಿತ್ತು.

ಇದಲ್ಲದೆ ಪರವಾನಗಿಯಿಲ್ಲದೆ ಇಲ್ಲದೆ ಡೇರಾ ಕಟ್ಟಿರುವುದಕ್ಕೆ ಕ್ರಮ ತೆಗೆದುಕೊಳ್ಳಬೇಕು. Completion Certificate and permission to use or occupy, must be obtained as per the Section No 310. ಇದನ್ನೂ ಮಾಡಿಲ್ಲ. ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದಹಾಗೆ ಅದಕ್ಕೆ ಲೈಸೆನ್ಸ್ ಕೊಟ್ಟಿದ್ದಾರೋ ಇಲ್ಲವೋ ಎಂಬುದೇ ಒಂದು ಸಂದೇಹ. ಯಾವುದೂ ನೋಡದೇ ಅಧಿಕಾರಿಗಳ ಅಲಕ್ಷ ಮನೋಭಾವದಿಂದ ವ್ಯವಹಾರ ನಡೆದುಹೋಗಿದೆ. ಹಣಕ್ಕೋಸ್ಕರ, ಪಾಸ್‌ಗೋಸ್ಕರ ೧೦೦ ಮಕ್ಕಳ ಜೀವವನ್ನು ಮಾರಿದ್ದಾರೆ. ಸೆಕ್ಷನ್ ೧೩೮ ಪ್ರಕಾರ ಅಗ್ನಿ ಶಾಮಕ ದಳದವರಿಗೆ ಕೆಲವು ಅಧಿಕಾರ ಇದೆ. ಕಾನೂನು ಪ್ರಕಾರ ಬೆಂಕಿ ಅನಾಹುತಕ್ಕೆ ಅನುಕೂಲವಾಗುವಂಥ ಸಲಕರಣೆಗಳಿದ್ದರೆ ಮತ್ತು ಕಾನೂನಿಗೆ ವಿರುದ್ಧವಾಗಿ ನಡೆದುಕೊಂಡರೆ ಹೋಗಿ ಕ್ರಮ ತೆಗೆದುಕೊಂಡು ಅದನ್ನು ನಿಲ್ಲಿಸುವುದಕ್ಕೆ ಅಧಿಕಾರವಿದೆ ಅಲ್ಲಿ ಫೈರ್ ಎಕ್ಸ್‌ಟಿಂಗ್ವಿಷರ್ ಇರ ಬೇಕಾಗಿತ್ತು. ಇದನ್ನೆಲ್ಲಾ ಮೊದಲೇ ನೋಡಿಕೊಂಡಿಲ್ಲ. ಬೆಂಕಿ ಹೊತ್ತಿಕೊಂಡಮೇಲೆ ಕ್ರಮ ತೆಗೆದುಕೊಂಡಿದ್ದಾರೆ. ಇದರಿಂದ ಏನೂ ಪ್ರಯೋಜನವಾಗಲಿಲ್ಲ. ಹಿಂದೊಮ್ಮೆ ಈ ರೀತಿ ಆದಾಗ ಅಗ್ನಿಶಾಮಕ ದಳದ ಡೈರೆಕ್ಟರನ್ನು ಸಸ್ಪೆಂಡ್ ಮಾಡಿದ್ದರು. ಈಗ ಏತಕ್ಕೆ ಮಾಡಲಿಲ್ಲವೋ ಗೊತ್ತಾಗ ಲಿಲ್ಲ. ಈ ವಿಷಯದಲ್ಲಿ ಡೆಪ್ಯುಟಿ ಕಮಿಷನರ್ ಜವಾಬ್ದಾರಿ ಜಾಸ್ತಿ ಇದೆ ಎಂದು ನನಗನ್ನಿಸುತ್ತದೆ. ಅವರೂ ಕೂಡ ಅಲ್ಲಿ ಹೋಗಲಿಲ್ಲ. ಅವರು ರೊಟೀನಾಗಿ ಫೈಲ್ ಡಿಸ್ಪೋಸ್ ಮಾಡಿ ಸುಮ್ಮನೆ ಇದ್ದರು ಕರ್ನಾಟಕ ಎಲೆಕ್ಟ್ರಿಸಿಟಿ ಬೋರ್ಡಿನವರೂ ಕೂಡ ತಮ್ಮ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸಿಲ್ಲ. ಹಿಂದೆ ಒಂದು ಸಾರಿ ಫ್ಯಾಕ್ಟರಿಗೆ ಪರ್ಮಿಷನ್ ಕೊಟ್ಟಾಗ ಹೈಟೆನ್‌ಷನ್ ವೈರ್ ಷಿಫ್ಟ್ ಮಾಡಿಸುವುದಕ್ಕೆ ೬೦ ಸಾವಿರ ರೂಪಾಯಿ ಕೊಟ್ಟರು. ಹೀಗಿರುವಾಗ ಕೆ.ಇ.ಬಿ.ನವರು ಯಾವರೀತಿ ಸುಮ್ಮನಿದ್ದರು? ಅವರ ಜೊತೆಯಲ್ಲಿ ರೈಲ್ವೆ ಇಲಾಖೆಯವರೂ ಸಹಕರಿಸಿದ್ದಾರೆ. ಹೀಗೆ ೬ ಏಜೆನ್ಸಿಗಳು ಸಹಕರಿಸಿ ಕರ್ನಾಟಕದಲ್ಲಿ ಎಂದೇದೂ ಆಗದಂಥ ದೊಡ್ಡ ದುರಂತವನ್ನು ಮಾಡಿದ್ದಾರೆ.

ಶ್ರೀ ಡಿ. ದೇವರಾಜ ಅರಸ್.—ಆ ಜಾಗ ರೈಲ್ವೆ ಇಲಾಖೆಗೆ ಸೇರಿದ್ದು. ಅವರು ಯಾವರೀತಿ ಇದಕ್ಕೆ ಒಪ್ಪಿದರೋ ಗೊತ್ತಿಲ್ಲ. ಅಥವಾ ಅವರನ್ನು ಕೇಳಿದರೋ ಇಲ್ಲವೋ ಅದೂ ಗೊತ್ತಿಲ್ಲ.

ಶ್ರೀ ಪಿ. ರಾಮ್‌ದೇವ್.—ನಮ್ಮ ರಾಜ್ಯದ ದುರಾದೃಷ್ಟವೋ ಏನೋ ಎಲ್ಲಾ ವ್ಯವಹಾರಗಳೂ ಹೀಗೆ ನಡೆಯುತ್ತವೆ. ಟಾಡಿ ಷಾಪ್‌ಗಳು, ಗ್ಯಾಂಬ್ಲಿಂಗ್ ಹೌಸಸ್, ಅಮ್ಯೂಸ್‌ಮೆಂಟ್ ಷಾಪ್‌ಗಳು ಯಾವುದೇ ತೆಗೆದುಕೊಳ್ಳಲಿ ಎಲ್ಲಾ ಕಡೆ ಇದೇ ರೀತಿ ಅವ್ಯವಹಾರಗಳು ನಡೆಯುತ್ತಿವೆ. ಸರ್ಕಸ್‌ಗೆ, ಎಗ್ಸಿಬಿಷನ್‌ಗೆ ಮೈದಾನಗಳು ಬೇಕು. ನಮ್ಮಲ್ಲಿ ಇದಕ್ಕೆ ಶುಭಾಷ್‌ನಗರ ಕೆರೆ ಇತ್ತು. ಈಗ ಅಲ್ಲೂ ಕಟ್ಟಡಗಳು ಬರುತ್ತಿವೆ. ಜಕ್ಕರಾಯನಕೆರೆ, ಮಿಲ್ಲರ್ ಟ್ಯಾಂಕ್, ಕೆಂಪಾಂಬುದಿ ಕೆರೆ ಎಲ್ಲಾ ಹೋಯಿತು. ನಾವು ಏನು ಪಾಪ ಮಾಡಿದ್ದೆವೋ ಗೊತ್ತಾಗಲಿಲ್ಲ. ನಾನು, ಟಿ.ಆರ್. ಶಾಮಣ್ಣನವರು, ಲಕ್ಷ್ಮೀಸಾಗರ್ ರವರು ಮೈದಾನ ಇಡಬೇಕು ಎಂದು ಹೋರಾಟ ಮಾಡಿದ್ದೇವೆ. ಆದರೂ ಏನೂ ಪ್ರಯೋಜನ ವಾಗಿಲ್ಲ. ಸರ್ಕಸ್‌ಗೆ, ಎಗ್ಜಿಬಿಷನ್‌ಗೆ ಶಾಶ್ವತವಾಗಿ ಮಾಡುವುದಕ್ಕೆ ಮೈದಾನಗಳಿರಬೇಕು. ಬೇರೆ ದೇಶ ಗಳಲ್ಲಿ ಸರ್ಕಸ್‌ಗೆ ಎಂದು ಪ್ರತ್ಯೇಕವಾದ ಮೈದಾನಗಳಿರುತ್ತವೆ. ವಸ್ತು ಪ್ರದರ್ಶನಗಳಿಗೆ ಕೂಡ ಪ್ರತ್ಯೇಕವಾದ ಕಟ್ಟಡವನ್ನು ಕಟ್ಟಿರುತ್ತಾರೆ. ನಮ್ಮಲ್ಲೂ ಆ ರೀತಿ ಇದ್ದರೆ ಇಂಥ ಅನಾಹುತಗಳನ್ನು ತಪ್ಪಿಸಬಹುದಾಗಿತ್ತು. ಅಧಿಕಾರಿಗಳ ಬೇಜಾವಾಬ್ದಾರಿಯಿಂದ ಇಂಥ ದುರಂತವಾಗಿದೆ. ಈಗ ನ್ಯಾಯಾಂಗ ತನಿಖೆಗೆ ಸರ್ಕಾರ ಆಜ್ಞೆ ಮಾಡಿವೆ. ಆದರೆ ಆ ವರದಿ ಒಂದು ವರ್ಷ ಆದಮೇಲೆ ಬಂದರೆ ಪ್ರಯೋಜನವಾಗುವುದಿಲ್ಲ. ಅದಕ್ಕೆ ಒಂದು ಕಾಲಮಿತಿ ಹಾಕಬೇಕು. ಮತ್ತೆ ಇನ್ನೊಂದು ಸಲಹೆ ಏನೆಂದರೆ ಈಗ ಏನು ಅನಾಹುತವಾಗಿದೆ ಆ ಜಾಗದಲ್ಲಿ ದುರಂತದ ಸ್ಮಾರಕಕ್ಕಾಗಿ ಒಂದು ಉದ್ಯಾನವನ ವನ್ನು ಮಾಡಿ. ಅದನ್ನು ನೋಡುತ್ತಾ ಇದ್ದರೆ ಕಣ್ಣಿಗೆ ಅದು ಕಾಣುತ್ತಿದ್ದು ಎಂದೆಂದಿಗೂ ಇಂಥ ಅಪಘಾತಗಳು ಆಗಬಾರದು ಎಂಬುದು ಮನಸ್ಸಿಗೆ ಬರುತ್ತಿರುತ್ತದೆ. ಆದ್ದರಿಂದ ಅಲ್ಲಿ ಉದ್ಯಾನವನ ಮಾಡಬೇಕೆಂದು ಹೇಳುತ್ತಾ ಅಪಘಾತಕ್ಕೀಡಾದವರಿಗೆ ಅನೇಕ ಸಂಸ್ಥೆಗಳವರು, ಸಾರ್ವಜನಿಕರು ವೈದ್ಯರು ಮುಂತಾದವರು ಸಾಕಷ್ಟು ಶ್ರಮ ವಹಿಸಿದ್ದಾರೆ, ಅವರೆಲ್ಲರಿಗೂ ನನ್ನ ವಂದನೆಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀಮತಿ ಎಸ್. ಪ್ರಮಿಳಾ (ಚಾಮರಾಜಪೇಟೆ).—ಮಾನ್ಯ ಅಧ್ಯಕ್ಷರೇ, ನಗರದಲ್ಲಿ ಸಂಭವಿಸಿದ ದುರ್ಘಟನೆ ಕುರಿತು ಎಲ್ಲ ಮಾನ್ಯ ಸದಸ್ಯರುಗಳೂ ಮಾತನಾಡಿದ್ದಾರೆ. ದುಃಖತಪ್ತರಾದ ತಂದೆ ತಾಯಿ

ಗಳ ಜೊತೆಗೆ ತಮ್ಮ ಅಶ್ರುತರ್ಪಣವನ್ನು ಅರ್ಪಿಸುವುದರಲ್ಲಿ ಯಾರೂ ಕೂಡ ಹಿಂದೆ ಬಿದ್ದಿಲ್ಲ. ಈ ಸರ್ಕಸ್ ಕಂಪೆನಿಗೆ "ವೀನಸ್ ಸರ್ಕಸ್" ಎನ್ನುವುದರ ಬದಲು "ವೀನಸ್ ಡೆತ್ ಟ್ರ್ಯಾಪ್" ಎಂದು ಹೆಸರಿಟ್ಟಿದ್ದರೆ ಚೆನ್ನಾಗಿರುತ್ತಿತ್ತು; ಮತ್ತು ಆಗ ನಮ್ಮ ಜನರಿಗೂ ಅದು ಪರಿಚಯವಾಗುತ್ತಿತ್ತು. Law of negligence ಎಂದು ಇದೆ. ಇದನ್ನು ವಿದೇಶಗಳಲ್ಲಿ ಪರಿಣಾಮಕಾರಿಯಾಗಿ ಉಪಯೋಗಿಸಿ ಕೊಳ್ಳುತ್ತಿದ್ದರೂ ನಮ್ಮ ರಾಜ್ಯದಲ್ಲಿ, ಅಷ್ಟೇಕೆ ನಮ್ಮ ಭಾರತ ದೇಶದಲ್ಲಿ ಇದುವರೆವಿಗೂ ಅದನ್ನು ಉಪಯೋಗ ಮಾಡಿಕೊಂಡಿಲ್ಲ. ಸೂಕ್ತ ಮುಂಜಾಗರೂಕತೆ ಕ್ರಮಗಳನ್ನು ಕೈಗೊಳ್ಳದೆ ಉದಾಸೀನ ಮಾಡಿದ್ದರಿಂದಲೇ it amounts to death thereby the people who are responsible will be held responsible for negligence. ಸರ್ಕಾರದ ವತಿಯಿಂದ ಈ ಸರ್ಕಸ್ ಕಂಪೆನಿಗೆ ಲೈಸೆನ್ಸ್ ಕೊಟ್ಟ ಅಧಿಕಾರಿಗಳೇ ಈ ದುರ್ಘಟನೆಗೆ ಮತ್ತು ಅಪಾರ ಸಾವು ನೋವಿಗೆ ಕಾರಣ. ಅವರು ಸರ್ಕಸ್ ಕಂಪೆನಿಗೆ ಲೈಸೆನ್ಸ್ ಕೊಡುವುದರ ಮುಖಾಂತರ ಸಾವಿನ ದವಡೆಗೆ ಸಾರ್ವಜನಿಕರನ್ನು ಆಹ್ವಾನಿಸಿದ್ದಾರೆ. This is nothing but invitation for death and the persons responsible must be severely dealt with. ಮಾನ್ಯ ರಾಮದೇವ್ ಅವರು ಮಾತನಾಡುತ್ತಾ, ಸರ್ಕಸ್ ಕಂಪೆನಿಗೆ ಲೈಸೆನ್ಸ್ ಕೊಡುವಲ್ಲಿ ಮತ್ತು ದುರ್ಘಟನೆಗೆ ಕಾರಣವಾಗುವಲ್ಲಿ ಐದು-ಆರು ಏಜನ್ಸಿಗಳಿವೆ ಎಂದು ಹೇಳಿದರು. ಈ ಏಜನ್ಸಿಯಲ್ಲಿರುವ ಅಧಿಕಾರಿಗಳೇ ಸಾರ್ವಜನಿಕರ ಪ್ರಾಣಹಾನಿಗೆ ಕಾರಣವೆಂದು ಹೇಳುತ್ತೇನೆ. ಅಷ್ಟೇ ಅಲ್ಲ, ನಿನ್ನೆಯಿಂದಲೂ ನಗರಸಭೆಯಲ್ಲಿ ಲೈಸೆನ್ಸ್ ಕೊಟ್ಟ ವಿಚಾರವಾಗಿ ದಾಖಲೆಗಳನ್ನು ಸೃಷ್ಟಿ ಮಾಡಲು ತರಾತುರಿಯಿಂದ ಓಡಾಟ ನಡೆಯುತ್ತಿದೆ ಎಂಬ ಸುದ್ದಿ ನನಗೆ ತಿಳಿದು ಬಂದಿದೆ ಈಗಾಗಲೇ ಮಾನ್ಯ ಮುಖ್ಯ ಮಂತ್ರಿಗಳು ಈ ಘಟನೆ ಬಗ್ಗೆ ನ್ಯಾಯಾಂಗ ತನಿಖೆ ನಡೆಸಲಾಗುವುದೆಂದು ಹೇಳಿದ್ದಾರೆ ಮತ್ತು ಹೇಳಿದಂತೆ ಅವರು ನಡೆದುಕೊಳ್ಳುತ್ತಾರೆ. ಆದುದ ರಿಂದ, ನಗರಸಭೆಯಲ್ಲಿ ದಾಖಲೆಗಳನ್ನು ಸೃಷ್ಟಿ ಮಾಡಲು ನಡೆಯುತ್ತಿರುವ ತರಾತುರಿ ಓಡಾಟವನ್ನು ತಪ್ಪಿಸಬೇಕಾದ್ದು ಅವರ ಆದ್ಯ ಕರ್ತವ್ಯ. ಮಾನ್ಯ ಮುಖ್ಯ ಮಂತ್ರಿಗಳು ತಕ್ಷಣವೇ ಸೂಕ್ತ ಸೂಚನೆ ಯನ್ನು ಕಳುಹಿಸಿಕೊಟ್ಟು, ನಗರಸಭೆ, ವಿದ್ಯುಚ್ಛಕ್ತಿ ಇಲಾಖೆ, ಅಗ್ನಿಶಾಮಕ ದಳ, ರೈಲ್ವೆ ಇಲಾಖೆ, ಜಿಲ್ಲಾ ನ್ಯಾಯಾಧೀಶರ ಮತ್ತು ಪೋಲೀಸ್ ಕಮಿಷನರ್ ಅವರ ಕಛೇರಿಗಳಲ್ಲಿ ಈ ಸರ್ಕಸ್ ಕಂಪೆನಿಗೆ ಸಂಬಂಧಿಸಿದ ದಾಖಲೆಗಳನ್ನು ಸುರಕ್ಷಿತವಾಗಿ ಭದ್ರಪಡಿಸಿ ಅವುಗಳನ್ನು ತರಿಸಿಕೊಳ್ಳಬೇಕಾದ್ದು ಅವರ ಮುಖ್ಯ ಕರ್ತವ್ಯ. ಇಲ್ಲದಿದ್ದರೆ, ನ್ಯಾಯಾಂಗ ತನಿಖೆ ಮಾಡಿದರೂ ಪ್ರಯೋಜನವಾಗುವುದಿಲ್ಲ. ಸಾಕ್ಷ್ಯಗಳನ್ನು ನಾಶ ಮಾಡಿ ಅಥವಾ ಮರೆ ಮಾಚಿ ನಮಗೂ, ನಿಮಗೂ ಮತ್ತು ಸಾರ್ವಜನಿಕರಿಗೂ ಮೋಸ ಮಾಡುವ ಪ್ರಸಂಗವಿದೆ. ಅದನ್ನು ತಪ್ಪಿಸಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಸರ್ಕಸ್ ಡೇರೆಯ ಬಳಿ ಅಗ್ನಿಶಾಮಕ ದಳವನ್ನು ಏತಕ್ಕೆ ಇಟ್ಟಿರಲಿಲ್ಲವೆಂದು ಮಾನ್ಯ ರಾಮದೇವ್ ಅವರು ಕೇಳಿದರು. ದೀಪಾ ವಳಿಯ ದಿನದಂದು ಬೆಂಗಳೂರಿನ ಸಿಟಿ ಮಾರುಕಟ್ಟೆಯಲ್ಲಿ ನಡೆದ ಅಗ್ನಿ ದುರಂತದಲ್ಲೂ ಹೀಗೆ ಆಯಿತು. ಆದುದರಿಂದ, ನಾನು ಕೇಳಿಕೊಳ್ಳುವುದೇನೆಂದರೆ, ಬೆಂಗಳೂರಿನ ಎಲ್ಲ ಬಡಾವಣೆಗಳಲ್ಲೂ ಅಗ್ನಿಶಾಮಕ ದಳದ ವಿಭಾಗವನ್ನು ತೆರೆಯಬೇಕು. ಇದರಿಂದ, ಎಲ್ಲಾದರೂ ಬೆಂಕಿ ಅನಾಹುತ ಸಂಭವಿಸಿದರೆ ಅಗ್ನಿಶಾಮಕ ದಳದವರು ಕೂಡಲೇ ಹೋಗಿ ಅದನ್ನು ಆರಿಸಿ ಹತೋಟಿಗೆ ತರುವುದಕ್ಕೆ ಅನುಕೂಲವಾಗುತ್ತದೆ. ಈಗ ಲಾದರೂ ಮಾನ್ಯ ಮುಖ್ಯ ಮಂತ್ರಿಗಳು ಆ ರೀತಿ ಸೌಲಭ್ಯ ಕಲ್ಪಿಸಿ, ಮುಂದೆ ಇಂತಹ ಅಗ್ನಿ ಅನಾಹುತ ಗಳು ಸಂಭವಿಸದಂತೆ ನೋಡಿಕೊಳ್ಳಬೇಕೆಂದು ಹೇಳುತ್ತೇನೆ.

ನಾವು ನೋಡಿದಂತೆ ಹಿಂದೆ ಸರ್ಕಸ್ ಮುಂತಾದ ವಿನೋದಾವಳಿಗಳು ಸುಭಾಷ್ ನಗರದ ಮೈದಾನ ದಲ್ಲಿ ನಡೆಯುತ್ತಿದ್ದವು. ಈಗಲೂ ಕೂಡ ಆ ಸ್ಥಳವನ್ನು ಸರ್ಕಸ್‌ಗೆ ಮೀಸಲಾಗಿಟ್ಟಿದ್ದರೆ ಇಂತಹ ದುರಂತ ಸಂಭವಿಸುತ್ತಿರಲಿಲ್ಲ. ಈಗ ಆ ಸ್ಥಳದಲ್ಲಿ ತಲೆ ಎತ್ತುತ್ತಿರುವ ಕಟ್ಟಡಗಳನ್ನು ನಿಲ್ಲಿಸಬೇಕು. ವಸ್ತು ಪ್ರದರ್ಶನ ನಡೆಸಲಿಕ್ಕೆ ಮತ್ತು ಕಾಂಗ್ರೆಸ್ ಕಛೇರಿಗೆ ಆ ಸುಭಾಷ್ ನಗರ ಮೈದಾನದ ಸ್ಥಳವೇ ಬೇಕೇ ? ಆದುದರಿಂದ, ಅವುಗಳನ್ನು ಬದಲಾಯಿಸಿ, ಅಲ್ಲಿ ಮೊದಲಿನಂತೆ ಸರ್ಕಸ್ ಮುಂತಾದ ವಿನೋದಾವಳಿ ಗಳನ್ನು ನಡೆಸುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಪ್ರಾರ್ಥಿಸುತ್ತೇನೆ ಮತ್ತು ಅವರು ಆ ರೀತಿ ಮಾಡುವರೆಂದು ನಂಬಿದ್ದೇನೆ.

ಸರ್ಕಸ್ ದುರಂತದಲ್ಲಿ ಸಾವಿಗೀಡಾದವರ ಕುಟುಂಬಕ್ಕೆ ತಲಾ ಐದು ಸಾವಿರ ರೂಪಾಯಿಗಳಂತೆಯೂ ಮತ್ತು ಗಾಯಗೊಂಡವರಿಗೆ ತಲಾ ಒಂದು ಸಾವಿರ ರೂಪಾಯಿಗಳಂತೆಯೂ ಪರಿಹಾರ ಕೊಡಲಾಗುವು ದೆಂದು ಮಾನ್ಯ ಮುಖ್ಯ ಮಂತ್ರಿಗಳು ಘೋಷಣೆ ಮಾಡಿದ್ದಾರೆ. ಮೃತಪಟ್ಟವರ ಕುಟುಂಬಗಳಿಗೆ ಐದು

ಸಾವಿರ ರೂಪಾಯಿಗಳನ್ನು ಕೊಡುವುದರಿಂದ ಅಷ್ಟಾಗಿ ಉಪಯೋಗವಾಗುವುದಿಲ್ಲ. ಆದರೆ, ಅರ್ಧ ಬೆಂದು, ಅವಯವಗಳ ವಿಕಾರಗೊಂಡು ಭಾರಿ ನೋವಿಗೆ ತುತ್ತಾಗಿರುವವರಿಗೆ ತಮ್ಮ ಮೊದಲ ಆಕಾರ ಬರುವುದಕ್ಕೆ ಖಂಡಿತ ಸಾಧ್ಯವಿಲ್ಲ. ಆದುದರಿಂದ, ಅವರಿಗೆ ಪ್ಲಾಸ್ಟಿಕ್ ಸರ್ಜರಿ ಮಾಡಿಸುವ ಜವಾಬ್ದಾರಿಯನ್ನು ಸರ್ಕಾರ ಹೊರಬೇಕು; ಮತ್ತು ಬದುಕಿ ಉಳಿದವರ ಚಿಕಿತ್ಸೆ ತಗಲುವ ಎಲ್ಲ ಖರ್ಚು ವೆಚ್ಚಗಳನ್ನೂ ಸರ್ಕಾರ ಭರಿಸಬೇಕು ; ಹಾಗೂ ಮುಂದೆ ಅವರಿಗೆ ಸೂಕ್ತ ಉದ್ಯೋಗಗಳನ್ನು ಒದಗಿಸುವುದಕ್ಕೆ ಸರ್ಕಾರ ವ್ಯವಸ್ಥೆ ಮಾಡಬೇಕು.

ನಾನು ಎರಡು ದಿವಸವೂ ವಿಕ್ಟೋರಿಯಾ ಆಸ್ಪತ್ರೆಗೆ ಹೋಗಿದ್ದೆ. ಬಹುಶಃ ಮಾನ್ಯ ಸಮದ್ ಅವರಂತೂ ಮನೆಗೆ ಹೋಗಿರಲಿಲ್ಲವೆಂದು ಕಾಣುತ್ತದೆ: ಊಟ ಕೂಡ ಮರೆತು ಅವರು ಆಸ್ಪತ್ರೆಯಲ್ಲೇ ಇದ್ದರು. ಅಲ್ಲಿ ಸಾರ್ವಜನಿಕರೂ ಕೂಡ ತಮ್ಮ ಕೈಲಾದ ಸೇವೆಯನ್ನು ಸ್ವಪ್ರೇರಣೆಯಿಂದ ಮುಂದೆ ಬಂದು ಮಾಡಿದ್ದಾರೆ. ಆದುದರಿಂದ, ಶಾಸಕರಾದ ನಾವೂ ಕೂಡ ಈ ದುರಂತದಲ್ಲಿ ನೊಂದವರಿಗೆ ಅಳಿಲು ಸೇವೆ ಮಾಡಲು ಯಾವ ವಿಧದಲ್ಲೂ ಹಿಂದೆ ಬೀಳಬಾರದು. ನಾವೂ ಕೂಡ ನಮ್ಮ ಕೈಲಾದ ಸೇವೆಯನ್ನು ಮಾಡಬೇಕು. ಆದುದರಿಂದ, ನನ್ನ ಒಂದು ತಿಂಗಳ ಸಂಭಾವನೆಯನ್ನು ಪರಿಹಾರ ನಿಧಿಗಾಗಿ ಕೊಡಲು ಇಚ್ಛಿಸುತ್ತೇನೆ. ಹಾಗೆಯೇ, ಉಳಿದ ಶಾಸಕರೂ ದಯವಿಟ್ಟು ಒಂದು ತಿಂಗಳ ಸಂಭಾವನೆಯನ್ನು ನೀಡಬೇಕೆಂದು ಪ್ರಾರ್ಥಿಸುತ್ತೇನೆ. ಮತ್ತು ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಸಿ.ಎಂ. ಇಬ್ರಾಹಿಂ.—ಮಾನ್ಯ ಅಧ್ಯಕ್ಷರೇ, ಶ್ರೀಮತಿ ಪ್ರಮೀಳಾ ಅವರ ಮಾತನ್ನು ಪುಷ್ಟೀಕರಿಸುತ್ತಾ, ನಾನು ನನ್ನ ಒಂದು ತಿಂಗಳ ಸಂಭಾವನೆಯನ್ನು ಪರಿಹಾರ ನಿಧಿಗೆ ಕೊಡಲು ಇಚ್ಛಿಸಿದ್ದೇನೆ. ಹಾಗೆಯೇ, ಮಾನ್ಯ ಅರ್ಥ ಸಚಿವರೂ ಸಹ ಕೊಡಲು ಇಚ್ಛಿಸಿದ್ದಾರೆ.

ಶ್ರೀ ಶೀರ್ನಾಳಿ ಚಂದ್ರಶೇಖರ್.—ನಾನೂ ಕೂಡ ಒಂದು ತಿಂಗಳ ಸಂಭಾವನೆಯನ್ನು ಕೊಡಲು ಸಿದ್ಧನಾಗಿದ್ದೇನೆ.

ಶ್ರೀ ವಿ.ಎಲ್. ಭಾವಿ.—ಮಾನ್ಯ ಅಧ್ಯಕ್ಷರೇ, ಅನಿರೀಕ್ಷಿತವಾಗಿ ನಡೆದ ದುರ್ಘಟನೆಯಲ್ಲಿ ಮೃತರಾದವರಿಗೆ ಸಂತಾಪವನ್ನು ಸೂಚಿಸುತ್ತಾ ಅವರ ಕುಟುಂಬದವರ ದುಃಖದಲ್ಲಿ ನಾನೂ ಕೂಡ ಭಾಗಿಯಾಗಿದ್ದೇನೆಂದು ಸೂಚಿಸಬಯಸುತ್ತೇನೆ. ಮೊಟ್ಟ ಮೊದಲನೆಯದಾಗಿ, ದುರ್ಘಟನೆ ನಡೆದ ಕೂಡಲೇ ಮಾನ್ಯ ಮುಖ್ಯ ಮಂತ್ರಿಗಳು ಸೂಕ್ತ ವ್ಯವಸ್ಥೆ ಮಾಡಿ, ಗಾಯಾಳುಗಳಿಗೆ ಔಷಧೋಪಚಾರ ವ್ಯವಸ್ಥೆ ಮಾಡಿ, ಸ್ವತಃ ವಿಕ್ಟೋರಿಯಾ ಆಸ್ಪತ್ರೆಗೆ ಭೇಟಿ ಕೊಟ್ಟು ಪರಿಶೀಲಿಸಿದ್ದಾರೆ. ಅದಕ್ಕಾಗಿ ಅವರಿಗೆ ನಾನು ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಈಗಾಗಲೇ ಮುಖ್ಯ ಮಂತ್ರಿಗಳು ಮೃತಪಟ್ಟವರ ಕುಟುಂಬದವರಿಗೆ ಐದು ಸಾವಿರ ರೂಪಾಯಿಗಳನ್ನು ಮತ್ತು ಗಾಯಗೊಂಡವರಿಗೆ ಒಂದು ಸಾವಿರ ರೂಪಾಯಿಗಳನ್ನು ಪರಿಹಾರ ಧನವನ್ನಾಗಿ ಘೋಷಿಸಿದ್ದಾರೆ. ನಾನು ಆಸ್ಪತ್ರೆಗೆ ಹೋಗಿ ಗಾಯಾಳುಗಳನ್ನು ನೋಡಿದೆ. ಅವರಲ್ಲಿ ಕೆಲವರು ಕೈಕಾಲುಗಳನ್ನು ಕಳೆದುಕೊಂಡು ಅಂಗವಿಕಲರಾಗಿದ್ದಾರೆ ಅವರಿಗೆ ನೀಡಿರುವ ಪರಿಹಾರ ಧನ ಒಂದು ಸಾವಿರ ರೂಪಾಯಿ ಸಾಲದು. ಅದಕ್ಕಾಗಿ ಅವರು ತಮ್ಮ ಮುಂದಿನ ಜೀವನವನ್ನು ಆರೋಗ್ಯವಾಗಿ ನಡೆಸಲಿಕ್ಕೆ ಅನುಕೂಲವಾಗುವಂತೆ ಸರ್ಕಾರ ಹೆಚ್ಚಿನ ಸಹಾಯ ನೀಡಬೇಕು ಮತ್ತು ಅವರ ಜವಾಬ್ದಾರಿಯನ್ನು ಹೊರಬೇಕೆಂದು ಹೇಳುತ್ತೇನೆ. ಇನ್ನೊಂದು ವಿಚಾರವೆಂದರೆ, ದುರಂತ ಸಂಭವಿಸಿದಾಗ, ಸರ್ಕಸ್ ಕಂಪೆನಿಗೆ ಸೇರಿದ ಮಿನಿ ಸ್ಕರ್ಟ್ ಧರಿಸಿದ್ದ ಒಬ್ಬ ಕಲಾವಿದೆಯನ್ನು ಕೆಲವು ದುಷ್ಕರ್ಮಿಗಳು ಮಾನಭಂಗ ಮಾಡುವ ಸಲುವಾಗಿ ಹೊತ್ತುಕೊಂಡು ಹೋಗಿದ್ದಾರೆಂಬ ಸುದ್ದಿ ಬಲ್ಲ ಮೂಲಗಳಿಂದ ನನಗೆ ಗೊತ್ತಾಗಿದೆ. ಆದುದರಿಂದ, ಈ ಬಗ್ಗೆ ತಾವು ಮಾಹಿತಿಯನ್ನು ತರಿಸಿ, ದುಷ್ಕರ್ಮಿಗಳ ಮೇಲೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಪ್ರಾರ್ಥಿಸುತ್ತೇನೆ.

† SRI JEEVARAJA ALVA (Jayamahal).—Mr. Speaker, Sir, I would confine myself to the events that occurred after the tragedy. I beg to differ from Kumari Pramila, the hon'ble Member of the House, who complimented the Health Minister for having undertaken stupendous task of saving the lives of the people were struck in the tragedy. Sir, I think the Government should bow down their head in shame.

Tragedies, clamities, accidents, occur in the city of this magnitude where the population is to the tune of 30 lakhs and 100 to 200 people get injured. In case of a burn the requirement is only a question of Burnol, Sooting Ointment, Anti-reptic or some fluids in-take. But our Government who were panick-sticken had to make radio announcements repeatedly to doctors and others to rush to the hospitals. They also requested the people who have medicines to rush to the hospitals with those medicines and to keep the hospitals open. Is it not a shame on the part of the Government for calling the people and others for medicines and other requirements for the rescue of the Government? If it were to be a tragedy of the bigger magnitude like earth-quake or an air-attack by the foreign country. what would be the reaction ? It was the question of treating merely 90 people who were the victims of the tragedy. But they had not sufficient fluids, Ointments and blood supply. Being a medical man. I can only say that the immediate requirement was only a Burnol or an Antic Oiutment for which Messrs. Smith Kline and French, a Pharmaceutical concern had to rush the requirements for the rescue of the Government. Our Government of Karnataka which should be proud of having its Health department should be ashamed of such an helpless position when the tragedy of a bigger mangitude has occurred. I am not blaming the Health Minister, who is quite responsible and kind enough to do a good job immediately after the tragedy. But I should say that the successive Governments have failed to establish an 'Accident Complex'. Now, our Hon'ble Chief Minister Sri Gundu Rao has made an anuouncement that an 'Accident Complex' will be opened. After all, the eyes of the Government will be opened only after the tragedy occurs. Our Chief Minister is kind enough to make this announcement in a bigger measure to open an 'Accident Complex' and a 'Burning Centre', shortly. Anyway the announcement that has been made by him should be kept up. The Preuious Chief Ministers had come out with statements that they would open 'Accident Complex' and 'Burning Centre'. But it is a shameful fact that the Government could not think of it so for. It was the Mahabhodi Society who initiated the Government to open the Burning Centre. I would only appeal to the Government through you Sir, that they should realise the gravity of the situation and should get themselves prepared at any time for all such clamities and accidental happenings in future in osder to save the valuable lines.

SRI A. LAKSHMISAGAR (Chikpet).— Sir, all the details connected with this circus tragedy have been already furnished by the Hon'ble Members who spoke. But there are certain facts which

appear to be patent, which affect the authorities, have not been taken into consideration, before granting the licence. Everything was finish. d within ten minutes from the time of the fire accident and the other necessary help flowed only thereafter. Sir, from the facts already furnished, two things emerge. One is that the site where the licence was granted to run the circus shows, was a site which could not fulfil anyone of the conditions and rules regulating or governinig the grant of licence. There can be no doupt about it. Secondly, even after the grant of licence the in-adequaties that existed there at the place were pointed out by the Prsss and others. Even then the Government or the authorities did not apply their minds to take corrective measures. This only increases the criminality of the persons involved in this affair. Sir, as pointed out by the Hon'ble Leader of the Opposition, I have come to this irresistable conclusion that the officials were pressurised into grant of this lience. There can be no mistake about it. All these facts must be enquired into. immediately. Of insists that a commission of Enquiry must be constituted immeditely without any loss of avoidable time. Time is the essence of the matter so far as this tragedy is concerned. If the same subject is taken up after some time, people may not be able to remember all the details connected with this affairs. Thereforeexpeditious steps should be taken for the constitution of this Enquiry Commission without any further loss of time. Sir, I would also submit to the Government that suitable awards may be given to the men and women who at the risk of their lives helped in rescue operations. That is the fact, which the Government may kindly consider. I should also bring to the notice of the Government that the charred bodies of the children were thrown into the mortuary almost like pieces of baggages. The hospital authorities do not seem to have sufficient number of bedsheets to cover those bodies. But now they might have provided. Immediately after the tragedy, those bodies were thrown like pieces of baggages without being covered by bedsheets.

SRI A. K. ABDUL SAMAD.—The bodies were kept open for identification. There were sufficient number of bedsheets with the hospital authoritees. I would like to clarify this.

SRI A. LAKSHMI SAGAR.—My information appears to be that Therefore, all the persons responsible for the grant of licence, callousness that was exhibited by the licensing and other authorities, and the throwing up of the rules and regulations covering the grant of license, must be enquired into and the persons responsible for this goastly tragedy including the politicians must be severely deal

with. Otherwise a licence in a place like this would not have been granted under ordinary circumstamces. This is a very serious matter. I am not saying that if all these precautions had been taken and if there were to be a fire accident, there would not have been loss of lives. But it could have been minimised. I therefore, emphasise and demand that immediate steps should be taken for the constitution of the Enquiry Commission without any further loss of time.

SRI D. DEVARAJ URS.— I would like to submit one point which I forgot to mention earlier. Immediately after this fire accident took place, the whole area became dark, The departmental people might have switched off the main switch connecting the lines so as to prevent further possible mishap. But the whole area was so dark that the people could not even think of what to do and what not to do. That was another added tragedy to the one already occurred. Secondly, it is said that the people who were given license to run this circus had their own dynamo, their own arrangements for the production of the electricity. That is another point which we have to look into. If they had such an arrangement of their own, atleast the area could have been lighted while the rescue operations and other things took place. But it was in total darkness.

3-00 P.M.

And I am sure, the Government will bear with me or they might have come to know that the policemen have used their light fixed to the headgear while moving about because the whole area was totally dark.

MR. SPEAKER.—All the hon. Members have sufficiently spoken.

† ಶ್ರೀ ಎಂ. ಚಂದ್ರಶೇಖರ್ (ಜಯನಗರ).—ಸನ್ಮಾನ್ಯ ಅಧ್ಯಕ್ಷರೇ, ಈ ಒಂದು ದುರಂತದಲ್ಲಿ ನನ್ನ ಹತ್ತಿರದ ಸಂಬಂಧವರು ಕೂಡ ಒಳಗಾಗಿದ್ದಾರೆ. ನನ್ನ ಅಣ್ಣನ ಸೊಸೆ ಮತ್ತು ಮೊಮ್ಮಗಳು ಅವೊತ್ತು ಸರ್ಕಸ್‌ಗೆ ಹೋಗಿದ್ದಾರೆ. ಅವರು ಲೇಟ ಆಗಿ ಹೋಗಿದ್ದು ಒಳಗೆ ಹೋಗಬಾರದೆಂದು ಇದ್ದರೂ ಮಕ್ಕಳಿಗೆ ಆನೆ, ಕುದುರೆ ತೋರಿಸಬೇಕು ಎಂದು ನೋಡಲಿಕ್ಕೆ ಹೋಗಿದ್ದಾರೆ. ಅವರು ಡ್ರೆಸ್ ಸರ್ಕಲ್‌ನಲ್ಲಿ ಕುಳಿತಿದ್ದರು. ಹೊರಗೆ ಬರಲಿಕ್ಕೆ ಒಂದೇ ಒಂದು ಬಾಗಿಲು ಇತ್ತಂತೆ. ಅವರು ಬಾಗಿಲ ಬಳಿ ಬರುವ ಹೊತ್ತಿಗೆ ಬಹಳ ದೂರದಲ್ಲಿ ಬಗ್ ಅಂತ ಹತ್ತಿಕೊಂಡ ಹಾಗೆ ಆಯಿತಂತೆ. ಒಂದು ಹುಡುಗ ನನ್ನು ಹೊರಗಡೆ ಬಿಟ್ಟು ಇನ್ನೊಂದು ಮಗು ಕರೆದುಕೊಂಡು ಬರುವುದರೊಳಗೆ ಕತ್ತಲು ಆಯಿತಂತೆ. ಹೆಂಡತಿ ಮತ್ತು ಮಗು ಬರದೇ ಇದ್ದಾಗ ಒಂದು ಗಂಟೆ ಹುಡುಕಾಡಿದ ಮೇಲೆ ಯಾವುದೋ ಒಂದು ವ್ಯಾನ್‌ನಲ್ಲಿ ಆಸ್ಪತ್ರೆಗೆ ಹೋಗಿದ್ದಾರೆ ಎಂದು ಗೊತ್ತಾಯಿತಂತೆ. ಸುಮಾರು ೧೫ ಪರ್ಸೆಂಟ್ ಬರ್ನ್ ಆಗಿದೆ. ಸೊಸೆ ಮತ್ತು ಮಗು ಖಾಸಗಿ ಆಸ್ಪತ್ರೆಯಲ್ಲಿದ್ದಾರೆ. ಅಲ್ಲಿಂದ ಜನ ಹೇಳುವ ಪ್ರಕಾರ ಬೆಂಕಿ ಹೊತ್ತಿಕೊಂಡಾಗ ಜನ ಒಟ್ಟಿಗೆ ಹೊರಕ್ಕೆ ಬರಲಿಕ್ಕೆ ಅಲ್ಲಿ ಒಂದೇ ಒಂದು ಬಾಗಿಲು ಇತ್ತು ಎಂದು ಹೇಳಿದ್ದಾರೆ. ಪತ್ರಿಕೆಯಲ್ಲಿ ಮ್ಯಾನೇಜರ್ ಮೂರು ಬಾಗಿಲುಗಳು ಇದ್ದುವು ಜನರು ಇನ್ನೆರಡು ಬಾಗಿಲುಗಳಲ್ಲಿ ಹೋಗಬಹುದಿತ್ತು. ಆದರೆ ಒಂದೇ ಒಂದು ಬಾಗಿಲಿನಲ್ಲಿ ಬಂದರು ಎಂದು ಹೇಳಿದ್ದಾರೆ. ನಾಳೆ ಎನ್‌ಕ್ವಯಿರಿ ಆಗುತ್ತದೆ ಎನ್ನುವ ದೃಷ್ಟಿಯಿಂದ ಈಗಾಗಲೇ ಪೀಠಿಕೆ ಪ್ರಾರಂಭವಾಗಿದೆ. ಅಲ್ಲಿ ಒಂದೇ ಒಂದು ಬಾಗಿಲು ಇದ್ದು ಎರಡನೇ ಹೋಗೆ ಜನರು ರೆಡಿಯಾಗಿದ್ದರು. ಅವರು ಹಾಕಿದಂಥ ಟಾರ್‌ಪಲ್

ಎಣ್ಣೆ ಇದ್ದುದರಿಂದ ಬೇಗ ಸುಟ್ಟಿದೆ. ಯಾವುದೇ ನಿಯಮವಿಲ್ಲದೇ ಆ ಸ್ಥಳದಲ್ಲಿ ಲೈಸೆನ್ಸ್ ಕೊಟ್ಟಿರುವುದಕ್ಕೆ ಕಾರಣ ಏನು ? ಈಗ ಇದಕ್ಕೆ ಸಂಬಂಧಪಟ್ಟಂತೆ ಐದಾರು ಜನ ಅಧಿಕಾರಿಗಳು ಏನಿದ್ದಾರೆ ಅವರೆಲ್ಲರೂ ಕಾರಣಕರ್ತರು. ಕಾರ್ಪೊರೇಷನ್ನಿನವರು ನಿಲ್ಲಿಸಬೇಕೆಂದು ಎರಡು ಸಾರಿ ನೋಟೀಸ್ ಕೊಟ್ಟಿದ್ದಾರೆ. ಅಷ್ಟರೊಳಗೆ ಹಿಂದಿನ ಪೋಲೀಸ್ ಕಮಿಷನರ್ ಅವರು ಅದನ್ನು ಇನಾಗ್ಯುರೇಟ್ ಮಾಡಿದರು. ನಮ್ಮ ಇಲಾಖೆಯವರು ನಾವು ಲೈಸೆನ್ಸ್ ಕೊಡದೇ ಇದ್ದರೆ ಕಷ್ಟವಾಗುತ್ತದೆ ಎನ್ನುವ ಸಂದರ್ಭದಲ್ಲಿ ಅನೇಕ ಒತ್ತಡಗಳು ಬಂದು ಅನಂತರ ಲೈಸೆನ್ಸ್ ಕೊಟ್ಟಿದ್ದಾರೆಂದು ಕಾಣುತ್ತದೆ. ಇತ್ತೀಚೆಗೆ ಅಡ್ವರ್‌ಟೈಸ್‌ಮೆಂಟ್‌ಗೋಸ್ಕರ ಹೆಚ್ಚು ಲೈಟ್ ಹಾಕುತ್ತಿದ್ದಾರೆ. ಇದು ಷಾರ್ಟ್‌ಸರ್‌ಕ್ಯೂಟ್ ಆಗಿರಬೇಕು. ಕೆಲವರು ಸ್ಟವ್ ಬರ್ನ್ ಆದ್ದರಿಂದ ಆಯಿತು ಎಂದು ಹೇಳುತ್ತಾರೆ. ಇನ್ನು ಕೆಲವರು ಕೆಳಗಡೆಯಿಂದ ಬೆಂಕಿ ಹತ್ತಿಕೊಂಡಿದೆ ಎಂದು ಹೇಳುತ್ತಾರೆ. ಇದೆಲ್ಲಾ ಸುಳ್ಳು. ಅಲ್ಲಿ ಇದ್ದು ನೋಡಿದಂಥ ವ್ಯಕ್ತಿಗಳು ಹೇಳುವ ಪ್ರಕಾರ ಅಲ್ಲಿದ್ದಂತಹ ವೈರಗಳು ಹೀಟ್ ಆಗಿ ಷಾರ್ಟ್ ಸರ್‌ಕ್ಯೂಟ್ ಆಗಿದೆ. ಇದರ ಬಗ್ಗೆ ಎಲೆಕ್ಟ್ರಿಸಿಟಿ ಬೋರ್ಡ್‌ನವರು ನೋಡಿಕೊಂಡಿದ್ದಾರೆಯೇ ? ಇದೇ ರೀತಿ ಕೆಲವು ವಿಚಾರಗಳು ಇವೆ. ಈ ಸ್ಥಳವನ್ನು ಶಾಸಕರಾದ ನಾವುಗಳು ನೋಡಿದ್ದೇವೆ. ಇದು ಸರ್ಕಸ್‌ಗೆ ಸರಿಯಾದ ಸ್ಥಳ ಅಲ್ಲ ಎಂದು ಗೊತ್ತು. ಆದರೂ ನಾವು ಈ ಬಗ್ಗೆ ಯಾರಿಗೂ ತಿಳಿಸಲಿಲ್ಲ. ಆದ್ದರಿಂದ ನಾವು ತಪ್ಪಿತಸ್ಥರೇ ಬೆಂಗಳೂರು ನಗರದ ಶಾಸಕರಾದಂಥ ನಾವುಗಳು ಆ ಸ್ಥಳವನ್ನು ಕಂಡು ಕೂಡ, ಅಧಿಕಾರಿಗಳು ತಪ್ಪು ಮಾಡಿದ್ದಾರೆ ಎನ್ನುವುದು ಗೊತ್ತಿದ್ದು ಕೂಡ. ನಮ್ಮ ಮನಸ್ಸಿನಲ್ಲಿಯೇ ಇಟ್ಟುಕೊಂಡು ಇದು ತಪ್ಪು ಎಂದು ನಾವು ಯಾರೂ ಪ್ರತಿಭಟನೆ ರೂಪದಲ್ಲಿ ಇಲಾಖೆಗಳಿಗೆ ತಿಳಿಸಲಿಲ್ಲ. ಈ ದುರಂತ ಆಗುವವರೆಗೂ ನಾವು ತಿಳಿಸದೇ ಇರುವುದರಿಂದ ನಾವುಗಳು ಕೂಡ ಬೆಂಗಳೂರು ಜನತೆಯಲ್ಲಿ ಕ್ಷಮಾಪಣೆಯನ್ನು ಕೇಳುತ್ತೇವೆ. ಈ ದುರಂತದಲ್ಲಿ ನೊಂದ ಇನ್ನೊಂದು ಕುಟುಂಬದ ಬಗ್ಗೆ ಹೇಳಬೇಕು ಎಂದರೆ ಒಂದು ಮಗು, ತಾಯಿ, ಸೊಸೆ, ತುಳಿತಕ್ಕೆ ಸಿಕ್ಕಿ ಆಸ್ಪತ್ರೆಯಲ್ಲಿದ್ದಾರೆ. ಆ ತುಳಿತಕ್ಕೆ ಸಿಕ್ಕಿದವರ ಮೈಯಲ್ಲಿದ್ದಂತಹ ಒಡವೆಗಳು, ಸರಗಳು, ಮಂಗಳಸೂತ್ರ ಎಲ್ಲಾ ಲೂಟಿಯಾಗಿವೆ ಈ ದುರಂತದಲ್ಲಿ ಅವರ ತೊಂದರೆಯೊಳಗೆ ಪೋಲೀಸರು ಸಹಕಾರ ಮಾಡಿರಬಹುದು ಆದರೆ ಬೇಕಾದಷ್ಟು ಲೂಟಿಯಾಗಿದೆ ಬೇಕಾದಷ್ಟು ಪಿಕ್‌ಪ್ಯಾಕೆಟ್‌ಗಳು ಆಗಿವೆ. ಆಸ್ಪತ್ರೆಗೆ ಸೇರಿಸುವ ಸಮಯದಲ್ಲಿ, ಆಸ್ಪತ್ರೆಯ ಒಳಗೆ ಇದು ನಡೆದಿದೆ ಎಂದು ತಿಳಿದು ಬಂದಿದೆ. ಕಷ್ಟದಲ್ಲಿರುವವರನ್ನು ಕಂಡರೂ ಕೂಡ ಇದು ಮಾನವನ ವಿಕೃತ ಬುದ್ಧಿ. ಉರಿಯುವ ಬೆಂಕಿಯಲ್ಲಿ ಸಿಗರೇಟ್ ಹತ್ತಿಸಿಕೊಂಡಂತ ಪರಿಸ್ಥಿತಿ ಬಂದಿದೆ. ಈಗ ಅನೇಕ ಜನರು ಸತ್ತಿದ್ದಾರೆ. ಅವರ ಕುಟುಂಬದವರಿಗೆ ೫ ಸಾವಿರ ರೂಪಾಯಿ ಕೊಡುತ್ತೇವೆಂದು ಹೇಳಿದ್ದೀರಿ. ಸುಟ್ಟ ಗಾಯಗಳಿಂದ ಅನೇಕ ಜನ ಉಳಿಯುವುದಿಲ್ಲ. ಈಗ ೪೦–೫೦ ಪರ್‌ಸೆಂಟ್ ಹೆಚ್ಚು ಬರ್ನ್ ಆಗಿರತಕ್ಕವರು, ಮುಂದೆ ಉಳಿದುಕೊಂಡು ಅಂಗವಿಕಲರಾದರೆ ಅವರ ಟ್ರೀಟ್‌ಮೆಂಟ್‌ಗೆ ಎಷ್ಟು ಹಣ ಬೇಕಾಗುತ್ತದೆ ಅಷ್ಟು ಹಣವನ್ನು ಕೊಡುತ್ತೇವೆಂದು ಹೇಳಬೇಕು. ಅವರಿಗೆ ಒಂದು ಸಾವಿರ ರೂಪಾಯಿಗಳ ಮಿತಿಯನ್ನು ಹಾಕಬಾರದು. ಈ ದುರಂತದಲ್ಲಿ ಆಗಿರುವ ನಷ್ಟಕ್ಕೆ, ಆಗಿರತಕ್ಕ ತೊಂದರೆಗಳ ಬಗ್ಗೆ ಭಗವಂತನು ಅವರಿಗೆ ದುಃಖವನ್ನು ಭರಿಸುವಂತಹ ಶಕ್ತಿಯನ್ನು ಕೊಡಲಿ ಎಂದು ಪ್ರಾರ್ಥಿಸುತ್ತೇನೆ. ಇನ್ನು ಮುಂದೆ ಈ ರೀತಿ ಆಗದಂತೆ ಸಂಬಂಧಪಟ್ಟ ನಿಯಮಗಳನ್ನು ಬದಲಾವಣೆ ಮಾಡಲಿಕ್ಕೆ ಸರ್ಕಾರ ತೀವ್ರ ಗಮನಹರಿಸಬೇಕು. ಇನ್ನು ಜುಡಿಷಿಯಲ್ ಎನ್‌ಕ್ವಯೀರಿ ಮಾಡುತ್ತೇವೆಂದು ಹೇಳಿದ್ದಾರೆ. ಅದರಲ್ಲಿ ಸತ್ಯ ಬರುತ್ತದೆ. ಅದರ ಪ್ರಕಾರ ನಡೆಸಬೇಕು. ಇನ್ನು ಮುಂದೆ ಈ ತರಹ ಘಟನೆಗಳು ನಡೆಯದಂತೆ ಸರ್ಕಾರ ಎಚ್ಚರಿಕೆಯಿಂದ ನೋಡಿಕೊಳ್ಳಲಿಕ್ಕೆ ಪ್ರಯತ್ನ ಮಾಡಬೇಕೆಂದು ಹೇಳಿ, ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಹೆಚ್. ಗಂಗಾಧರನ್ (ಕೃಷ್ಣರಾಜ).—ಅಧ್ಯಕ್ಷರೆ, ಈ ದುರಂತದಲ್ಲಿ ಮೃತರಾದವರಿಗೆ ಸಂತಾಪವನ್ನು ಸೂಚಿಸುತ್ತಾ ಒಂದೆರಡು ಮಾತುಗಳನ್ನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಮರಣೋತ್ತರ ಪರೀಕ್ಷೆ ಮಾಡುವ ಕಾಲ ಅಲ್ಲ. ಈ ತರಹ ದುರಂತ ಆದಾಗ ಸರ್ಕಾರದಿಂದ ಹಣವನ್ನು ಕೊಡುವ ಬದಲು ಆ ಟಿಕೆಟ್‌ನಲ್ಲಿಯೇ ಇನ್‌ಷ್ಯೂರೆನ್ಸ್ ಟ್ಯಾಕ್ಸ್ ಇಂಟ್ರಡ್ಯೂಸ್ ಮಾಡಿ, ಹೊಸ ಕಾನೂನು ಮಾಡಿ ದುರಂತ ಸಂಭವಿಸಿದರೆ, ಇನ್‌ಷ್ಯೂರೆನ್ಸ್ ಟ್ಯಾಕ್ಸ್‌ನಿಂದ ಏನು ಉತ್ಪನ್ನವಾಗಿರುತ್ತದೆ ಅದರಿಂದ ಕೊಡುವಂತ ವ್ಯವಸ್ಥೆ ಮಾಡುವ ರೀತಿಯಲ್ಲಿ ಕಾನೂನು ಬದಲಾವಣೆ ಮಾಡಲಿಕ್ಕೆ ಈ ಸದನ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. ಈ ದುರ್ಘಟನೆಯ ಬಗ್ಗೆ ಅನೇಕ ಕಾರಣಗಳನ್ನು ಮಾನ್ಯ ಸದಸ್ಯರು ತಿಳಿಸಿದ್ದಾರೆ ಅದರ ಬಗ್ಗೆ ಹೆಚ್ಚು ವಿಸ್ತರಿಸಲಿಕ್ಕೆ ಹೋಗದೆ. ಈ ಕಾನೂನು ಬಗ್ಗೆ ತಿದ್ದುಪಡಿ ಮಾಡುವ

ವ್ಯವಸ್ಥೆಯನ್ನು ನಾವೆಲ್ಲರೂ ನಮ್ಮ ಮನಸ್ಸನ್ನು ಒಂದುಗೂಡಿಸಿ ಮಾಡಬೇಕೆಂದು ಹೇಳುತ್ತೇನೆ. ಮೃತರ ಆತ್ಮಕ್ಕೆ ಶಾಂತಿಯನ್ನು ಕೊಡಲೆಂದು ಭಗವಂತನಲ್ಲಿ ಪ್ರಾರ್ಥಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಹೆಚ್.ಡಿ. ದೇವೇಗೌಡ (ಹೊಳೆನರಸೀಪುರ).—ಮಾನ್ಯ ಸಭಾಧ್ಯಕ್ಷರೆ, ಸರ್ಕಸ್‌ನ ದುರಂತವನ್ನು ದುರ್ದೈವೀ ಘಟನೆ ಎಂದು ಕರೆಯಬೇಕಾಗುತ್ತದೆ. ಮರಣ ಹೊಂದಿರತಕ್ಕ ಕುಟುಂಬ ವರ್ಗದವರಿಗೆ ಮರಣದ ನಷ್ಟದಿಂದ ಉಂಟಾಗಿರತಕ್ಕ ದುಃಖವನ್ನು ಭರಿಸಲು ಭಗವಂತನು ಸರ್ವಶಕ್ತಿಯನ್ನು ಕೊಡಲಿ ಎಂದು ಈ ಸದನದ ಮುಖಾಂತರ ಪ್ರಾರ್ಥಿಸುತ್ತೇನೆ. ನಾನು ಯಾವ ವಿವರಗಳನ್ನು ಕೊಡುವುದಕ್ಕೆ ಹೋಗುವುದಿಲ್ಲ. ಈಗಾಗಲೇ ಮಾನ್ಯ ಸಭೆಯ ಸದಸ್ಯರು ಅನೇಕ ವಿಷಯಗಳನ್ನು ವ್ಯಕ್ತಪಡಿಸಿದ್ದಾರೆ. ಕಮಿಷನ್ ಆಫ್ ಎನ್‌ಕ್ವಯಿರಿ ಆ್ಯಕ್ಟ್ ಪ್ರಕಾರ ವಿಚಾರಣೆ ಮಾಡುತ್ತೇವೆಂದು ಹೇಳಿದ್ದಾರೆ ಅದು ಶ್ಲಾಘನೀಯವಾದುದು. ಹಲವಾರು ಗುರುತರವಾದ ಆಪಾದನೆಗಳನ್ನು, ಸಂಶಯವನ್ನು ಈ ಸದನದ ಸದಸ್ಯರು ವ್ಯಕ್ತಪಡಿಸಿದ್ದಾರೆ. ಅದರ ಬಗ್ಗೆ ಸಂಶಯ ನಿವಾರಣೆ ಮಾಡತಕ್ಕದ್ದು ನಮ್ಮ ಮೇಲೆ ಬಿದ್ದಿರುವ ಜವಾಬ್ದಾರಿ ಎಂದು ಹೇಳಿ ನ್ಯಾಯಾಂಗ ವಿಚಾರಣೆ ಒಪ್ಪಿದ್ದಾರೆ, ಈ ವಿಚಾರಣೆಯ ಬಗ್ಗೆ ಹೈಕೋರ್ಟ್ ಜಡ್ಜ್ ತೀರ್ಮಾನ ಮಾಡಬೇಕಾಗುತ್ತದೆಂದು ಭಾವಿಸಿಕೊಂಡಿದ್ದೇನೆ. ಇನ್ನೊಂದು ವಿಚಾರ ಏನೆಂದರೆ, ನಮ್ಮ ಜಿಲ್ಲೆಯಲ್ಲಿ ನಡೆಯತಕ್ಕ ಗೊಮ್ಮಟೇಶ್ವರನ ಮಹಾ ಮಸ್ತಕಾಭಿಷೇಕಕ್ಕೆ ಬಹಳ ಜನ ಷೆಡ್ಡುಗಳನ್ನು ಹಾಕಿಕೊಂಡಿದ್ದಾರೆ. ತಾವು ಈ ಸ್ಥಳವನ್ನು ಪರಿಶೀಲಿಸಿ ಈಗಲೇ ಮುನ್ನೆಚ್ಚರಿಕೆ ತೆಗೆದುಕೊಂಡು ಅಲ್ಲಿ ಅಗ್ನಿಶಾಮಕ ದಳವನ್ನು ಇಡುವ ವ್ಯವಸ್ಥೆ ಮಾಡಬೇಕು. ಕುಡಿಯುವ ನೀರಿಗೂ ಕೂಡ ಬಹಳ ತೊಂದರೆ ಇರುವುದರಿಂದ ಮುಂಜಾಗರೂಕತೆ ತೆಗೆದುಕೊಂಡು ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕೆಂದು ಮಾನ್ಯ ಮುಖ್ಯ ಮಂತ್ರಿಯವರಲ್ಲಿ ಕೇಳಿಕೊಂಡು ಮೊನ್ನೆ ನಡೆದ ಸರ್ಕಸ್ ದುರಂತದಲ್ಲಿ ಸತ್ತವರ ಆತ್ಮಕ್ಕೆ ಶಾಂತಿ ಮತ್ತು ಅವರ ಕುಟುಂಬ ವರ್ಗದವರಿಗೆ ಮೃತರ ನಿಧನದಿಂದುಂಟಾಗಿರುವ ದುಃಖವನ್ನು ಭರಿಸಲು ಆ ಭಗವಂತನು ಸರ್ವ ಶಕ್ತಿಯನ್ನು ಕೊಡಲೆಂದು ಪ್ರಾರ್ಥಿಸಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಐ.ಪಿ.ಡಿ. ಸಾಲಪ್ಪ (ಬಿನ್ನಿ ಪೇಟೆ).—ಸನ್ಮಾನ್ಯ ಸಭಾಧ್ಯಕ್ಷರೆ, ಮೊನ್ನೆ ನಗರದಲ್ಲಿ ಸಂಭವಿಸಿದ "ವೀನಸ್ ಸರ್ಕಸ್"ನ ಧಾರುಣ ಘಟನೆ ಕೇವಲ ಬೆಂಗಳೂರು ನಗರವೇ ಅಲ್ಲ ಇಡೀ ಕರ್ನಾಟಕ ರಾಜ್ಯದಲ್ಲಿರತಕ್ಕ ಮುಕ್ಕೋಟಿ ಕನ್ನಡಿಗರೆಲ್ಲರೂ ಕಣ್ಣೀರು ಹಾಕುವಂಥಾದ್ದು. ನಾನು ಆಸ್ಪತ್ರೆಯಲ್ಲಿ ಸುಟ್ಟುಹೋಗಿದ್ದ ಜನರನ್ನು ಭೇಟಿ ಮಾಡಿದಾಗ ಕರುಳು ಕಿತ್ತುಬಂದು, ಹೃದಯ ಕರಗುವ ಭೀಕರ ಸನ್ನಿವೇಶ ತುಂಬಿತ್ತು. ಆದರೆ, ಈ ಘಟನೆ ಸಂಭವಿಸಿದ ತಕ್ಷಣ ಸರ್ಕಾರದವರು ಸೂಕ್ತ ಕ್ರಮ ತೆಗೆದುಕೊಂಡು ಸುಟ್ಟ ಜನರಿಗೆ ಬೇಕಾಗಿದ್ದ ಎಲ್ಲ ಸೌಲತ್ತುಗಳನ್ನು ಒದಗಿಸಿದ್ದುದನ್ನು ನೋಡಿ ನನಗೆ ಬಹಳ ಆನಂದವಾಯಿತು. ಈಗ ಸುಟ್ಟು ಗಾಯಗಳಾಗಿರುವವರ ಪೈಕಿ ಕೆಲವರು ಉಳಿಯಬಹುದು, ಇನ್ನು ಕೆಲವರು ಸಾಯಬಹುದು. ಆದ್ದರಿಂದ ನಾನು ತಮ್ಮಲ್ಲಿ ಕೇಳಿಕೊಳ್ಳುವುದೇನೆಂದರೆ, ಸಾಯದೆ ಉಳಿದುಕೊಂಡು ಅಂಗವಿಕಲರಾಗುವಂಥವರಿಗೆ ಶಾಶ್ವತ ಪರಿಹಾರವನ್ನು ಕಂಡುಹಿಡಿಯುವ ಮಹತ್ತರ ಜವಾಬ್ದಾರಿಯನ್ನು ಸರ್ಕಾರ ಹೊರಬೇಕು. ಈ ರೀತಿ ಬದುಕಿದ ಅಂಗವಿಕಲರಿಗೆ ಖಾಯಂ ಕೆಲಸಗಳನ್ನು ಒದಗಿಸುವ ವ್ಯವಸ್ಥೆಯನ್ನು ಮಾಡಿದರೆ ನಿಜವಾಗಿಯೂ ಸರ್ಕಾರ ಒಳ್ಳೆಯ ಕೆಲಸವನ್ನು ಮಾಡಿದಂತಾಗುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ಇಷ್ಟೇ ಅಲ್ಲದೆ ಸಾಯುವವರ ಹಾಗೂ ಸತ್ತಿರುವವರ ಕುಟುಂಬದವರಿಗೆ ಪೆನ್‌ಷನ್ ಕೊಡುವ ವ್ಯವಸ್ಥೆ ಮಾಡಿದರೆ ಸತ್ತವರ ಆತ್ಮಕ್ಕೂ ಒಂದು ಶಾಂತಿ ಸಿಕ್ಕುತ್ತದೆ. ಈಗಾಗಲೇ ಈ ಬೆಂಗಳೂರು ನಗರದಲ್ಲಿ ಅನೇಕ ದಾನಿಗಳು ಉದಾರ ಮನಸ್ಸಿನಿಂದ ದಾನ ನೀಡಲು ಮುಂದೆ ಬಂದಿದ್ದಾರೆ. ಅವರಿಂದ ದಾನಗಳನ್ನು ಸ್ವೀಕರಿಸಿ ನೊಂದವರಿಗೆ ಸಹಾಯ ಮಾಡಬೇಕು.

ಮಾನ್ಯ ಸಭಾಧ್ಯಕ್ಷರೆ, ಇದಕ್ಕೆ ಮುಂಚಿತವಾಗಿ ಈ ಸರ್ಕಸ್ ನಡೆಸಲು ಯಾವ ಅಧಿಕಾರಿ ಲೈಸೆನ್ಸ್ ಕೊಟ್ಟಿದ್ದಾರೆ, ಈ ದುರ್ಘಟನೆಗೆ ಮುಖ್ಯ ಕಾರಣ ಏನೆಂಬುದನ್ನು ನಿಷ್ಪಕ್ಷಪಾತವಾಗಿ ವಿಚಾರಣೆ ಮಾಡಿ ತಪ್ಪಿತಸ್ಥರ ವಿರುದ್ಧ ತೀವ್ರ ಕ್ರಮ ತೆಗೆದುಕೊಳ್ಳಬೇಕೆಂದು ಮಾನ್ಯ ಮುಖ್ಯ ಮಂತ್ರಿಯವರಲ್ಲಿ ಪ್ರಾರ್ಥಿಸಿಕೊಳ್ಳುದಲ್ಲದೆ, ಇನ್ನು ಮುಂದೆ ಇಂಥ ಪ್ರಕರಣಗಳು ಸಂಭವಿಸದಂತೆ ನೋಡಿಕೊಳ್ಳಬೇಕೆಂದೂ ಮತ್ತು ಅನೇಕ ಷೆಡ್ಡುಗಳು ಬರತಕ್ಕ ಕಡೆ ಉತ್ತಮ ಅಗ್ನಿಶಾಮಕ ದಳದ ವ್ಯವಸ್ಥೆ ಮಾಡಬೇಕೆಂದು ತಮ್ಮ ಮೂಲಕ ಮನವಿಮಾಡಿಕೊಂಡು, ಈ ಗಾಯಾಳುಗಳಿಗೆ ಉತ್ತಮ ಚಿಕಿತ್ಸಾ ಸೌಲಭ್ಯಗಳನ್ನು ಒದಗಿಸಲು

ವಿಶೇಷ ಕಾರ್ಯಕ್ರಮಗಳನ್ನು ಏನು ತೆಗೆದುಕೊಂಡಿದೆ ಅದಕ್ಕಾಗಿ ಸರ್ಕಾರದವರನ್ನು ವಂದಿಸುತ್ತೇನೆ. ಮತ್ತು ಮೃತರ ಆತ್ಮಗಳಿಗೆ ಚಿರಶಾಂತಿಯನ್ನೂ, ಹಾಗೂ ಮೃತರ ಅಗಲುವಿಕೆಯಿಂದ ಅವರ ಕುಟುಂಬ ದವರಿಗೆ ಉಂಟಾಗಿರತಕ್ಕ ದುಃಖವನ್ನು ಭರಿಸಲು ಆ ಪರಮಾತ್ಮನು ಸರ್ವ ಶಕ್ತಿಯನ್ನೂ ಕೊಡಲೆಂದು ಪ್ರಾರ್ಥಿಸಿ ನನಗೆ ಇಷ್ಟು ಮಾತನಾಡಲು ಅವಕಾಶ ಕಲ್ಪಿಸಿಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

SRI P. A. PAWASHE (Uchagaon).—Sir, everyone of us is very much grieved by the fire accident which has taken the lives of many children, women and men. But we are unable to do anything at this stage except extending our heart-felt sympathies to the families of those who have lost their beloveds. It is said that fire was accidental but according to many, the place wherein the Circus was allowed to display was not a suitable place for the purpose and without taking into consideration safety measures, licence was given to them. Who ever may be responsible for this, they must be held responsible. Any how, the Government has taken a bold decision to appoint an Enquiry Committee and as early as possible that Commission should start its work. So also, the Government as well as many voluntary institutions have come forward with help to those who are injured in the fire accident. The Government has declared that some amount will be paid to the fomilies of the deceased and injured. So also, one teacher from Magadi road who had rescued about 40 children from the fire accident should be awarded for his brave act. Sir, in this fire accident many persons have lost their lives. I pray God and may God give strength and courage to the families to bear their losses.

† ಶ್ರೀ ಆರ್. ಗುಂಡೂರಾವ್ (ಮಾನ್ಯ ಮುಖ್ಯ ಮಂತ್ರಿಯವರು).—ಸನ್ಮಾನ್ಯ ಅಧ್ಯಕ್ಷರೆ, ಮೊನ್ನೆ ದಿವಸ ನಡೆದಂಥ ವೀನಸ್ ಸರ್ಕಸ್ ಘಟನೆಯ ಬಗ್ಗೆ ನಾವು ಒಂದು ತೀರ್ಮಾನವನ್ನು ಕೈಗೊಂಡು ಸರ್ಕಾರ ನ್ಯಾಯಾಂಗ ತನಿಖೆ ಮಾಡುತ್ತದೆಂದು ಹೇಳಿದಮೇಲೆ ಯಾವ ವಿಚಾರಕ್ಕೆ ನಾವು ಇಲ್ಲಿ ಸೇರಿದ್ದೇವೆ ಅದು ಅಷ್ಟಕ್ಕೇ ಸೀಮಿತ ಆಗಬೇಕಾಗಿತ್ತು, ಆದರೆ ಅದು ಸೀಮಿತವಾಗಲಿಲ್ಲ. ದುರ್ದೈವದಿಂದ ನಮ್ಮ ರಾಜ್ಯದಲ್ಲಿ ಘಟನೆ ನಡೆದುಹೋಯಿತು. ಈಗ ಇದರ ಬಗ್ಗೆ ಏನು ಮಾಡಬೇಕೆಂದು ಯೋಚನೆ ಮಾಡು ತ್ತಿದ್ದೇವೆ. ನಾನಾದರೂ ಕೇಳಬಯಸುತ್ತೇನೆ, ಕಳೆದ ಒಂದೂವರೆ ತಿಂಗಳಿಂದಲೂ ಈ ಸರ್ಕಸ್ ನಡೆಯುತ್ತಿದ್ದರೂ ಇದರ ಬಗ್ಗೆ ಯಾರೂ ಕೂಡ ಬಾಯಿಬಿಟ್ಟು ಮಾತನಾಡಲಿಲ್ಲ. ಆದರೆ, ಈಗ ಅಕಸ್ಮಾತ್ತಾಗಿ ಈ ಘಟನೆ ಸಂಭವಿಸಿದ್ದರಿಂದ ಎಲ್ಲರೂ ಒಂದೊಂದು ರೀತಿ ಮಾತನಾಡುತ್ತಿದ್ದಾರೆ. ಇಂಥ ಯಾವುದೇ ಅಪಘಾತ ನಡೆದ ತಕ್ಷಣ ಇಷ್ಟುಬೇಗ ತೀರ್ಮಾನ ತೆಗೆದುಕೊಂಡಿರುವುದು ಎಂದರೆ ನಮ್ಮ ಸರ್ಕಾರ ಒಂದೇ ಎಂದು ಗಂಟಾಘೋಷವಾಗಿ ಹೇಳಬಯಸುತ್ತೇನೆ. ನಾನು ಈ ಘಟನೆ ನಡೆದ ಸ್ಥಳಕ್ಕೆ ಹೋಗಿ ನೋಡಿಕೊಂಡು ಬಂದಿದ್ದೇನೆ. ಸರ್ಕಾರೀ ಅಧಿಕಾರಿಗಳೂ ಕೂಡ ಹೋಗಿ ನೋಡಿಕೊಂಡು ಬಂದಿದ್ದಾರೆ. ಈ ಸರ್ಕಸ್‌ಗೆ ಯಾರು ಲೈಸೆನ್ಸ್ ಕೊಟ್ಟರು? ಹೇಗೆ ಕೊಟ್ಟರು; ಎನ್ನುವ ಬಗ್ಗೆ ಒಂದು ಜುಡಿಷಿಯಲ್ ಎನ್‌ಕ್ವೈರಿ ಮಾಡಬೇಕೆಂದು ನೀವೇ ಹೇಳುತ್ತಿದ್ದೀರಿ. ಅದನ್ನು ಮಾಡೋಣವೆಂದು ನಾವೂ ಒಪ್ಪಿಕೊಂಡಿದ್ದೇವೆ. ಯಾರಾದರೂ ಒಬ್ಬ ಹೈ ಕೋರ್ಟ್ ನ್ಯಾಯಾಧೀಶರಿಗೆ ಒಪ್ಪಿಸುವುದಾಗಿ ಹೇಳಿದ್ದೇವೆ. ಅಷ್ಟಾದರೂ ಇಲ್ಲಿ ನಾವು ನಾವೇ ಕೂತುಕೊಂಡು ತೀರ್ಮಾನ ತೆಗೆದುಕೊಳ್ಳುವುದಾದರೆ ಜುಡಿಷಿಯಲ್ ಎನ್‌ಕ್ವೈರಿಯನ್ನು ಮಾಡುವುದಾದರೂ ಏತಕ್ಕೆ ಬೇಕು? ಸರ್ಕಸ್ ಮ್ಯಾನೇಜರ್‌ರ ವರನ್ನು ಕೇಳಿದರೆ ಇದು ಹಾಗೆ ಆಗಿರಬಹುದು, ಹೀಗೆ ಆಗಿರಬಹುದೆಂದು ಹೇಳುತ್ತಾರೆ. ಮಲೆಯಾಳಂನಲ್ಲಿ ಒಂದು ಗಾದೆಯನ್ನು ಹೇಳುತ್ತಾರೆ. ಏನೆಂದರೆ. ಮಕ್ಕಳು ಅಲ್ಲ

ಗಲಾಟೆ ಮಾಡಬಹುದೇನೋ ಎಂದು ನಿನ್ನನ್ನು ಬಿಟ್ಟರೂ ರಾಜಕೀಯವನ್ನು ಬಿಡಲಾರೆ ಎನ್ನುವಂತೆ ಇಲ್ಲಿ ಕೆಲವರು ಯಾವ ಮಾತನಾಡಿದರೂ ಅದರಲ್ಲಿ ರಾಜಕೀಯ ತುಂಬಿ ಮಾತನಾಡುತ್ತಾರೆ. ಇವತ್ತೇ ಸಿಮ್ಲಾದಲ್ಲಿ ರಾಜಭವನ ಸುಟ್ಟು ಹೋಯಿತು. ಅದು ಏತಕ್ಕೆ ಸುಟ್ಟುಹೋಯಿತು ಎಂಬುದನ್ನು ತಿಳಿದುಕೊಳ್ಳಬೇಕು. ಅದುಬಿಟ್ಟು ರಾಜಕೀಯವಾಗಿ ಮಾತನಾಡಿದರೆ ಏನು ಪ್ರಯೋಜನ? ರಾಜ್ಯದಲ್ಲಿ ಎಲ್ಲಿಯೋ ಆಗಲಿ, ಯಾವ ಘಟನೆಯೋ ಆಗಲಿ, ಘಟನೆ ನಡೆದ ಸ್ಥಳಕ್ಕೆ ನಾನು ಹೋಗಿರುವಷ್ಟು ಬೇರೆ ಯಾವ ಮುಖ್ಯ ಮಂತ್ರಿಗಳೂ ಹೋಗಿಲ್ಲ. ಜನರೂ ಇದನ್ನು ನೋಡಿದ್ದಾರೆ. ಬೇಕಾದರೆ ತಮಗೆ ಒಂದು ಪಟ್ಟಿಯನ್ನೇ ಕೊಡುತ್ತೇನೆ. ಆರ್ಮಿ ಮೆಂಬರ್ಸ್‌ನ್ನು ನಾವು ಕರೆಸಬೇಕಾದರೆ this is a sort of dedication. After all it is an accident. Accident is an accident. ಈ ಸರ್ಕಸ್‌ಗೆ ಹೇಗೆ ಲೈಸೆನ್ಸ್ ಕೊಟ್ಟರು? ಕೊಟ್ಟವರು ಯಾರು? ಇನ್ನೂ ಮುಂತಾದ ಇಲ್ಲದ ಪ್ರಶ್ನೆಗಳನ್ನು ಹಾಕಿ ರಾಜಕೀಯ ಮಾಡುವುದಕ್ಕೆ ಪ್ರಯತ್ನ ಮಾಡುವುದಾದರೆ ನಾನೂ ಕೇಳಬೇಕಾಗುತ್ತದೆ. ಕೆಂಪೇಗೌಡ ರಸ್ತೆಯಲ್ಲಿ ಕಟ್ಟಿರತಕ್ಕ ಮುಕ್ಕಾಲು ಭಾಗಕ್ಕಿಂತ ಜಾಸ್ತಿ ಸಿನಿಮಾ ಥಿಯೇಟರುಗಳನ್ನು ಡಿಮಾಲಿಷ್ ಮಾಡಬೇಕಾಗುತ್ತದೆ. Let us have a separate debate on this issue. ಆ ಡೀಟೇಲ್ಸ್‌ಗೆ ನಾನು ಈಗ ಹೋಗುವುದಿಲ್ಲ. This is not the occasion to discuss about all these things. This is a meeting to condole the tragedy and what has happened and the relief we have given. You appreciate the appointment of judicial enquiry commttee ನಾವು ಡೀಟೇಲ್ಡ್ ಡಿಸ್ಕಷನ್‌ಗೆ ಹೋಗುವುದಾದರೆ ಕಳೆದ ೧೦ ವರ್ಷಗಳಿಂದ ಎಷ್ಟು ಟೆಂಟ್ಸ್‌ಗೆ ಲೈಸೆನ್ಸ್ ಕೊಟ್ಟಿದ್ದೀರಿ? ಒಂದರಪಕ್ಕದಲ್ಲೊಂದು ಥೀಯೇಟರ್ಸ್ ಇದ್ದರೂ ಮತ್ತೆ ಅವುಗಳ ಪಕ್ಕಪಕ್ಕದಲ್ಲೇ ಏತಕ್ಕೆ ಲೈಸೆನ್ಸ್ ಕೊಟ್ಟಿದ್ದೀರಿ? These are the things to be discussed. I am prepared for that. ನಾನೇ ನಿಮ್ಮನ್ನು ಕೇಳಿಕೊಳ್ಳುತ್ತಿರುತ್ತೇನೆ. ಅಂಥದ್ದರಲ್ಲಿ ಇಲ್ಲಿ ರಾಜಕೀಯ ಪ್ರಭಾವವಿದೆ ಎಂದು ಹೇಳಿದರೆ ಮಾನ್ಯ ಶಿವಯ್ಯನವರು ಮಾತನಾಡುತ್ತಾ ಹೇಳಿದ ಮಾತು ನೆನಪಿಗೆ ಬರುತ್ತದೆ. 'ತಾನು ಕಳ್ಳ ಆದರೆ ಪರರ ನಂಬ'' ಎಂಡಹಾಗೆ ಸತ್ತವರ ಆತ್ಮಕ್ಕೆ ಶಾಂತಿ ದೊರಕಲಿ ಎಂದು ಪ್ರಾರ್ಥಿಸಿಕೊಂಡು ೧೦ ನಿಮಿಷ ಚರ್ಚೆ ಮಾಡಿ ನ್ಯಾಯಾಂಗ ವಿಚಾರಣೆಯನ್ನು ಈ ವಿಚಾರದ ಬಗ್ಗೆ ಕೊಡಲೇ ಮಾಡಬೇಕೇ? ಹೈಕೋರ್ಟಿನವರನ್ನು ನೇಮಿಸಬೇಕೇ, ಇನ್ನೊಬ್ಬರನ್ನು ನೇಮಿಸಬೇಕೆ ಅದನ್ನೆಲ್ಲ ಇಲ್ಲಿ ಚರ್ಚೆ ಮಾಡಬೇಕಾಗಿದ್ದಾಗ ಲೈಸೆಸ್ಸ್ ಕೊಟ್ಟಿಲ್ಲ. ಎಂದೆಲ್ಲಾ ಹೇಳುವುದು ಸರಿಯಲ್ಲ We must put an end to such things. Are we discussing a political resolution on this issue? At leat I have come forward to conduct a judicial inquiry. There should be satisfaction for this. For every thing. ರಾಜಕೀಯ ಮಾಡುತ್ತಿದ್ದರೆ ಹೇಗೆ ಹತ್ತು ವರ್ಷದಲ್ಲಿ ಹಿಂದೆ ೩೦ ಸಿನಿಮಾ ಮಂದಿರಗಳಿಗೆ ಲೈಸೆನ್ಸ್ ಕೊಟ್ಟಿರುತ್ತಾರೆ. ಬಹಳ ವರ್ಷಗಳಿಂದಲೂ ಟೆಂಟ್‌ಗಳಿಗೆ ಲೈಸೆನ್ ಕೊಟ್ಟುಕೊಂಡು ಬಂದಿರುತ್ತಾರೆ. ಅದನ್ನೆಲ್ಲ ನೀವೇ ಹೇಳುವುದಾದರೆ ಸರ್ಕಾರ ಏತಕ್ಕೆ ಮುಂದೆ ಬರಬೇಕು.

ಶ್ರೀ ಎ. ಲಕ್ಷ್ಮೀಸಾಗರ್.— ನಾನು ಒಂದು ಮಾತನ್ನು ಹೇಳುತ್ತೇನೆ.

ಶ್ರೀ ಆರ್ ಗುಂಡೂರಾವ್.—ನೀವು ಮಾತನಾಡಿ ಆ ಮೇಲೆ ಕೇಳುತ್ತೇನೆ. ಮೊನ್ನೆತಾನೆ ಒಂದು ಘಟನೆ ನಡೆಯಿತು ಅದರಲ್ಲಿ ಮೂವತ್ತೆಂಟು ಜನರು ಸತ್ತರು ಅದಕ್ಕೆಲ್ಲ ಜ್ಯುಡಿಷಿಯಲ್ ಎನ್‌ಕ್ವಯರಿ ಮಾಡಿ ಎಂದರೆ ಹೀಗೆ? Accident is an accident. We should take it in that spirit. ತೀರಿ ಹೋದವರಿಗೆ ಕಂಡೋಲೆನ್ಸ್ ಮಾಡಣವೆಂದು ಹೇಳಿದಿರಿ. ಅದಕ್ಕೆ ನಾನು ಒಪ್ಪಿದೆ. ಮತ್ತು ಮಾನ್ಯ ಸ್ನೇಹಿತರಾದ ಚಂದ್ರಶೇಖರ್‌ರವರು, ಮತ್ತು ಮಾನ್ಯ ಜೀವರಾಜ ಆಳ್ವರಾರು ಈಗ ಏನು ಒಂದು ಸಾವಿರ ರೂಪಾಯಿಗಳನ್ನು ಪರಿಹಾರವಾಗಿ ಕೊಟ್ಟಿರುತ್ತೇವೆ ಅದು ಕಡಿಮೆ ಎಂದು ಹೇಳಿದರು. ಅದನ್ನು ಬೇಕಾದರೆ ಜಾಸ್ತಿಮಾಡಿ ಪರಿಶೀಲನೆ ಮಾಡೋಣ. ಅದರಲ್ಲಿ ಏನು ರಾಜಕೀಯ ಮಾಡುವುದು ಇರುತ್ತವೆ ಹತ್ತು ವರ್ಷಗಳಿಂದ ಏನೇನಾಗಿದೆ. ಯಾರು ಯಾರಿಗೆ ಲೈಸೆನ್ಸ್‌ಗಳನ್ನು ಕೊಟ್ಟಿದ್ದಾರೆ. ಯಾರುಯಾರು ರಾಜಕೀಯ ಮಾಡಿದ್ದಾರೆ ಅವನ್ನೆಲ್ಲ ಈವತ್ತಿನ ಪರಿಸ್ಥಿಯಲ್ಲಿ ಹೇಳತಕ್ಕಂಥದ್ದಲ್ಲ. ಈವತ್ತಿನ ಪರಿಸ್ಥಿತಿ ಈರೀತಿ ಆಗಬಾರದಿತ್ತು. ಸರ್ಕಸ್ ನಡೆಸಲು ಆ ಸ್ಥಳದಲ್ಲಿ ರೈಲ್ವೆಗೆ ಸಂಬಂಧಪಟ್ಟದ್ದು ಅವರು ಪರ್ಮಿಷನ್ ಕೊಟ್ಟಿದ್ದರೆ, ಕಾರ್ಪೊರೇಷನ್‌ನವರು ಪರ್ಮಿಷನ್ ಕೊಟ್ಟಿದ್ದರೆ,

ಪೋಲೀಸ್‌ನವರು ಪರ್ಮಿಷನ್ ಕೊಟ್ಟಿದ್ದರೆ ಇದೆಲ್ಲ ತಿಳಿಯಬೇಕು ಎನ್ನುವ ದೃಷ್ಟಿಯಿಂದಲೇ ಜ್ಯುಡಿಷಿಯಲ್ ಎನ್‌ಕ್ವಯರಿ ಮಾಡಬೇಕು ಎಂದು ನಾನು ಕೂಡ ಹೇಳುತ್ತಿರಬೇಕಾದರೆ, ರಾಜಕೀಯ ತಂದಿದ್ದೀರಿ ಎಂದರೆ ಇನ್ನೊಬ್ಬರು ಸತ್ತಾಗಲು ಅದರಲ್ಲೂ ರಾಜಕೀಯ ಪ್ರಭಾವವಿದೆ ಎಂದು ತಿಳಿದು ಕೊಳ್ಳಬೇಕಾಗುತ್ತದೆ.

ಶ್ರೀ ಡಿ. ದೇವರಾಜ ಅರಸ್.—ಒಂದು ವಿಚಾರವನ್ನು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಯಾವ ವಿಚಾರದಮೇಲೆ ಮಾತನಾಡುತ್ತಿದ್ದೀರಿ. ಜ್ಯುಡಿಷಿಯಲ್ ಎನ್‌ಕ್ವಯರಿ ಮಾಡುತ್ತೇವೆಂದು ಹೇಳಿದಕ್ಕೆ ಮಾಡುತ್ತೇವೆಂದು ಹೇಳಿದಮೇಲೆ ಅವರಿವರ ಕಥೆ ಏತಕ್ಕೆ ೧೦ ವರ್ಷಗಳಿಂದ ನಮ್ಮ ತಾತನಕಾಲದಲ್ಲಿ ಹೀಗಾಯಿತು, ಹಾಗಾಯಿತು, ರಾಜಕಾರಣ ಏನು ಮಾಡಿದ್ದೇವೆ. You may be a party for that. If you are not a party why are you.

SRI R.GUNDU RAO.—It is a condolence meeting. Judge your habits.

(*INTERRUPTIONS*)

SRI D. DEVARAJ URS. —I may rule again.

SRI R. GUNDU RAO.—You connot rule.

SRI D. DEVARAJ URS.—You won't be there for a long time. What is the idea? ಇದ್ದ ವಿಚಾರ ಇದೆ ಎಂದು ಹೇಳಿ. ಇಲ್ಲದಿದ್ದರೆ ಇಲ್ಲವೆಂದು ಹೇಳಿ.

SRI R. GUNDU RAO.—He has no patience to hear.

SRI D. DEVARAJ URS. —I know what you have said.

SRI R GUNDU RAO.—I have got a right. You must understand. He cannot charge.

SRI D. DEVARAJ URS.—You must not.

SRI R. GUNDU RAO.—You connot dictate, You have no right do that.

SRI D. DEVARAJ URS.—I am oppealing to the chair. The Hon goes on Chief Minister goeson charging. ಎನ್‌ಕ್ವಯರಿ ಕಮಿಷನ್ ಮಾಡಿರುವುದು ಸಮಾಧಾನ ಕರವಾಗಿದೆಎನ್‌ಕ್ವಯರಿ ಮಾಡುವಕಾಲದಲ್ಲಿ ರೆಫರೆನ್ಸ್ ಮಾಡುವುದಿಲ್ಲವೇ ಸ್ವಾಮಿ ರೆಫರೆನ್ಸ್‌ಮಾಡುವಾಗ ಸರ್ಕಾರಕ್ಕೆ ಅನುಕೂಲವಾಗುವ ರೀತಿಯಲ್ಲಿ ಇಂಥಿಂಥಫ್ಯಾಕ್ಟ್ ಅನುಮಾನ. ಪಬ್ಲಿಕ್‌ಗೆ ಅನುಮಾನ ಬರದರೀತಿಯಲ್ಲಿ ನೋಡಿಸಬೇಕೆಂದು ಹೇಳುತ್ತೇನೆ. ಒಂದುಕಡೆ ರಾಜಕಾರಣಬರುತ್ತದೆಂದು ಹೇಳುತ್ತೀರಿ ಒಂದುಕಡೆ ರಾಜಕೀಯ ಬೇಡವೆಂದು ಹೇಳುತ್ತೀರಿ.

ಶ್ರೀ ಆರ್. ಗುಂಡೂರಾವ್.—ತಾವು ಮೀಟಿಂಗ್‌ಗೆ ಬರುವುದಿಲ್ಲ. ಇಲ್ಲಿಬರುತ್ತೀರಿ ಮಾತನಾಡಿ ಬಿಟ್ಟು ಹೋಗಿಬಿಡುತ್ತೀರಿ. ಸಮಾಧಾನವಾಗಿ ಕೇಳಿ ನಾನು ಏನು ಹೇಳುತ್ತಿದ್ದೇನೆ ಎಂದರೆ.

ಶ್ರೀ ಡಿ. ದೇವರಾಜ ಅರಸ್.—ನೀವು ಹೇಳಿದ್ದನ್ನು ಕೇಳುವುದಕ್ಕೆ ಕುಳಿತಿದ್ದೇವೆ, ನೀವು ಮಾತ ನಾಡುವಾಗ ನಿಮ್ಮದು ಯಾವುದೇ ಹಿಂದಿನ ಕತೆ ತೆಗೆದುಕೊಂಡು ಹೇಳುತ್ತಿದ್ದರೆ ನಾವು ಕೇಳುವುದಕ್ಕೆ ತಯಾರಿಲ್ಲ ರಾಜಕಾರಣವಿದ್ದರೆ, ಕಮಿಷನ್ ಆಫ್ ಎನ್‌ಕ್ವಯರಿಂಗ್ ಹಾಕಿ.

ಶ್ರೀ ಆರ್. ಗುಂಡೂರಾವ್.—ನಾನು ಹೇಳುವುದೇನೆಂದರೆ ಬೆಂಕಿಯಲ್ಲಿ ಸಿಕ್ಕಿ ಮರಣಹೊಂದಿದವರಿಗೆ ಕಂಡೋಲೆನ್ಸ್ ರೆಸಲ್ಯೂಷನ್ ಪಾಸ್‌ಮಾಡಬೇಕು. ಇದರಲ್ಲಿ ಯಾವ ಪಕ್ಷಬೇದವನ್ನು ಇಟ್ಟುಕೊಳ್ಳ ಬಾರದು, ಪ್ರತಿಯೊಬ್ಬರೂ ಈ ಒಂದು ದುರ್ಘಟನೆಯಬಗ್ಗೆ ಅನುಕಂಪವನ್ನು ವ್ಯಕ್ತಪಡಿಸಬೇಕು, ಅದಕ್ಕಾಗಿ ಸಭೆಯನ್ನು ಕರೆದಿರುತ್ತೇವೆಂದು ಹೇಳಿದರೆ ಲೈಸೆನ್ಸ್ ಕೊಟ್ಟಿಲ್ಲ, ರಾಜಕೀಯ ಮಾಡಿರುತ್ತಾ ರೆಂದು ಹೀಗೆಲ್ಲ ಹೇಳಿದರೆ...

ಶ್ರೀ ಡಿ. ದೇವರಾಜ ಅರಸ್. ಲೈಸೆನ್ಸ್ ಕೊಟ್ಟಿಲ್ಲವೆಂದರೆ ಅದಕ್ಕೇತಕ್ಕೆ ಕೋಪಮಾಡಿಕೊಳ್ಳಬೇಕು.

ಶ್ರೀ ಆರ್. ಗುಂಡೂರಾವ್.—ತಪ್ಪು ಮಾಡುವುದು ನಾವು ಇರಲಿ ನೀವು ಇರಲಿ ತಪ್ಪು ಮಾಡುವಾಗ...

ಶ್ರೀ ಹೆಚ್. ಡಿ. ದೇವೇಗೌಡ.—ಕಂಡೋಲೆನ್ಸ್ ಮಾಡುವಾಗ ರಾಜಕೀಯ ಬೇಡ ರಾಜಕೀಯ ಮಾಡುವುದಕ್ಕೆ ಕುಳಿತಿಲ್ಲ ದಯವಿಟ್ಟು ಹೇಳುತ್ತೇನೆ ಸತ್ತವರಿಗೆ ಶಾಂತಿ ನಿರೀಕ್ಷಣೆ ಮಾಡಿ. ಪೈಪೋಟಿ ಬೇಡ. ಅದಕ್ಕೆ ಬೇರೆ ಅಖಾಡ ಇದೆ.

ಶ್ರೀ ಆರ್. ಗುಂಡೂರಾವ್.—ಸತ್ತವರಿಗೆ ಶಾಂತಿ ಸಿಗಲಿ ಎನ್ನುವುದು ಎಲ್ಲರಭಾವನೆಯಾಗಿರುತ್ತದೆ. ಯಾರಿಗೆ ಮಕ್ಕಳು ಸತ್ತರೆ ದುಃಖವಾಗುವುದಿಲ್ಲ. ಸಾವಿರಾರು ಜನ ರಕ್ತ ಕೊಟ್ಟಿದ್ದಾರೆ. ಪ್ರತಿಯೊಬ್ಬರು ಕೈಲಾದ ಸಹಾಯ ಮಾಡಿದ್ದಾರೆ. ಸರ್ಕಾರ ಜ್ಯುಡಿಶಿಯಲ್ ಎನ್‌ಕ್ವಯರಿಂಗ್ ಒಪ್ಪಿದೆ. ಏನೋ ನಡೆಯಬಾರದ್ದು ನಡೆದುಹೋಗಿರಂತ್ತದೆ.

ಶ್ರೀ ಪಿ. ರಾಮದೇವ್.—ಆಗಿರತಕ್ಕಂಥ ವಿಚಾರವನ್ನು ಸರ್ಕಾರದ ಗಮನಕ್ಕ ತರಬೇಡವೇ?

ಶ್ರೀ ಎ. ಲಕ್ಷ್ಮೀಸಾಗರ್.—ಸರ್ಕಾರದ ಮೇಲೆ ಆಪಾದನೆ ಮಾಡಬೇಕೆಂದು ಹೇಳುತ್ತಿಲ್ಲ. ದುರ್ಘಟನೆ ನಡೆದ ಸ್ಥಳ ಗಮನಕ್ಕೆ ತೆರೆದುಕೊಂಡರೆ ಪರವಾನಿಗೆ ಕೊಡತಕ್ಕಂಥ ಸನ್ನಿವೇಶವೇ ಇರಲಿಲ್ಲ, ಆದುದರಿಂದ ಇದರಲ್ಲಿ ರಾಜಕೀಯ ಒತ್ತಡ ಇರಬೇಕೆಂದು ಕಾಣುತ್ತದೆ. ಅದನ್ನು ನೀವು ಪರಿಶೀಲನೆ ಮಾಡಲು ಗಮನದಲ್ಲಿಟ್ಟುಕೊಳ್ಳಬೇಕೆಂದು ಹೇಳುತ್ತಿದ್ದೇವೆ.

ಅಧ್ಯಕ್ಷರು.—ಎನ್‌ಕ್ವಯರಿ ಮಾಡುವಾಗ ಅದೆಲ್ಲ ಬಂದೇ ಬರುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.—ನಮ್ಮ ಅಭಿಪ್ರಾಯವನ್ನು ಹೇಳಬೇಡವೆ. ಅವರ ಮೇಲೆ ಚಾರ್ಜ್ ಮಾಡುತ್ತಿದ್ದೇವೆಯೇ? ಸರ್ಕಾರದಮೇಲೆ ಚಾರ್ಜ್‌ಮಾಡಿದ್ದೇವೆಯೇ?

3-30 P.M.

SRI A LAKSHMISAGAR.—We expressed our fears about the manner and the circumstance under which the licence was granted to the circus having regard to the situation of the place where the circus was exhibited. It is the place where any sensible man the could have refused the licence.

SRI D. DEVARAJ URS.—Why are we here? Why is he getting angry, I do not know......

ಅಧ್ಯಕ್ಷರು.—ಮಾನ್ಯ ಮುಖ್ಯಮಂತ್ರಿಗಳು ನ್ಯಾಯಾಂಗ ತನಿಖೆಗೆ ಒಪ್ಪಿಕೊಂಡಿದ್ದಾರೆ. ಮಾನ್ಯ ಸದಸ್ಯರು ಕೊಡುವ ಸಲಹೆಗಳನ್ನು ಗಮನವಿಟ್ಟು ಕೇಳುತ್ತೇನೆನ್ನುವ ಮಾತನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ.

ಶ್ರೀ ಡಿ. ದೇವರಾಜ ಅರಸ್.—ನಾವು ಇಲ್ಲಿ ಇರುವುದು ಏಕೆ ಸ್ವಾಮಿ? ಅದನ್ನು ಅವರು ಹೇಳಲಿ?

ಅಧ್ಯಕ್ಷರು.—ಏನು ಮಾಡಬೇಕೆಂದು ಹೇಳಿ, ಅವರು ಕೇಳಿಸಿಕೊಳ್ಳುತ್ತಾರೆ.

ಶ್ರೀ ಡಿ. ದೇವರಾಜ ಅರಸ್.—ನಾವು ಹೇಳುವುದಕ್ಕೆ ಬೆಲೆಯಿಲ್ಲದಂತಾದರೆ......

ಅಧ್ಯಕ್ಷರು.—ಆ ಮಾತು ಸರಿಯಲ್ಲ.

ಶ್ರೀ ಡಿ. ದೇವರಾಜ ಅರಸ್.—ನಾನು ಹಿಂದೆ ಏನು ಮಾಡಿದೆ ಏನು ಬಿಟ್ಟೆ ಎಂಬುದು ಪ್ರಶ್ನೆ ಅಲ್ಲ. ನಮಗೆ ಗೊತ್ತಾಗಿರುವುದು ಇಂತಹದ್ದು ಎಂದು ನಾವು ಅವರ ಗಮನಕ್ಕೆ ತರುತ್ತಿದ್ದೇವೆ. ಅವರು ನ್ಯಾಯಾಂಗ ತನಿಖೆ ಮಾಡಿಸುತ್ತೇವೆಂದು ಹೇಳಿದ್ದರಿಂದ ನಾವು ಈ ವಿಷಯಗಳನ್ನೆಲ್ಲಾ ಗಮನಕ್ಕೆ ತರುತ್ತಿದ್ದೇವೆ. ನಮ್ಮ ಕೆಲಸ ಏನು ಸ್ವಾಮಿ?

ಅಧ್ಯಕ್ಷರು.—ಈ ಬಗ್ಗೆ ಸದನದಲ್ಲಿ ಪ್ರಸ್ತಾಪ ಆಗಿದೆ. ಮಾನ್ಯ ಮುಖ್ಯ ಮಂತ್ರಿಗಳು ನ್ಯಾಯಾಂಗ ತನಿಖೆಗೆ ತಮ್ಮ ಒಪ್ಪಿಗೆಯನ್ನು ಕೊಟ್ಟಿದ್ದಾರೆ.

SRI D. DEVARAJ URS.—Issue of licences does not come to the notice of the Chief Minister, I know. But sometimes at lower levels certain things will have heppened. ಇಂತಿಂತಹದ್ದು ಆಗಿರಬಹುದೆಂದು ಅನುಮಾನ ಇದೆ. ಪತ್ರಿಕೆಯವರೂ ಸಹಾ ಎಲ್ಲವನ್ನೂ ತಿಳಿದು ಬರೆದಿದ್ದಾರೆಂದು ಹೇಳಿದರೆ ನೀವು ಸುಮ್ಮನೆ ಅವರ ಮೇಲೆ ಕೋಪ ಮಾಡಿದರೆ ಅರ್ಥವಾಗುವುದಿಲ್ಲ.

ಶ್ರೀ ಆರ್. ಗುಂಡೂರಾವ್.—ನಾನು ಕೋಪ ಮಾಡಬೇಕೆಂದು ಹೇಳಿದ್ದಲ್ಲ. ಈ ಒಂದು ವಿಚಾರವನ್ನು ನಾವು ಗಹನವಾಗಿ ಚರ್ಚೆ ಮಾಡುತ್ತಿದ್ದೇವೆ. ಇಲ್ಲಿ ನಾವು ಶಾಂತಿ ಸೌಹಾರ್ದದಿಂದ ಈ ಒಂದು ದುರ್ಘಟನೆಯ ಬಗ್ಗೆ ಚರ್ಚೆ ಮಾಡಲು ಸೇರಿರುವಾಗ ಏತಕ್ಕೋಸ್ಕರ...

ಶ್ರೀ ಡಿ. ದೇವರಾಜಅರಸ್.—ಏನಾಯಿತು?

ಶ್ರೀ ಆರ್. ಗುಂಡೂರಾವ್.—ರಾಜಕೀಯ ತಂದಿರಬಹುದು, ಹಾಗೆ ಹೀಗೆ ಎಂದು...

ಶ್ರೀ ಡಿ. ದೇವರಾಜಅರಸ್.—ಲೈಸೆನ್ಸ್ ಕೊಡುವಾಗ ರಾಜಕೀಯ ಪ್ರಭಾವ ಇದ್ದಿರಬಹುದೆಂದು ಹೇಳಿರುತ್ತಾರೆ.

ಶ್ರೀ ಆರ್. ಗುಂಡೂರಾವ್.—ತಮ್ಮ ಅನುಮಾನವನ್ನು ಹೇಳಿದ್ದೀರಿ. ಆದ್ದರಿಂದಲೇ ನ್ಯಾಯಾಂಗ ತನಿಖೆಗೆ ಒಪ್ಪಿಗೆಯನ್ನು ನೀಡಲಾಗಿದೆ. ಈ ಒಂದು ವಿಷಯದ ಮೇಲೆ ಚರ್ಚೆ ಮಾಡಬೇಕೆಂದಾಗ ಇದೆಲ್ಲಾ...

ಶ್ರೀ ಜೆ. ಎಚ್. ಪಟೇಲ್.—ಇವರು ಹೇಳಿದ್ದೂ ಸರಿ, ಅವರು ಹೇಳಿದ್ದೂ ಸರಿ, ಆದರೆ ಇಲ್ಲಿ ತಾಪದ ಬದಲು ಕೋಪ ಏಕೆ ಬಂತು?

ಶ್ರೀ ಆರ್. ಗುಂಡೂರಾವ್.—ಮಾನ್ಯ ಸದಸ್ಯರು ಕೊಟ್ಟ ಸಲಹೆಗಳನ್ನು ನಾನು ಗಮನದಲ್ಲಿ ಇಟ್ಟು ಕೊಂಡಿದ್ದೇನೆ. ಈ ಬಗ್ಗೆ ನ್ಯಾಯಾಂಗ ತನಿಖೆಯಾಗಬೇಕೆಂದು ನಾವು ಕಾರ್ಯಕ್ರಮ ಕೈಗೊಂಡಿದ್ದೇವೆ. ಈ ದುರಂತದ ಬಗ್ಗೆ ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಅಪಘಾತಗಳು ಬೇಕಾದಷ್ಟು ಆಗುತ್ತವೆ ಇಂತಹ ಕಾರಣಕ್ಕೇ ಇಂತಹ ಅಪಘಾತ ಆಗಿದೆ ಎಂದು ಹೇಳುವುದಕ್ಕೆ ಬರುವುದಿಲ್ಲ. ಹಿಮಾಚಲ ಪ್ರದೇಶದಲ್ಲಿ ಅಂತಹ ಚಳಿಯಲ್ಲಿಯೇ ರಾಜಭವನ ಸುಟ್ಟುಹೋಯಿತು. ಇಂತಹ ಅಪಘಾತಗಳು ಆದಾಗ ಪ್ರತಿಯೊಬ್ಬರೂ ದುಃಖಪಡುತ್ತಾರೆ. ಆದರೆ ಏನೂ ಮಾಡುವುದಕ್ಕಾಗುವುದಿಲ್ಲ. ಈ ನ್ಯಾಯಾಂಗ ತನಿಖೆಗೆ ನ್ಯಾಯಾಧೀಶರನ್ನು ನೇಮಕ ಮಾಡುವುದಕ್ಕೆ ಉಚ್ಚನ್ಯಾಯಾಲಯದವರನ್ನು ಕೇಳಿ ಕೊಳ್ಳುತ್ತೇನೆ. ಆ ತನಿಖೆ ನಡೆದು ತೀರ್ಪು ಬಂದಮೇಲೆ ಏನು ಕಾರ್ಯಕ್ರಮ ಕೈಗೊಳ್ಳಬೇಕೆಂಬುದನ್ನು ಸರ್ಕಾರ ಆಲೋಚನೆ ಮಾಡುತ್ತದೆ.

Election to Senate of Mysore University

MR. SPEAKER.—In connection with the election to the Senate of the Mysore University as the number of nominations is equal to the number of places to be filled, the following members have been declared elected to the Senate of the Mysore University and there will be no election in this behalf.